# ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ,1934

**(1934 ರ ಅಧಿನಿಯಮ ಸಂಖ್ಯೆ 2)**

**[12-6-2003 ರ ಭಾರತ ರಾಜಪತ್ರದ IXನೇ ಭಾಗದ, 1 ನೇ ವಿಭಾಗದ, 25 ನೇ ಸಂಪುಟದ, 1 ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 95 ರಿಂದ 146 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ- I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ- II
### ನಿಗಮನ, ಬಂಡವಾಳ, ವ್ಯವಸ್ಥಾಪನೆ ಮತ್ತು ವ್ಯವಹಾರ

3. ರಿಸರ್ವ್ ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ
4. ಬ್ಯಾಂಕಿನ ಬಂಡವಾಳ
5. ಷೇರು ಬಂಡವಾಳದ ಹೆಚ್ಚಳ ಮತ್ತು ಇಳಿತ
6. ಕಛೇರಿಗಳು, ಶಾಖೆಗಳು ಮತ್ತು ಏಜೆನ್ಸಿಗಳು
7. ವ್ಯವಸ್ಥಾಪನೆ
8. ಕೇಂದ್ರ ಮಂಡಳಿಯ ರಚನೆ ಮತ್ತು ನಿರ್ದೇಶಕರ ಪದಾವಧಿ
9. ಸ್ಥಳೀಯ ಮಂಡಳಿಗಳು, ಅವುಗಳ ರಚನೆ ಮತ್ತು ಪ್ರಕಾರ್ಯಗಳು
10. ಸ್ಥಳೀಯ ಮಂಡಳಿಗಳ ನಿರ್ದೇಶಕರು ಮತ್ತು ಸದಸ್ಯರ ಅನರ್ಹತೆಗಳು
11. ಪದದಿಂದ ತೆಗೆದುಹಾಕುವುದು ಮತ್ತು ಪದವನ್ನು ಖಾಲಿಮಾಡುವುದು
12. ಆಕಸ್ಮಿಕ ಖಾಲಿ ಸ್ಥಾನಗಳು ಮತ್ತು ಗೈರುಹಾಜರಿಗಳು
13. ಕೇಂದ್ರ ಮಂಡಳಿಯ ಸಭೆಗಳು
14. [ನಿರಸಿತ] 15. [ನಿರಸಿತ] 16. [ನಿರಸಿತ]
17. ಬ್ಯಾಂಕು ನಡೆಸಬಹುದಾದಂಥ ವ್ಯವಹಾರ
18. ನೇರ ಮುಂಗಡ ಮುರಿಕೆಯ ಅಧಿಕಾರ
18ಎ. ಸಾಲ ಅಥವಾ ಮುಂಗಡದ ಸಿಂಧುತ್ವವನ್ನು ಪ್ರಶ್ನಿಸತಕ್ಕುದಲ್ಲ
19. ಬ್ಯಾಂಕು ವ್ಯವಹರಿಸಲಾಗದಂಥ ವ್ಯವಹಾರ

## ಅಧ್ಯಾಯ- III
## ಕೇಂದ್ರ ಬ್ಯಾಂಕಿನ ಪ್ರಕಾರ್ಯಗಳು


20. ಸರ್ಕಾರದ ವ್ಯವಹಾರವನ್ನು ನಡೆಸುವುದು ಬ್ಯಾಂಕಿನ ಹೊಣೆ

20ಎ. [* * * * *]

21. ಬ್ಯಾಂಕು, ಭಾರತದಲ್ಲಿ ಸರ್ಕಾರದ ವ್ಯವಹಾರವನ್ನು ನಡೆಸುವ ಹಕ್ಕನ್ನು ಹೊಂದಿರತಕ್ಕುದು

21ಎ. ಬ್ಯಾಂಕು ಒಪ್ಪಂದವನ್ನು ಮಾಡಿಕೊಂಡ ಮೇಲೆ ರಾಜ್ಯ ಸರ್ಕಾರದ ವ್ಯವಹಾರವನ್ನು ನಡೆಸತಕ್ಕುದು

21ಬಿ. 1956ರ ನವೆಂಬರ್ 1ಕ್ಕಿಂತ ಮುಂಚೆ ಬ್ಯಾಂಕು ಮತ್ತು ಕೆಲವು ರಾಜ್ಯಗಳ ನಡುವೆ ಮಾಡಿಕೊಂಡ ಒಪ್ಪಂದಗಳ ಪರಿಣಾಮ

22. ಬ್ಯಾಂಕು ನೋಟುಗಳನ್ನು ಹೊರಡಿಸುವ ಹಕ್ಕು

23. ಹೊರಡಿಸುವ ಇಲಾಖೆ

24. ನೋಟುಗಳ ವರ್ಗಗಳು

25. ಬ್ಯಾಂಕು ನೋಟುಗಳ ನಮೂನೆ

26. ನೋಟುಗಳ ಕಾನೂನು ಸಮ್ಮತ ಚಲಾವಣೆ ಹಣದ ಸ್ವರೂಪ

26ಎ. ಕೆಲವು ಬ್ಯಾಂಕು ನೋಟುಗಳು ಕಾನೂನು ಸಮ್ಮತ ಚಲಾವಣೆ ಹಣವಾಗಿರುವುದು ನಿಂತುಹೋಗತಕ್ಕುದು

27. ನೋಟುಗಳನ್ನು ಪುನಃ ಹೊರಡಿಸುವುದು

28. ಕಳೆದುಹೋದ, ಕಳುವಾದ, ವಿಕೃತಗೊಂಡ ಅಥವಾ ಅಪರಿಪೂರ್ಣ ನೋಟುಗಳ ವಸೂಲಿ

28ಎ. ಕೆಲವು ಸಂದರ್ಭಗಳಲ್ಲಿ ವಿಶೇಷ ಬ್ಯಾಂಕು ನೋಟುಗಳು ಮತ್ತು ವಿಶೇಷ ಒಂದು ರೂಪಾಯಿ ನೋಟುಗಳನ್ನು ಹೊರಡಿಸುವುದು

29. ಬ್ಯಾಂಕು ನೋಟುಗಳ ಮೇಲಿನ ಸ್ಟಾಂಪು ಸುಂಕದಿಂದ ಬ್ಯಾಂಕು ವಿನಾಯಿತಿಯನ್ನು ಹೊಂದಿರತಕ್ಕುದು

30. ಕೇಂದ್ರ ಮಂಡಳಿಯನ್ನು ರದ್ದು ಮಾಡಲು ಕೇಂದ್ರ ಸರ್ಕಾರದ ಅಧಿಕಾರಗಳು

31. ತಗಾದೆ ಬಿಲ್ಲುಗಳು ಮತ್ತು ನೋಟುಗಳನ್ನು ಹೊರಡಿಸುವುದು

32. [ನಿರಸಿತ]

33. ಹೊರಡಿಸುವ ಇಲಾಖೆಯ ಆಸ್ತಿಗಳು

34. ಹೊರಡಿಸುವ ಇಲಾಖೆಯ ಹೊಣೆಗಾರಿಕೆಗಳು

35. [ನಿರಸಿತ]

36. [ನಿರಸಿತ]

37. ವಿದೇಶಿ ಭದ್ರತಾ ಪತ್ರಗಳ ಬಗೆಗಿನ ಆಸ್ತಿಗಳ ಅಗತ್ಯತೆಯನ್ನು ಅಮಾನತುಗೊಳಿಸುವುದು

38. ರೂಪಾಯಿ ನಾಣ್ಯಕ್ಕೆ ಸಂಬಂಧಿಸಿದಂತೆ ಸರ್ಕಾರ ಮತ್ತು ರಿಸರ್ವ್ ಬ್ಯಾಂಕಿನ ಹೊಣೆಗಳು

39. ವಿವಿಧ ಬಗೆಯ ಕರೆನ್ಸಿಯನ್ನು ಸರಬರಾಜು ಮಾಡುವ ಬಗ್ಗೆ ಹೊಣೆ

40. ವಿದೇಶಿ ವಿನಿಮಯದಲ್ಲಿನ ವ್ಯವಹಾರಗಳು

41. [ನಿರಸಿತ]

41ಎ. [ನಿರಸಿತ]
42. ಅನುಸೂಚಿತ ಬ್ಯಾಂಕುಗಳ ನಗದು ಮೀಸಲುಗಳನ್ನು ಬ್ಯಾಂಕಿನಲ್ಲಿ ಇಡತಕ್ಕುದು
43. ಬ್ಯಾಂಕಿನಿಂದ ಕ್ರೋಡೀಕೃತ ವಿವರ ಪತ್ರದ ಪ್ರಕಟಣೆ
43ಎ. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ
44. [ನಿರಸಿತ]
45. ಏಜೆಂಟರ ನೇಮಕಾತಿ

## ಅಧ್ಯಾಯ- III ಎ

## ಸಾಲದ ಬಗ್ಗೆ ಮಾಹಿತಿಯ ಸಂಗ್ರಹಣೆ ಮತ್ತು ಅದನ್ನು ಒದಗಿಸುವುದು

45ಎ. ಪರಿಭಾಷೆಗಳು
45ಬಿ. ಸಾಲದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಬ್ಯಾಂಕಿನ ಅಧಿಕಾರ
45ಸಿ. ಸಾಲದ ಬಗ್ಗೆ ಮಾಹಿತಿಯನ್ನು ಒಳಗೊಂಡಿರುವ ವಿವರಪಟ್ಟಿಕೆಗಳಿಗಾಗಿ ಕೋರುವ ಅಧಿಕಾರ
45ಡಿ. ಬ್ಯಾಂಕಿಂಗ್ ಕಂಪನಿಗಳಿಗೆ ಸಾಲದ ಬಗ್ಗೆ ಮಾಹಿತಿಯನ್ನು ಒದಗಿಸುವುದಕ್ಕಾಗಿನ ಪ್ರಕ್ರಿಯೆ
45ಇ. ನಿಷೇಧಿಸಲಾದ ಮಾಹಿತಿಯನ್ನು ಬಹಿರಂಗಪಡಿಸುವುದು
45ಎಫ್. ನಷ್ಟ ಪರಿಹಾರಕ್ಕಾಗಿನ ಕೆಲವು ಕ್ಲೇಮುಗಳ ಪ್ರತಿಷೇಧ
45ಜಿ. [ನಿರಸಿತ]

## ಅಧ್ಯಾಯ-III ಬಿ

## ಠೇವಣಿಗಳನ್ನು ಸ್ವೀಕರಿಸುವ ಬ್ಯಾಂಕೇತರ ಸಂಸ್ಥೆಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಉಪಬಂಧಗಳು

45ಎಚ್. III ಬಿ ಅಧ್ಯಾಯವು ಕೆಲವು ಸಂದರ್ಭಗಳಲ್ಲಿ ಅನ್ವಯಿಸತಕ್ಕುದಲ್ಲ
45ಐ. ಪರಿಭಾಷೆಗಳು
45ಐಎ. ನೋಂದಣಿಯ ಮತ್ತು ನಿವ್ವಳ ಸ್ವಂತ ನಿಧಿಯ ಅಗತ್ಯತೆ
45ಐಬಿ. ಆಸ್ತಿಗಳ ಶೇಕಡಾವಾರು ನಿರ್ವಹಣೆ
45ಐಸಿ. ಮೀಸಲು ನಿಧಿ
45ಜೆ. ಬ್ಯಾಂಕು, ಹಣದ ಠೇವಣಿಗಳನ್ನು ಕೋರುವ ವಿವರಣ ಪತ್ರಿಕೆ ಅಥವಾ ಜಾಹೀರಾತನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದು
45ಜೆಎ. ಕಾರ್ಯನೀತಿಯನ್ನು ನಿರ್ಧರಿಸಲು ಮತ್ತು ನಿರ್ದೇಶನಗಳನ್ನು ನೀಡಲು ಬ್ಯಾಂಕಿನ ಅಧಿಕಾರ
45ಕೆ. ಠೇವಣಿಗಳ ಬಗ್ಗೆ ಬ್ಯಾಂಕೇತರ ಸಂಸ್ಥೆಗಳಿಂದ ಮಾಹಿತಿಯನ್ನು ಸಂಗ್ರಹಿಸಲು ಮತ್ತು ನಿರ್ದೇಶನಗಳನ್ನು ಕೊಡಲು ಬ್ಯಾಂಕಿನ ಅಧಿಕಾರ
45ಎಲ್. ಹಣಕಾಸು ಸಂಸ್ಥೆಗಳಿಂದ ಮಾಹಿತಿಯನ್ನು ತರಿಸಿಕೊಳ್ಳಲು ಮತ್ತು ಅವುಗಳಿಗೆ ನಿರ್ದೇಶನಗಳನ್ನು ಕೊಡಲು ಬ್ಯಾಂಕಿನ ಅಧಿಕಾರ

45ಎಂ. ಬ್ಯಾಂಕಿಗೆ ಅಗತ್ಯವಾದ ವಿವರಪತ್ರಗಳು ಮುಂತಾದವುಗಳನ್ನು ಒದಗಿಸಲು ಬ್ಯಾಂಕೇತರ ಸಂಸ್ಥೆಗಳ ಕರ್ತವ್ಯ

45ಎಂಎ. ಲೆಕ್ಕ ಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು

45ಎಂಬಿ. ಠೇವಣಿಗಳನ್ನು ಸ್ವೀಕರಿಸಲು ಮತ್ತು ಆಸ್ತಿಗಳ ಪರಭಾರೆಯನ್ನು ನಿಷೇಧಿಸಲು ಬ್ಯಾಂಕಿನ ಅಧಿಕಾರ

45ಎಂಸಿ. ಪರಿಸಮಾಪನ ಅರ್ಜಿಸಲ್ಲಿಸಲು ಬ್ಯಾಂಕಿನ ಅಧಿಕಾರ

45ಎನ್. ಪರಿಶೀಲನೆ

45ಎನ್ಎ. ಅಧಿಕೃತಗೊಳಿಸಿದ ವ್ಯಕ್ತಿಗಳು ಠೇವಣಿಗಳನ್ನು ಕೋರತಕ್ಕುದಲ್ಲ

45ಎನ್ಬಿ. ಮಾಹಿತಿ ಬಹಿರಂಗ ಪಡಿಸುವುದು

45ಎನ್ಸಿ. ವಿನಾಯಿತಿ ನೀಡಲು ಬ್ಯಾಂಕಿನ ಅಧಿಕಾರ

45ಒ. [ನಿರಸಿತ]

45ಪಿ. [ನಿರಸಿತ]

45ಕ್ಯೂ. III ಬಿ ಅಧ್ಯಾಯವು ಇತರ ಕಾನೂನುಗಳನ್ನು ಅಧ್ಯಾರೋಹಿಸತಕ್ಕುದು

45ಕ್ಯೂಎ. ಠೇವಣಿ ಮರುಸಂದಾಯವನ್ನು ಆದೇಶಿಸಲು ಕಂಪನಿ ಕಾನೂನು ಮಂಡಲಿಯ ಅಧಿಕಾರ

45ಕ್ಯೂಬಿ. ಠೇವಣಿದಾರರಿಂದ ನಾಮನಿರ್ದೇಶನ.

## ಅಧ್ಯಾಯ – III ಸಿ

## ನಿಗಮಿತವಾಗಿಲ್ಲದ ನಿಕಾಯಗಳಿಂದ ಠೇವಣಿಗಳ ಅಂಗೀಕಾರದ ಬಗ್ಗೆ ನಿಷೇಧ

45ಆರ್. ಅರ್ಥ ವಿವರಣೆ

45ಎಸ್. ಕೆಲವು ಸಂದರ್ಭಗಳಲ್ಲಿ ಠೇವಣಿಗಳನ್ನು ಸ್ವೀಕರಿಸದಿರುವುದು

45ಟಿ. ಶೋಧನಾ ವಾರಂಟುಗಳನ್ನು ಹೊರಡಿಸುವ ಅಧಿಕಾರ

## ಅಧ್ಯಾಯ– IV

## ಸಾಮಾನ್ಯ ಉಪಬಂಧಗಳು

46. ಮೀಸಲು ನಿಧಿಗೆ ಕೇಂದ್ರ ಸರ್ಕಾರದಿಂದ ವಂತಿಗೆ

46ಎ. ರಾಷ್ಟ್ರೀಯ ಗ್ರಾಮೀಣ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳ) ನಿಧಿ ಮತ್ತು ರಾಷ್ಟ್ರೀಯ ಗ್ರಾಮೀಣ ಸಾಲ (ಸ್ಥಿರೀಕರಣ ನಿಧಿಗೆ) ವಂತಿಗೆ

46ಬಿ. [ನಿರಸಿತ]

46ಸಿ. ರಾಷ್ಟ್ರೀಯ ಕೈಗಾರಿಕಾ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳ) ನಿಧಿ

46ಡಿ. ರಾಷ್ಟ್ರೀಯ ಗೃಹ ನಿರ್ಮಾಣ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿ

47. ಹೆಚ್ಚುವರಿ ಲಾಭಗಳ ಹಂಚಿಕೆ

48. ಆದಾಯ ತೆರಿಗೆ ಮತ್ತು ಅಧಿತೆರಿಗೆಯಿಂದ ಬ್ಯಾಂಕುಗಳಿಗೆ ವಿನಾಯತಿ

49. ಬ್ಯಾಂಕು ದರದ ಪ್ರಕಟಣೆ

50. ಲೆಕ್ಕ ಪರಿಶೋಧಕರು

51. ಸರ್ಕಾರದಿಂದ ವಿಶೇಷ ಲೆಕ್ಕಪರಿಶೋಧಕರ ನೇಮಕಾತಿ
52. ಲೆಕ್ಕಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು
53. ವಿವರ ಪಟ್ಟಿಕೆಗಳು
54. ಕೃಷಿ ಸಾಲ ಮತ್ತು ಅಭಿವೃದ್ಧಿ
54ಎ. ಅಧಿಕಾರಗಳ ಪ್ರತ್ಯಾಯೋಜನೆ
54ಎಎ. ಬ್ಯಾಂಕಿನ ನೌಕರರನ್ನು ಇತರ ಸಂಸ್ಥೆಗಳಿಗೆ ಪ್ರತಿನಿಯೋಜಿಸಲು ಅದರ ಅಧಿಕಾರ
55. [ನಿರಸಿತ] 56. [ನಿರಸಿತ]
57. ಬ್ಯಾಂಕಿನ ಸಮಾಪನ
58. ಕೇಂದ್ರ ಮಂಡಳಿಯ ವಿನಿಯಮ ರಚನಾಧಿಕಾರ
58ಎ. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಬಗ್ಗೆ ಸಂರಕ್ಷಣೆ

## ಅಧ್ಯಾಯ-V
## ದಂಡನೆಗಳು

58ಬಿ. ದಂಡನೆಗಳು
58ಸಿ. ಕಂಪನಿಯ ಅಪರಾಧಗಳು
58ಡಿ. 58ಬಿ ಪ್ರಕರಣದ ಅನ್ವಯದ ಬಗ್ಗೆ ಪ್ರತಿಷೇಧ
58ಇ. ಅಪರಾಧಗಳ ಸಂಜ್ಞೇಯತೆ
58ಎಫ್. ಜುಲ್ಮಾನೆಯ ವಿನಿಯೋಗ
58ಜಿ. ಜುಲ್ಮಾನೆ ವಿಧಿಸಲು ಬ್ಯಾಂಕಿನ ಅಧಿಕಾರ
59. [ನಿರಸಿತ] 60. [ನಿರಸಿತ] 61. [ನಿರಸಿತ]
ಮೊದಲನೇ ಅನುಸೂಚಿ
ಎರಡನೇ ಅನುಸೂಚಿ – ಅನುಸೂಚಿತ ಬ್ಯಾಂಕುಗಳು
ಮೂರನೇ ಅನುಸೂಚಿ – [ನಿರಸನಗೊಳಿಸಲಾಗಿದೆ]
ನಾಲ್ಕನೇ ಅನುಸೂಚಿ – [ನಿರಸನಗೊಳಿಸಲಾಗಿದೆ]
ಐದನೇ ಅನುಸೂಚಿ – [ನಿರಸನಗೊಳಿಸಲಾಗಿದೆ].

# ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934

( 1934ರ ಅಧಿನಿಯಮ ಸಂಖ್ಯೆ 2 )

[6ನೇ ಮಾರ್ಚ್ 1934]

ಭಾರತ ರಿಸರ್ವ್ ಬ್ಯಾಂಕನ್ನು ರಚಿಸುವ ಅಧಿನಿಯಮ.

ಕರೆನ್ಸಿ ನೋಟುಗಳನ್ನು ಹೊರಡಿಸುವುದು ಹಾಗೂ ಭಾರತದಲ್ಲಿ ಹಣಕಾಸಿನ ಸ್ಥಿರತೆಯನ್ನು ಸುನಿಶ್ಚಿತಗೊಳಿಸುವ ದೃಷ್ಟಿಯಿಂದ ಮೀಸಲು ನಿಧಿಗಳನ್ನು ಇಟ್ಟುಕೊಂಡು ಬರುವುದನ್ನು ನಿಯಂತ್ರಿಸುವುದು ಮತ್ತು ಒಟ್ಟಾರೆ ದೇಶದ ಅನುಕೂಲಕ್ಕಾಗಿ ಅದರ ಕರೆನ್ಸಿ ಮತ್ತು ಸಾಲದ ವ್ಯವಸ್ಥೆಯನ್ನು ನಿರ್ವಹಿಸಲು ಭಾರತಕ್ಕಾಗಿ ರಿಸರ್ವ್ ಬ್ಯಾಂಕನ್ನು ರಚಿಸುವುದು ವಿಹಿತವಾಗಿರುವುದರಿಂದ;

ಮತ್ತು ಪ್ರಪಂಚದ ಪ್ರಸಕ್ತ ಹಣಕಾಸು ಪದ್ಧತಿಗಳ ಅವ್ಯವಸ್ಥೆಯಲ್ಲಿ, ಭಾರತೀಯ ಹಣಕಾಸು ಪದ್ಧತಿಗೆ ಖಾಯಂ ಆಧಾರವಾಗಿ ಯಾವುದು ಸೂಕ್ತ ಎಂಬುದನ್ನು ನಿರ್ಧರಿಸಲು ಸಾಧ್ಯವಾಗದೆ ಇರುವುದರಿಂದ;

ಆದರೆ ಅಸ್ತಿತ್ವದಲ್ಲಿರುವ ಹಣಕಾಸು ಪದ್ಧತಿಯ ಆಧಾರದ ಮೇಲೆ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡುವುದು ಮತ್ತು ಖಾಯಂ ಕ್ರಮಗಳನ್ನು ರೂಪಿಸಲು ಸಾಧ್ಯವಾಗುವಂತೆ, ಭಾರತಕ್ಕೆ ಅತ್ಯಂತ ಸೂಕ್ತವಾದ ಹಣಕಾಸಿನ ಮಾನಕ ಯಾವುದೆಂಬ ಪ್ರಶ್ನೆಯ ಪರ್ಯಾಲೋಚನೆಯನ್ನು ಅಂತರ ರಾಷ್ಟ್ರೀಯ ಹಣಕಾಸಿನ ಸ್ಥಿತಿಯು ಸಾಕಷ್ಟು ಸ್ಪಷ್ಟ ಮತ್ತು ಸ್ಥಿರವಾಗುವವರೆಗೆ ಮುಂದೂಡುವುದು ವಿಹಿತವಾಗಿರುವುದರಿಂದ;

ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಅಧ್ಯಾಯ-I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಈ ಪ್ರಕರಣವು ಕೂಡಲೇ ಜಾರಿಗೆ ಬರತಕ್ಕುದು ಮತ್ತು ಈ ಅಧಿನಿಯಮದ ಉಳಿದ ಉಪಬಂಧಗಳು, ಕೇಂದ್ರ ಸರ್ಕಾರವು, ಭಾರತದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಅಥವಾ ದಿನಾಂಕಗಳಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಯಾವುದಾದರೂ ಇದ್ದ ಹೊರತು,-

(ಎ) [* * *]

(ಎi) [* * *]

(ಎii) "ಬ್ಯಾಂಕ್" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ಭಾರತ ರಿಸರ್ವ್ ಬ್ಯಾಂಕ್;

(ಎiii) "ಅಂತರರಾಷ್ಟ್ರೀಯ ಒಪ್ಪಂದಗಳಿಗಾಗಿನ ಬ್ಯಾಂಕ್" ಎಂದರೆ ಹೇಗ್‌ನಲ್ಲಿ 1930ರ ಜನವರಿ 20ನೇ ದಿನಾಂಕದಂದು ರುಜು ಮಾಡಿದ ಒಪ್ಪಂದದ ಅನುಸರಣೆಯಲ್ಲಿ ಸ್ವಿಜ್ಜರ್‌ಲ್ಯಾಂಡಿನ ಕಾನೂನಿನ ಮೇರೆಗೆ ಸದರಿ ಹೆಸರಿನಲ್ಲಿ ಸ್ಥಾಪಿತವಾದ ನಿಗಮಿತ ನಿಕಾಯ;

(ಬಿ) "ಕೇಂದ್ರ ಮಂಡಳಿ" ಎಂದರೆ ಬ್ಯಾಂಕಿನ ನಿರ್ದೇಶಕರ ಕೇಂದ್ರ ಮಂಡಳಿ;

(ಬಿi) [* * *]

(ಬಿii) [* * *]

(ಬಿiii) [* * *]

(ಬಿiv) [* * *]

(ಬಿv) [* * *]

(ಬಿvi) "ಠೇವಣಿ ವಿಮಾ ನಿಗಮ" ಎಂದರೆ ಠೇವಣಿ ವಿಮಾ ನಿಗಮ ಅಧಿನಿಯಮ, 1961 (1961ರ 47)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಠೇವಣಿ ವಿಮಾ ನಿಗಮ;

(ಬಿvii) "ಅಭಿವೃದ್ಧಿ ಬ್ಯಾಂಕು" ಎಂದರೆ ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು ಅಧಿನಿಯಮ, 1964 (1964ರ 18)ರ ಮೇರೆಗೆ ಸ್ಥಾಪಿತವಾದ ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್;

(ಬಿviii) [* * *]

(ಬಿviiiಎ)"ಎಕ್ಸಿಮ್ ಬ್ಯಾಂಕು" ಎಂದರೆ ಭಾರತ ರಫ್ತು- ಆಮದು ಬ್ಯಾಂಕ್ ಅಧಿನಿಯಮ, 1981 (1981ರ 23)ರ ಮೇರೆಗೆ ಸ್ಥಾಪಿತವಾದ ರಫ್ತು-ಆಮದು ಬ್ಯಾಂಕು;

(ಬಿix) "ವಿದೇಶಿ ಕರೆನ್ಸಿ" ಮತ್ತು "ವಿದೇಶಿ ವಿನಿಮಯ" ಎಂಬುವುಗಳು ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46) -ಇದರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರುತ್ತವೆ;

(ಸಿ) "ಕೈಗಾರಿಕಾ ಹಣಕಾಸು ನಿಗಮ" ಎಂದರೆ ಕೈಗಾರಿಕಾ ಹಣಕಾಸು ನಿಗಮ ಅಧಿನಿಯಮ, 1948 (1948ರ 15)ರ ಮೇರೆಗೆ ಸ್ಥಾಪಿತವಾದ ಭಾರತ ಕೈಗಾರಿಕಾ ಹಣಕಾಸು ನಿಗಮ;

(ಸಿಎ) "ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘ" ಎಂದರೆ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘ (ಸ್ಥಾನಮಾನ, ಉನ್ಮುಕ್ತಿಗಳು ಮತ್ತು ವಿಶೇಷಾಧಿಕಾರಗಳು) ಅಧಿನಿಯಮ,1960 (1960ರ 32) ಇದರಲ್ಲಿ ಉಲ್ಲೇಖಿಸಲಾದ "ಸಂಘ".

(ಸಿಬಿ) "ಅಂತರರಾಷ್ಟ್ರೀಯ ಹಣಕಾಸು ನಿಗಮ" ಎಂದರೆ ಅಂತರರಾಷ್ಟ್ರೀಯ ಹಣಕಾಸು ನಿಗಮ (ಸ್ಥಾನಮಾನ, ಉನ್ಮುಕ್ತಿಗಳು ಮತ್ತು ವಿಶೇಷಾಧಿಕಾರಗಳು) ಅಧಿನಿಯಮ,1958 (1958ರ 42) ಇದರಲ್ಲಿ ಉಲ್ಲೇಖಿಸಲಾದ "ನಿಗಮ";

(ಸಿಸಿ) "ಅಂತರರಾಷ್ಟ್ರೀಯ ಹಣಕಾಸು ನಿಧಿ" ಮತ್ತು "ಅಂತರರಾಷ್ಟ್ರೀಯ ಪುನರ್ ನಿರ್ಮಾಣ ಮತ್ತು ಅಭಿವೃದ್ಧಿ ಬ್ಯಾಂಕ್" ಎಂದರೆ ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ಬ್ಯಾಂಕ್ ಅಧಿನಿಯಮ, 1945ರಲ್ಲಿ ಉಲ್ಲೇಖಿಸಲಾದ ಅನುಕ್ರಮವಾಗಿ "ಅಂತರರಾಷ್ಟ್ರೀಯ ನಿಧಿ" ಮತ್ತು "ಅಂತರರಾಷ್ಟ್ರೀಯ ಬ್ಯಾಂಕು";

(ಸಿಸಿಸಿ) "ರಾಷ್ಟ್ರೀಯ ಬ್ಯಾಂಕ್" ಎಂದರೆ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧಿನಿಯಮ, 1981 (1981ರ 61)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗಾಗಿನ ಬ್ಯಾಂಕ್;

(ಸಿಸಿಸಿಸಿ) "ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕ್" ಎಂದರೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕ್ ಅಧಿನಿಯಮ, 1987ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್;

(ಸಿi) [* * *]

(ಸಿiಎ) [* * *]

(ಸಿii) [* * *]

(ಸಿiii) [* * *]

(ಸಿiv) [* * *]

(ಸಿv) 'ಪುನಾರಚನೆ ಬ್ಯಾಂಕ್' ಎಂದರೆ ಕೈಗಾರಿಕಾ ಪುನಾರಚನೆ ಬ್ಯಾಂಕ್ ಅಧಿನಿಯಮ, 1984ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಕೈಗಾರಿಕಾ ಪುನಾರಚನೆ ಬ್ಯಾಂಕ್;

(ಡಿ) "ರೂಪಾಯಿ ನಾಣ್ಯ" ಎಂದರೆ ಭಾರತ ನಾಣ್ಯ ತಯಾರಿಕೆ ಅಧಿನಿಯಮ, 1906 (1906ರ 3)ರ ಉಪಬಂಧಗಳ ಮೇರೆಗೆ ಭಾರತದಲ್ಲಿ ಕಾನೂನು ಸಮ್ಮತ ಚಲಾವಣೆಯಲ್ಲಿರುವಂಥ ರೂಪಾಯಿಗಳು;

(ಇ) "ಅನುಸೂಚಿತ ಬ್ಯಾಂಕ್" ಎಂದರೆ ಎರಡನೇ ಅನುಸೂಚಿಯಲ್ಲಿ ಸೇರಿಸಿರುವ ಬ್ಯಾಂಕ್;

(ಇ1) 'ಸಣ್ಣ ಕೈಗಾರಿಕೆಗಳ ಬ್ಯಾಂಕ್' ಎಂದರೆ – ಭಾರತ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1989ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್;

(ಇಎ) "ಪ್ರಾಯೋಜಕ ಬ್ಯಾಂಕ್" ಎಂದರೆ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧಿನಿಯಮ,1976 ಇದರಲ್ಲಿ ಪರಿಭಾಷಿಸಿರುವಂತೆ ಪ್ರಾಯೋಜಕ ಬ್ಯಾಂಕ್;

(ಇಬಿ) "ಸ್ಟೇಟ್ ಬ್ಯಾಂಕ್" ಎಂದರೆ ಭಾರತ ಸ್ಟೇಟ್ ಬ್ಯಾಂಕು ಅಧಿನಿಯಮ, 1955 (1955ರ 23)ರ ಮೇರೆಗೆ ರಚಿತವಾದ ಭಾರತ ಸ್ಟೇಟ್ ಬ್ಯಾಂಕ್;

(ಎಫ್) [* * *]

(ಎಫ್1) "ರಾಜ್ಯ ಹಣಕಾಸು ನಿಗಮ" ಎಂದರೆ ರಾಜ್ಯ ಹಣಕಾಸು ನಿಗಮಗಳ ಅಧಿನಿಯಮ,1951 (1951ರ 63)ರ ಮೇರೆಗೆ ಸ್ಥಾಪಿತವಾದ ಯಾವುದೇ ರಾಜ್ಯ ಹಣಕಾಸು ನಿಗಮ;

(ಜಿ) "ಯೂನಿಟ್ ಟ್ರಸ್ಟ್" ಎಂದರೆ ಭಾರತ ಯೂನಿಟ್ ಟ್ರಸ್ಟ್ ಅಧಿನಿಯಮ,1963 (1963ರ 52)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತ ಯೂನಿಟ್ ಟ್ರಸ್ಟ್;

(ಎಚ್) "ಕೃಷಿ ಕಾರ್ಯಾಚರಣೆಗಳು", "ಕೇಂದ್ರ ಸಹಕಾರಿ ಬ್ಯಾಂಕು", "ಸಹಕಾರಿ ಸಂಘ", "ಫಸಲುಗಳು", "ಫಸಲುಗಳ ಕ್ರಯ ವಿಕ್ರಯ", "ಮತ್ಸ್ಯಪಾಲನೆ", "ಪ್ರಾದೇಶಿಕ ಗ್ರಾಮೀಣ ಬ್ಯಾಂಕ್" ಮತ್ತು "ರಾಜ್ಯ ಸಹಕಾರಿ ಬ್ಯಾಂಕ್", ಇವುಗಳು ಕೃಷಿ ಮತ್ತು ಗ್ರಾಮಾಭಿವೃದ್ಧಿಗಾಗಿನ ರಾಷ್ಟ್ರೀಯ

ಬ್ಯಾಂಕ್ ಅಧಿನಿಯಮ, 1981 ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರತಕ್ಕುದು;

(ಐ) "ಸಹಕಾರಿ ಬ್ಯಾಂಕು", "ಸಹಕಾರಿ ಸಾಲ ಸಂಘ", "ನಿರ್ದೇಶಕ", "ಪ್ರಾಥಮಿಕ ಕೃಷಿ ಸಾಲ ಸಂಘ" ಮತ್ತು "ಪ್ರಾಥಮಿಕ ಸಾಲ ಸಂಘ", ಇವುಗಳು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ ಭಾಗ-vರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರತಕ್ಕುದು.

## ಅಧ್ಯಾಯ-II

## ನಿಗಮನ, ಬಂಡವಾಳ, ವ್ಯವಸ್ಥಾಪನೆ ಮತ್ತು ವ್ಯವಹಾರ

**3. ರಿಸರ್ವ್ ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ.-** (1) ಕೇಂದ್ರ ಸರ್ಕಾರದಿಂದ ಕರೆನ್ಸಿಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸುವ ಉದ್ದೇಶಕ್ಕಾಗಿ ಭಾರತ ರಿಸರ್ವ್ ಬ್ಯಾಂಕ್ ಎಂದು ಕರೆಯಬೇಕಾದ ಒಂದು ಬ್ಯಾಂಕನ್ನು ರಚಿಸತಕ್ಕುದು.

(2) ಆ ಬ್ಯಾಂಕು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಭಾರತದ ರಿಸರ್ವ್ ಬ್ಯಾಂಕ್ ಎಂಬ ಹೆಸರಿನಿಂದ ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಅದು ಸದರಿ ಹೆಸರಿನ ಮೂಲಕ ದಾವೆಯನ್ನು ಹೂಡತಕ್ಕುದು ಮತ್ತು ದಾವೆಗೆ ಗುರಿಯಾಗತಕ್ಕುದು.

**4. ಬ್ಯಾಂಕಿನ ಬಂಡವಾಳ.-** ಬ್ಯಾಂಕಿನ ಬಂಡವಾಳವು ಐದು ಕೋಟಿ ರೂಪಾಯಿಗಳಾಗಿರ ತಕ್ಕುದು.

**5.** ***[ಷೇರು ಬಂಡವಾಳದ ಹೆಚ್ಚಳ ಮತ್ತು ಇಳಿತ]*** ಅಧಿನಿಯಮ 1948ರ 62ರ 7ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ (1.1.1949ರಿಂದ ಜಾರಿಗೆ ಬರುವಂತೆ) ನಿರಸನಗೊಂಡಿದೆ.

**6. ಕಛೇರಿಗಳು, ಶಾಖೆಗಳು ಮತ್ತು ಏಜೆನ್ಸಿಗಳು.-** ಆ ಬ್ಯಾಂಕು ಆದಷ್ಟು ಬೇಗ ಮುಂಬಯಿ, ಕಲ್ಕತ್ತ, ದೆಹಲಿ ಮತ್ತು ಮದರಾಸಿನಲ್ಲಿ ಕಛೇರಿಗಳನ್ನು ಸ್ಥಾಪಿಸತಕ್ಕುದು ಮತ್ತು ಭಾರತದಲ್ಲಿ ಯಾವುದೇ ಇತರ ಸ್ಥಳದಲ್ಲಿ ಅಥವಾ ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಎಲ್ಲಿಯಾದರೂ ಶಾಖೆಗಳು ಮತ್ತು ಏಜೆನ್ಸಿಗಳನ್ನು ಸ್ಥಾಪಿಸಬಹುದು.

**7. ವ್ಯವಸ್ಥಾಪನೆ.-** (1) ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಬ್ಯಾಂಕಿನ ಗವರ್ನರ್‌ರೊಂದಿಗೆ ಸಮಾಲೋಚಿಸಿದ ತರುವಾಯ ಸಾರ್ವಜನಿಕ ಹಿತಾಸಕ್ತಿಯಲ್ಲಿ ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ನಿರ್ದೇಶನಗಳನ್ನು ಬ್ಯಾಂಕಿಗೆ ಕೊಡಬಹುದು.

(2) ಯಾವುದೇ ಅಂಥ ನಿರ್ದೇಶನಗಳಿಗೆ ಒಳಪಟ್ಟು, ಬ್ಯಾಂಕಿನ ಸಾಮಾನ್ಯ ಅಧೀಕ್ಷಣೆ, ಮತ್ತು ಕಾರ್ಯಕಲಾಪಗಳು ಮತ್ತು ವ್ಯವಹಾರದ ಬಗೆಗಿನ ನಿರ್ದೇಶನವನ್ನು ನಿರ್ದೇಶಕರ ಕೇಂದ್ರ ಮಂಡಳಿಗೆ ವಹಿಸಿಕೊಡತಕ್ಕುದು; ಅದು ಆ ಬ್ಯಾಂಕು ಚಲಾಯಿಸಬಹುದಾದ ಅಥವಾ ಮಾಡಬಹುದಾದಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಎಲ್ಲಾ ಕಾರ್ಯಗಳನ್ನು ಮಾಡಬಹುದು.

(3) ಕೇಂದ್ರ ಮಂಡಳಿಯು ರಚಿಸಿದ ವಿನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಗವರ್ನರನು ಮತ್ತು ಅವನ ಗೈರುಹಾಜರಿಯಲ್ಲಿ ಈ ಬಗ್ಗೆ ಅವನು ನಾಮನಿರ್ದೇಶಿಸಿದ ಡೆಪ್ಯುಟಿ ಗವರ್ನರನು ಸಹ ಆ ಬ್ಯಾಂಕಿನ ಸಾಮಾನ್ಯ ಅಧೀಕ್ಷಣೆ ಮತ್ತು ಕಾರ್ಯಕಲಾಪಗಳು ಮತ್ತು ವ್ಯವಹಾರಗಳ ಬಗ್ಗೆ ನಿರ್ದೇಶನವನ್ನು ಕೊಡುವ ಅಧಿಕಾರಗಳನ್ನು ಹೊಂದಿರತಕ್ಕುದು ಮತ್ತು ಅವನು

ಬ್ಯಾಂಕು ಚಲಾಯಿಸಬಹುದಾದ ಅಥವಾ ಮಾಡಬಹುದಾದಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಎಲ್ಲಾ ಕಾರ್ಯಗಳು ಮತ್ತು ಕೆಲಸಗಳನ್ನು ಮಾಡಬಹುದು.

**8. ಕೇಂದ್ರ ಮಂಡಳಿಯ ರಚನೆ ಮತ್ತು ನಿರ್ದೇಶಕರ ಪದಾವಧಿ.–** (1) ಕೇಂದ್ರ ಮಂಡಳಿಯು ಈ ಕೆಳಕಂಡ ನಿರ್ದೇಶಕರನ್ನು ಒಳಗೊಂಡಿರತಕ್ಕುದು, ಎಂದರೆ:–

(ಎ) ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ಗವರ್ನರ್ ಮತ್ತು ನಾಲ್ವರಿಗಿಂತ ಹೆಚ್ಚಿಲ್ಲದ ಡೆಪ್ಯುಟಿ ಗವರ್ನರುಗಳು;

(ಬಿ) 9ನೇ ಪ್ರಕರಣದ ಮೇರೆಗೆ ರಚಿಸಲಾದ ನಾಲ್ಕು ಸ್ಥಳೀಯ ಮಂಡಳಿಗಳ ಪೈಕಿ ಪ್ರತಿಯೊಂದರಿಂದ ಒಬ್ಬನಂತೆ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ನಾಲ್ವರು ನಿರ್ದೇಶಕರು;

(ಸಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಹತ್ತು ನಿರ್ದೇಶಕರು; ಮತ್ತು

(ಡಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಒಬ್ಬ ಸರ್ಕಾರಿ ಅಧಿಕಾರಿ.

(2) ಗವರ್ನರನು ಮತ್ತು ಡೆಪ್ಯೂಟಿ ಗವರ್ನರನು ಅವನ ಪೂರ್ಣ ಕಾಲವನ್ನು ಬ್ಯಾಂಕಿನ ಕಾರ್ಯಕಲಾಪಗಳಿಗೆ ವಿನಿಯೋಗಿಸತಕ್ಕುದು ಮತ್ತು ಅವರು ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಕೇಂದ್ರ ಮಂಡಲಿಯು ನಿರ್ಧರಿಸಬಹುದಾದಂಥ ಸಂಬಳಗಳು ಮತ್ತು ಭತ್ಯೆಗಳನ್ನು ಸ್ವೀಕರಿಸತಕ್ಕುದು:

ಪರಂತು, ಕೇಂದ್ರ ಮಂಡಲಿಯು, ಅದರ ಅಭಿಪ್ರಾಯದಲ್ಲಿ ಹಾಗೆ ಮಾಡುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವಶ್ಯವೆನಿಸಿದರೆ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ, ಸಂದರ್ಭಾನುಸಾರ ಗವರ್ನರ್ ಅಥವಾ ಡೆಪ್ಯೂಟಿ ಗವರ್ನರ್‌ನೆಂದು, ಅವನ ಕರ್ತವ್ಯಗಳೊಂದಿಗೆ ಹಸ್ತಕ್ಷೇಪವನ್ನುಂಟು ಮಾಡುವ ಸಂಭವವಿಲ್ಲದ ಹಾಗೆ, ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಪಟ್ಟಿರಲಿ ಅಥವಾ ಇಲ್ಲದಿರಲಿ ಅಂಥ ಅಂಶಕಾಲಿಕ ಗೌರವ ಕೆಲಸವನ್ನು ಕೈಗೊಳ್ಳಲು ಅನುಮತಿಸಬಹುದು:

ಮತ್ತೂ ಪರಂತು, ಕೇಂದ್ರ ಸರ್ಕಾರವು ಬ್ಯಾಂಕಿನೊಂದಿಗೆ ಸಮಾಲೋಚಿಸಿ ಡೆಪ್ಯುಟಿ ಗವರ್ನರನನ್ನು ಆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ರಾಷ್ಟ್ರೀಯ ಬ್ಯಾಂಕಿನ ಅಧ್ಯಕ್ಷನೆಂದು ನೇಮಕ ಮಾಡಬಹುದು.

(3) (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ನಾಮನಿರ್ದೇಶಿತರಾದ ಡೆಪ್ಯುಟಿ ಗವರ್ನರ್ ಮತ್ತು ನಿರ್ದೇಶಕನು ಕೇಂದ್ರ ಮಂಡಳಿಯ ಯಾವುದೇ ಸಭೆಗೆ ಹಾಜರಾಗಬಹುದು ಮತ್ತು ಚರ್ಚೆಗಳಲ್ಲಿ ಭಾಗವಹಿಸಬಹುದು, ಆದರೆ ಮತದಾನಮಾಡಲು ಅವರು ಹಕ್ಕುಳ್ಳವರಾಗಿರತಕ್ಕುದಲ್ಲ:

ಪರಂತು, ಯಾವುದೇ ಕಾರಣಕ್ಕಾಗಿ ಗವರ್ನರನು, ಅಂಥ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದಾಗ, ಬರಹದಲ್ಲಿ ಈ ಬಗ್ಗೆ ಅಧಿಕೃತಗೊಳಿಸಿದ ಡೆಪ್ಯುಟಿ ಗವರ್ನರನು ಆ ಸಭೆಯಲ್ಲಿ ಅವನ ಪರವಾಗಿ ಮತದಾನ ಮಾಡಬಹುದು.

(4) ಗವರ್ನರನು ಮತ್ತು ಡೆಪ್ಯೂಟಿ ಗವರ್ನರನು, ಅವರನ್ನು ನೇಮಕ ಮಾಡುವಾಗ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಐದು ವರ್ಷಗಳನ್ನು ಮೀರದ ಅವಧಿಯವರೆಗೆ ಪದಧಾರಣ ಮಾಡತಕ್ಕುದು ಮತ್ತು ಅವರು ಮರುನೇಮಕಾತಿಗಾಗಿ ಅರ್ಹರಾಗಿರತಕ್ಕುದು.

(1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ನಿರ್ದೇಶಕನು ನಾಲ್ಕು ವರ್ಷಗಳ ಅವಧಿಯವರೆಗೆ ಮತ್ತು ಆ ತರುವಾಯ ಅವನ ಉತ್ತರಾಧಿಕಾರಿಯನ್ನು ನಾಮನಿರ್ದೇಶನ ಮಾಡುವವರೆಗೆ ಪದಧಾರಣ ಮಾಡತಕ್ಕುದು.

(1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ನಿರ್ದೇಶಕನು ಕೇಂದ್ರ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕುದು.

(5) ಮಂಡಳಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ಮಂಡಳಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿದೆ ಎಂಬ ಕಾರಣಮಾತ್ರದಿಂದಲೇ ಪ್ರಶ್ನಿಸತಕ್ಕುದಲ್ಲ.

(6) [* * * * *]

(7) ನಿವೃತ್ತನಾಗಲಿರುವ ನಿರ್ದೇಶಕನು ಮರು ನಾಮನಿರ್ದೇಶನಕ್ಕಾಗಿ ಅರ್ಹನಾಗಿರತಕ್ಕುದು.

**9. ಸ್ಥಳೀಯ ಮಂಡಳಿಗಳು, ಅವುಗಳ ರಚನೆ ಮತ್ತು ಪ್ರಕಾರ್ಯಗಳು.–** (1) ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ನಾಲ್ಕು ಪ್ರದೇಶಗಳಲ್ಲಿ ಪ್ರತಿಯೊಂದಕ್ಕಾಗಿ ಒಂದು ಸ್ಥಳೀಯ ಮಂಡಳಿಯನ್ನು ರಚಿಸತಕ್ಕುದು ಮತ್ತು ಅದು ಸಾಧ್ಯವಾದಷ್ಟು ಮಟ್ಟಿಗೆ ಪ್ರಾದೇಶಿಕ ಮತ್ತು ಆರ್ಥಿಕ ಹಿತಾಸಕ್ತಿಗಳು ಮತ್ತು ಸಹಕಾರಿ ಮತ್ತು ದೇಶೀಯ ಬ್ಯಾಂಕುಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಐವರು ಸದಸ್ಯರುಗಳನ್ನು ಒಳಗೊಂಡಿರತಕ್ಕುದು.

(2) ಸ್ಥಳೀಯ ಮಂಡಲಿಯ ಸದಸ್ಯರು ತಮ್ಮ ಪೈಕಿ ಒಬ್ಬ ವ್ಯಕ್ತಿಯನ್ನು ಮಂಡಳಿಯ ಅಧ್ಯಕ್ಷನಾಗಿರಲು ಚುನಾಯಿಸತಕ್ಕುದು.

(3) ಸ್ಥಳೀಯ ಮಂಡಲಿಯ ಪ್ರತಿಯೊಬ್ಬ ಸದಸ್ಯನು ನಾಲ್ಕು ವರ್ಷಗಳ ಅವಧಿಯವರೆಗೆ ಮತ್ತು ಆ ತರುವಾಯ ಅವನ ಉತ್ತರಾಧಿಕಾರಿಯನ್ನು ನೇಮಕ ಮಾಡುವವರೆಗೆ ಪದಧಾರಣ ಮಾಡತಕ್ಕುದು ಮತ್ತು ಅವನು ಮರುನೇಮಕಾತಿಗಾಗಿ ಅರ್ಹನಾಗಿರತಕ್ಕುದು.

(4) ಸ್ಥಳೀಯ ಮಂಡಲಿಯು ಅದಕ್ಕೆ ಸಾಮಾನ್ಯವಾಗಿ ಅಥವಾ ನಿರ್ದಿಷ್ಟವಾಗಿ ಒಪ್ಪಿಸಬಹುದಾದಂಥ ವಿಷಯಗಳ ಬಗ್ಗೆ ಕೇಂದ್ರ ಮಂಡಲಿಗೆ ಸಲಹೆ ಕೊಡತಕ್ಕುದು ಮತ್ತು ಅದು ಕೇಂದ್ರ ಮಂಡಳಿಯು ಅದಕ್ಕೆ ವಹಿಸಿಕೊಡಬಹುದಾದಂಥ ಕರ್ತವ್ಯಗಳನ್ನು ನೆರವೇರಿಸತಕ್ಕುದು.

**10. ಸ್ಥಳೀಯ ಮಂಡಲಿಗಳ ನಿರ್ದೇಶಕರು ಮತ್ತು ಸದಸ್ಯರ ಅನರ್ಹತೆಗಳು.–** (1) (ಎ) ಸಂಬಳ ಪಡೆಯುವ ಸರ್ಕಾರಿ ನೌಕರನಾಗಿರುವ; ಅಥವಾ

(ಬಿ) ದಿವಾಳಿ ಎಂದು ನ್ಯಾಯನಿರ್ಣೀತನಾಗಿರುವ ಅಥವಾ ಯಾವುದೇ ಕಾಲದಲ್ಲಿ ಹಾಗೆಂದು ನ್ಯಾಯನಿರ್ಣೀತನಾಗಿದ್ದ ಅಥವಾ ಸಂದಾಯವನ್ನು ತಡೆಹಿಡಿದ ಅಥವಾ ಅವನ ಸಾಲಗಾರರೊಡನೆ ರಾಜಿಮಾಡಿಕೊಂಡಿರುವ;

(ಸಿ) ಮನೋವಿಕಲನೆಂದು ಕಂಡುಬಂದಿರುವ ಅಥವಾ ಅಸ್ವಸ್ಥಚಿತ್ತನಾಗಿರುವ; ಅಥವಾ

(ಡಿ) ಯಾವುದೇ ಬ್ಯಾಂಕಿನ ಅಧಿಕಾರಿ ಅಥವಾ ನೌಕರನಾಗಿರುವ; ಅಥವಾ

(ಇ) ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ 10)ರ 5ನೇ ಪ್ರಕರಣದ (ಸಿ) ಖಂಡದ ಅರ್ಥವ್ಯಾಪ್ತಿಯೊಳಗೆ ಬ್ಯಾಂಕಿಂಗ್ ಕಂಪನಿ ಅಥವಾ ಸಹಕಾರಿ ಬ್ಯಾಂಕಿನ ನಿರ್ದೇಶಕನಾಗಿರುವ

–ಯಾವನೇ ವ್ಯಕ್ತಿಯು ಸ್ಥಳೀಯ ಮಂಡಳಿಯ ನಿರ್ದೇಶಕ ಅಥವಾ ಸದಸ್ಯನಾಗಿರತಕ್ಕುದಲ್ಲ.

(2) ಒಂದೇ ವಾಣಿಜ್ಯ ಫರ್ಮಿನ ಪಾಲುದಾರರಾಗಿರುವ ಅಥವಾ ಒಂದೇ ಖಾಸಗಿ ಕಂಪನಿಯ ನಿರ್ದೇಶಕರಾಗಿರುವ ಯಾರೇ ಇಬ್ಬರು ವ್ಯಕ್ತಿಗಳು ಅಥವಾ ಅವರ ಪೈಕಿ ಒಬ್ಬನು ಆ ಇನ್ನೊಬ್ಬನ ಸಾಮಾನ್ಯ ಏಜೆಂಟನಾಗಿರುವ ಅಥವಾ ಆ ಇನ್ನೊಬ್ಬನು ಯಾವ ವಾಣಿಜ್ಯ ಫರ್ಮಿನ ಪಾಲುದಾರನಾಗಿರುವನೋ ಆ ವಾಣಿಜ್ಯ ಫರ್ಮಿನಿಂದ ಬೇರೊಬ್ಬರ ಪರವಾಗಿ ರುಜು ಹಾಕುವ ಅಧಿಕಾರವನ್ನು ಹೊಂದಿರುವವನು ಒಂದೇ ಕಾಲದಲ್ಲಿ ಒಂದೇ ಸ್ಥಳೀಯ ಮಂಡಳಿಯ ನಿರ್ದೇಶಕರು ಮತ್ತು ಸದಸ್ಯರಾಗಿರತಕ್ಕದಲ್ಲ.

(3) (1)ನೇ ಉಪಪ್ರಕರಣದ (ಎ) ಖಂಡ (ಡಿ) ಖಂಡ ಅಥವಾ (ಇ) ಖಂಡಗಳಲ್ಲಿ ಇರುವುದು ಯಾವುದೂ, 8ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಗವರ್ನರ್‌ಗೆ ಅಥವಾ ಡೆಪ್ಯುಟಿ ಗವರ್ನರ್‌ಗೆ ಅಥವಾ ನಿರ್ದೇಶಕನಿಗೆ ಅನ್ವಯವಾಗತಕ್ಕದಲ್ಲ.

**11. ಪದದಿಂದ ತೆಗೆದುಹಾಕುವುದು ಮತ್ತು ಪದವನ್ನು ಖಾಲಿ ಮಾಡುವುದು.**- (1) ಕೇಂದ್ರ ಸರ್ಕಾರವು, ಗವರ್ನರ್ ಅಥವಾ ಡೆಪ್ಯುಟಿ ಗವರ್ನರ್ ಅಥವಾ ಮಂಡಳಿಯ ಯಾವನೇ ಇತರ ನಿರ್ದೇಶಕ ಅಥವಾ ಯಾವನೇ ಸದಸ್ಯನನ್ನು ಅವನ ಪದದಿಂದ ತೆಗೆದುಹಾಕಬಹುದು:

* * * * *

(2) 8ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ನಿರ್ದೇಶಕನು, 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕರೆಯಲಾದ ಮಂಡಳಿಯ ಮೂರು ಅನುಕ್ರಮ ಸಭೆಗಳಿಗೆ ಕೇಂದ್ರ ಮಂಡಳಿಯಿಂದ ಅನುಮತಿಯನ್ನು ಪಡೆಯದೆ ಗೈರುಹಾಜರಾದರೆ ಅವನು ಪದಧಾರಣ ಮಾಡುವುದು ನಿಂತು ಹೋಗತಕ್ಕದು.

(3) ಕೇಂದ್ರ ಸರ್ಕಾರವು, ಸ್ಥಳೀಯ ಮಂಡಳಿಯ ಯಾವನೇ ನಿರ್ದೇಶಕನನ್ನು ಮತ್ತು ಕೇಂದ್ರ ಮಂಡಳಿಯು ಯಾವನೇ ಸದಸ್ಯನನ್ನು ಅಂಥ ನಿರ್ದೇಶಕ ಅಥವಾ ಸದಸ್ಯನು 10ನೇ ಪ್ರಕರಣದ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಗಾದರೆ ಪದದಿಂದ ತೆಗೆದುಹಾಕತಕ್ಕದು.

(4) ಹಿಂದೆ ಹೇಳಿದ ಉಪಪ್ರಕರಣಗಳ ಮೇರೆಗೆ ತೆಗೆದುಹಾಕಲಾದ ಅಥವಾ ಪದವನ್ನು ಧಾರಣ ಮಾಡುವುದು ನಿಂತುಹೋಗಿರುವ ಸ್ಥಳೀಯ ಮಂಡಳಿಯ ನಿರ್ದೇಶಕ ಮತ್ತು ಸದಸ್ಯನು ಯಾವ ಅವಧಿಯವರೆಗೆ ಅವನ ನೇಮಕಾತಿಯನ್ನು ಮಾಡಲಾಗಿತ್ತೋ ಆ ಅವಧಿಯು ಮುಕ್ತಾಯವಾಗುವವರೆಗೆ ಸ್ಥಳೀಯ ಮಂಡಳಿಯ ನಿರ್ದೇಶಕನೆಂದಾಗಲಿ ಅಥವಾ ಸದಸ್ಯನೆಂದಾಗಲಿ ಮರು ನೇಮಕಾತಿಗಾಗಿ ಅರ್ಹನಾಗಿರತಕ್ಕದಲ್ಲ.

(5) ಸಂಸತ್ತು ಅಥವಾ ಯಾವುದೇ ರಾಜ್ಯದ ವಿಧಾನಮಂಡಲದ ಸದಸ್ಯನಾಗಿರುವ ಯಾರೇ ವ್ಯಕ್ತಿಯನ್ನು ಸ್ಥಳೀಯ ಮಂಡಲಿಯ ನಿರ್ದೇಶಕ ಅಥವಾ ಸದಸ್ಯನೆಂದು ಮಾಡಿದ ನಾಮನಿರ್ದೇಶನವು, ಅವನ ನಾಮನಿರ್ದೇಶನದ ದಿನಾಂಕದಿಂದ ಎರಡು ತಿಂಗಳೊಳಗೆ ಅವನು ಅಂಥ ಸದಸ್ಯನಾಗಿರುವುದು ನಿಂತು ಹೋದ ಹೊರತು ಶೂನ್ಯವಾಗತಕ್ಕದು ಮತ್ತು ಸ್ಥಳೀಯ ಮಂಡಳಿಯ ಯಾವನೇ ನಿರ್ದೇಶಕ ಅಥವಾ ಸದಸ್ಯನು ಸಂಸತ್ತು ಅಥವಾ ಯಾವುದೇ ಅಂಥ ವಿಧಾನಮಂಡಲದ ಸದಸ್ಯನಾಗಿ ಚುನಾಯಿತನಾದರೆ ಅಥವಾ ನಾಮನಿರ್ದೇಶನಗೊಂಡರೆ, ಸಂದರ್ಭಾನುಸಾರ ಅಂಥ ಚುನಾವಣೆಯ ಅಥವಾ ನಾಮನಿರ್ದೇಶನದ ದಿನಾಂಕದಿಂದ ಅವನು ಆ ಸ್ಥಳೀಯ ಮಂಡಳಿಯ ನಿರ್ದೇಶಕ ಅಥವಾ ಸದಸ್ಯನಾಗಿರುವುದು ನಿಂತುಹೋಗತಕ್ಕದು.

(6) ನಿರ್ದೇಶಕನು ಕೇಂದ್ರ ಸರ್ಕಾರಕ್ಕೆ ಬರೆದು ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ಸ್ಥಳೀಯ ಮಂಡಳಿಯ ಸದಸ್ಯನು ಕೇಂದ್ರ ಮಂಡಳಿಗೆ ಬರೆದು ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ಆ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ ಆ ಪದವು ಖಾಲಿಯಾಗತಕ್ಕುದು.

**12. ಆಕಸ್ಮಿಕ ಖಾಲಿ ಸ್ಥಾನಗಳು ಮತ್ತು ಗೈರುಹಾಜರಿಗಳು.-** (1) ಗವರ್ನರನು ಅಥವಾ ಡೆಪ್ಯುಟಿ ಗವರ್ನರ್‌ನು ಅವನ ಅಶಕ್ತತೆಯಿಂದಾಗಿ ಅಥವಾ ಅನ್ಯಥಾ ಅವನ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥಗೊಂಡಿದ್ದರೆ ಅಥವಾ ರಜೆಯ ಮೇಲೆ ಇರುವುದರಿಂದ ಅಥವಾ ನೇಮಕಾತಿಯನ್ನು ತೆರವು ಮಾಡುವುದನ್ನು ಒಳಗೊಳ್ಳದ ಸಂದರ್ಭಗಳಲ್ಲಿ ಅನ್ಯಥಾ ಗೈರುಹಾಜರಾದರೆ, ಕೇಂದ್ರ ಸರ್ಕಾರವು ಈ ಬಗ್ಗೆ ಕೇಂದ್ರ ಮಂಡಳಿಯು ಮಾಡಿದ ಶಿಫಾರಸುಗಳನ್ನು ಪರ್ಯಾಲೋಚಿಸಿದ ತರುವಾಯ ಅವನ ಬದಲಿಗೆ ಕಾರ್ಯನಿರ್ವಹಿಸಲು ಇನ್ನೊಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು ಮತ್ತು ಅಂಥ ವ್ಯಕ್ತಿಯು 10ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಬ್ಯಾಂಕಿನ ಅಧಿಕಾರಿಯಾಗಿರಬಹುದು.

(2) * * * * *

(3) ಸ್ಥಳೀಯ ಮಂಡಳಿಯ ಯಾರೇ ಸದಸ್ಯನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿಸ್ಥಾನವು ಉಂಟಾದಲ್ಲಿ, ಕೇಂದ್ರ ಮಂಡಳಿಯು, ಅದಕ್ಕೆ ಸ್ಥಳೀಯ ಮಂಡಳಿಯ ಇತರ ಸದಸ್ಯರು ಶಿಫಾರಸು ಮಾಡಿದ ಯಾರೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು.

(4) (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿದ ಖಾಲಿ ಸ್ಥಾನಗಳನ್ನು ಹೊರತುಪಡಿಸಿ ನಿರ್ದೇಶಕನ ಪದದಲ್ಲಿ ಯಾವುದೇ ಆಕಸ್ಮಿಕ ಖಾಲಿಸ್ಥಾನವು ಉಂಟಾದಲ್ಲಿ ಆ ಖಾಲಿಸ್ಥಾನವನ್ನು ಕೇಂದ್ರ ಸರ್ಕಾರವು ಭರ್ತಿಮಾಡತಕ್ಕುದು.

(5) ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿ ಮಾಡಲು ಈ ಪ್ರಕರಣದ ಮೇರೆಗೆ ನಾಮ ನಿರ್ದೇಶನಗೊಂಡ ವ್ಯಕ್ತಿಯು, ಅವನ ಪೂರ್ವಾಧಿಕಾರಿಯ ಅವಧಿಯ ಮುಕ್ತಾಯವಾಗಿಲ್ಲದ ಭಾಗಕ್ಕಾಗಿ ಪದಧಾರಣ ಮಾಡತಕ್ಕುದು.

**13. ಕೇಂದ್ರ ಮಂಡಳಿಯ ಸಭೆಗಳು.-** (1) ಕೇಂದ್ರ ಮಂಡಳಿಯ ಸಭೆಗಳನ್ನು ಗವರ್ನರನು ಪ್ರತಿಯೊಂದು ವರ್ಷದಲ್ಲಿ ಕನಿಷ್ಠಪಕ್ಷ ಆರು ಬಾರಿ ಮತ್ತು ಪ್ರತಿಯೊಂದು ತ್ರೈಮಾಸಿಕದಲ್ಲಿ ಕನಿಷ್ಠಪಕ್ಷ ಒಂದು ಬಾರಿ ಕರೆಯತಕ್ಕುದು.

(2) ಯಾರೇ ನಾಲ್ವರು ನಿರ್ದೇಶಕರು ಯಾವುದೇ ಕಾಲದಲ್ಲಿ ಕೇಂದ್ರ ಮಂಡಳಿಯ ಸಭೆಯನ್ನು ಕರೆಯಲು ಗವರ್ನರನನ್ನು ಅಗತ್ಯಪಡಿಸಬಹುದು ಮತ್ತು ಗವರ್ನರನು ತದನುಸಾರವಾಗಿ ತಕ್ಷಣವೇ ಸಭೆಯನ್ನು ಕರೆಯತಕ್ಕುದು.

(3) ಗವರ್ನರನು, ಅಥವಾ ಯಾವುದೇ ಕಾರಣಕ್ಕಾಗಿ ಅವನು ಹಾಜರಿರಲು ಅಸಮರ್ಥನಾಗಿದ್ದರೆ ಅವನ ಪರವಾಗಿ ಮತವನ್ನು ಕೊಡಲು 8ನೇ ಪ್ರಕರಣದ (3)ನೇ ಉಪ ಪ್ರಕರಣದ ಪರಂತುಕದ ಮೇರೆಗೆ ಗವರ್ನರನು ಅಧಿಕೃತಗೊಳಿಸಿದ ಡೆಪ್ಯುಟಿ ಗವರ್ನರನು ಕೇಂದ್ರ ಮಂಡಳಿಗಳ ಸಭೆಗಳಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕುದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ ಅವನು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕುದು.

**14-16.** [***ಸಾಮಾನ್ಯ ಸಭೆಗಳು, ಮೊದಲ ಕೇಂದ್ರ ಮಂಡಳಿಯ ರಚನೆ, ಮೊದಲ ಸ್ಥಳೀಯ ಮಂಡಳಿಗಳ ರಚನೆ***] ಅಧಿನಿಯಮ 1948ರ 62ರ 7ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ 1-1-1949 ರಿಂದ ಜಾರಿಗೆ ಬರುವಂತೆ ನಿರಸಿತಗೊಂಡಿದೆ.

**17. ಬ್ಯಾಂಕು ನಡೆಸಬಹುದಾದಂಥ ವ್ಯವಹಾರ.-** ಬ್ಯಾಂಕ್, ಇಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ಹಲವಾರು ಬಗೆಯ ವ್ಯವಹಾರಗಳನ್ನು ನಡೆಸಲು ಮತ್ತು ಅವುಗಳ ಬಗ್ಗೆ ವ್ಯವಹರಿಸಲು ಅಧಿಕಾರವನ್ನು ಹೊಂದಿರತಕ್ಕುದು, ಎಂದರೆ:-

(1) ಕೇಂದ್ರ ಸರ್ಕಾರ, ರಾಜ್ಯಸರ್ಕಾರಗಳು, ಸ್ಥಳೀಯ ಪ್ರಾಧಿಕಾರಗಳು, ಬ್ಯಾಂಕುಗಳು ಮತ್ತು ಯಾರೇ ಇತರ ವ್ಯಕ್ತಿಗಳಿಂದ ಬಡ್ಡಿ ಇಲ್ಲದೆ ಠೇವಣಿಯಾಗಿ ಹಣವನ್ನು ಅಂಗೀಕರಿಸುವುದು ಮತ್ತು ಅವುಗಳಿಗಾಗಿ ಹಣವನ್ನು ಸಂಗ್ರಹಿಸುವುದು;

(2) (ಎ) ಭಾರತದಲ್ಲಿ ಬರೆಯಲಾದ ಮತ್ತು ಸಂದಾಯ ಮಾಡಬೇಕಾದ ಮತ್ತು ವಿನಿಮಯ ಪತ್ರಗಳ ಮತ್ತು ಪ್ರಾಮಿಸರಿ ನೋಟುಗಳ ಅಂಗೀಕಾರ ಅಥವಾ ಮುಂಗಡ ಮುರಿಕೆಯಲ್ಲಿ ಪ್ರಧಾನವಾಗಿ ತೊಡಗಿರುವಂಥ ಮತ್ತು ಈ ಬಗ್ಗೆ ಬ್ಯಾಂಕಿನಿಂದ ಅನುಮೋದಿತವಾಗಿರುವಂಥ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕು ಅಥವಾ ಯಾವುದೇ ಹಣಕಾಸು ಸಂಸ್ಥೆಯಾಗಿರುವಂಥ ಅದರ ಪೈಕಿ ಒಂದರ, ಎರಡು ಅಥವಾ ಅದಕ್ಕಿಂತ ಹೆಚ್ಚಿನ ಮಾನ್ಯತೆ ಪಡೆದಿರುವ ರುಜುಗಳನ್ನು ಹೊಂದಿರುವ ಪ್ರಾಮಾಣಿಕ ವಾಣಿಜ್ಯ ಅಥವಾ ವ್ಯಾಪಾರ ವ್ಯವಹಾರಗಳಿಂದ ಉದ್ಭವಿಸುವ ಮತ್ತು ರಿಯಾಯಿತಿ ದಿವಸಗಳನ್ನು ಹೊರತುಪಡಿಸಿ ಖರೀದಿ ಅಥವಾ ಮರುಮುಂಗಡ ಮುರಿಕೆಯ ದಿನಾಂಕದಿಂದ-

(i) ಭಾರತದಿಂದ ಸರಕುಗಳ ರಫ್ತಿಗೆ ಸಂಬಂಧಪಟ್ಟ ಯಾವುದೇ ಅಂಥ ವ್ಯವಹಾರದಿಂದ ಉದ್ಭವಿಸುವ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳ ಸಂದರ್ಭದಲ್ಲಿ ಒಂದು ನೂರ ಎಂಬತ್ತು ದಿವಸಗಳೊಳಗೆ, ಮತ್ತು

(ii) ಯಾವುದೇ ಇತರ ಸಂದರ್ಭದಲ್ಲಿ ತೊಂಬತ್ತು ದಿವಸಗಳೊಳಗೆ

-ವಾಯಿದೆ ತುಂಬುವ ಅಂಥ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳ ಖರೀದಿ, ಮಾರಾಟ ಮತ್ತು ಮರುಮುಂಗಡದ ಮುರಿಕೆ ಮಾಡುವುದು.

(ಬಿ) ಭಾರತದಲ್ಲಿ ಬರೆಯಲಾದ ಮತ್ತು ಸಂದಾಯ ಮಾಡಬೇಕಾದ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳನ್ನು ಅಂಗೀಕರಿಸುವುದರಲ್ಲಿ ಮತ್ತು ಮುಂಗಡ ಮುರಿಕೆಯಲ್ಲಿ ಪ್ರಧಾನವಾಗಿ ತೊಡಗಿರುವಂಥ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕು ಅಥವಾ ಯಾವುದೇ ಹಣಕಾಸು ಸಂಸ್ಥೆ- ಇವುಗಳ ಪೈಕಿ ಒಂದರ, ಎರಡು ಅಥವಾ ಅದಕ್ಕಿಂತ ಹೆಚ್ಚಿನ ಮಾನ್ಯತೆ ಪಡೆದ ರುಜುಗಳನ್ನು ಹೊಂದಿರುವ ಮತ್ತು ಈ ಬಗ್ಗೆ ಬ್ಯಾಂಕಿನಿಂದ ಅನುಮೋದಿತವಾಗಿರುವ ಮತ್ತು ಕೃಷಿ ಕಾರ್ಯಾಚರಣೆಗಳ ಅಥವಾ ಫಸಲುಗಳ ಕ್ರಯವಿಕ್ರಯಗಳಿಗೆ ಹಣಕಾಸು ಒದಗಿಸುವ ಉದ್ದೇಶಕ್ಕಾಗಿ ಬರೆದ ಅಥವಾ ಕೊಟ್ಟಂಥ ಮತ್ತು ರಿಯಾಯಿತಿ ದಿವಸಗಳನ್ನು ಹೊರತುಪಡಿಸಿ ಖರೀದಿ ಅಥವಾ ಮರುಮುಂಗಡ ಮುರಿಕೆಯ ದಿನಾಂಕದಿಂದ ಹದಿನೈದು ತಿಂಗಳುಗಳ ಒಳಗೆ ವಾಯಿದೆ ತುಂಬುವ ಅಂಥ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳ ಖರೀದಿ, ಮಾರಾಟ ಅಥವಾ ಮರುಮುಂಗಡ ಮುರಿಕೆ ಮಾಡುವುದು;

* * * * *

(ಬಿಬಿ) ಭಾರತದಲ್ಲಿ ಬರೆಯಲಾದ ಮತ್ತು ಸಂದಾಯಮಾಡಬೇಕಾದ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳನ್ನು ಅಂಗೀಕರಿಸುವುದರಲ್ಲಿ ಪ್ರಧಾನವಾಗಿ ತೊಡಗಿರುವಂಥ ರಾಜ್ಯ ಸಹಕಾರಿ ಬ್ಯಾಂಕು ಅಥವಾ ರಾಜ್ಯ ಹಣಕಾಸು ನಿಗಮ ಅಥವಾ ಯಾವುದೇ ಹಣಕಾಸು ಸಂಸ್ಥೆ ಇವುಗಳ ಪೈಕಿ ಒಂದರ, ಎರಡು ಅಥವಾ ಅದಕ್ಕಿಂತ ಹೆಚ್ಚಿನ ಮಾನ್ಯತೆ ಪಡೆದ ರುಜುಗಳನ್ನು ಹೊಂದಿರುವ ಮತ್ತು ಈ ಬಗ್ಗೆ ಬ್ಯಾಂಕಿನಿಂದ ಅನುಮೋದಿತವಾಗಿರುವಂಥ ಮತ್ತು ಬ್ಯಾಂಕಿನಿಂದ ಅನುಮೋದಿತವಾದ ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಉತ್ಪಾದನೆ ಅಥವಾ ಅವುಗಳ ಕ್ರಯವಿಕ್ರಯ ಚಟುವಟಿಕೆಗಳಿಗೆ ಹಣ ಒದಗಿಸುವ ಉದ್ದೇಶಕ್ಕಾಗಿ ಬರೆದ ಅಥವಾ ಕೊಟ್ಟ ರಿಯಾಯಿತಿ ದಿವಸಗಳನ್ನು ಹೊರತುಪಡಿಸಿ ಖರೀದಿ ಅಥವಾ ಮರು ಮುಂಗಡ ಮುರಿಕೆಯ ದಿನಾಂಕದಿಂದ ಹನ್ನೆರಡು ತಿಂಗಳುಗಳ ಒಳಗೆ ವಾಯಿದೆ ತುಂಬುವ ಅಂಥ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳನ್ನು ಖರೀದಿ, ಮಾರಾಟ ಮತ್ತು ಮರು ಮುಂಗಡ ಮುರಿಕೆ ಮಾಡುವುದು, ಪರಂತು, ಅಂಥ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳ ಅಸಲು ಮತ್ತು ಬಡ್ಡಿಯ ಸಂದಾಯದ ಬಗ್ಗೆ ರಾಜ್ಯ ಸರ್ಕಾರವು ಸಂಪೂರ್ಣ ಖಾತರಿಯನ್ನು ಕೊಟ್ಟಿರಬೇಕು.

(ಸಿ) ಭಾರತದಲ್ಲಿ ಬರೆಯಲಾದ ಮತ್ತು ಸಂದಾಯ ಮಾಡಬೇಕಾದ ಮತ್ತು ಅನುಸೂಚಿತ ಬ್ಯಾಂಕಿನ ರುಜುವನ್ನು ಹೊಂದಿರುವ ಮತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಭದ್ರತೆಗಳನ್ನು ಧಾರಣ ಮಾಡುವ ಅಥವಾ ಅವುಗಳಲ್ಲಿ ವ್ಯಾಪಾರ ಮಾಡುವ ಉದ್ದೇಶಕ್ಕಾಗಿ ಕೊಟ್ಟ ಅಥವಾ ಬರೆದ ಮತ್ತು ರಿಯಾಯಿತಿ ದಿವಸಗಳನ್ನು ಹೊರತುಪಡಿಸಿ, ಖರೀದಿ ಅಥವಾ ಮರು ಮುಂಗಡ ಮುರಿಕೆಯ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ ವಾಯಿದೆ ತುಂಬುವ ಅಂಥ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳನ್ನು ಖರೀದಿ, ಮಾರಾಟ ಮತ್ತು ಮರು ಮುಂಗಡ ಮುರಿಕೆ ಮಾಡುವುದು;

(3) (ಎ) ವಿದೇಶಿ ವಿನಿಮಯವನ್ನು ಅನುಸೂಚಿತ ಬ್ಯಾಂಕುಗಳಿಂದ ಖರೀದಿಸುವುದು ಮತ್ತು ಅವುಗಳಿಗೆ ಮಾರುವುದು;

(ಬಿ) ಅಂತರರಾಷ್ಟ್ರೀಯ ಹಣಕಾಸು ನಿಧಿಯ ಸದಸ್ಯನಾಗಿರುವಂಥ ಭಾರತದ ಹೊರಗಿನ ಯಾವುದೇ ದೇಶದಲ್ಲಿ ಯಾವುದೇ ಸ್ಥಳದಲ್ಲಿ ಅಥವಾ ಅದರ ಹೆಸರಿನಲ್ಲಿ ಬರೆದ ಮತ್ತು ಖರೀದಿ ಅಥವಾ ಮರು ಮುಂಗಡ ಮುರಿಕೆಯ ದಿನಾಂಕದಿಂದ-

(i) ಭಾರತದಿಂದ ಸರಕುಗಳ ರಫ್ತಿಗೆ ಸಂಬಂಧಪಟ್ಟ ಯಾವುದೇ ಪ್ರಾಮಾಣಿಕ ವ್ಯವಹಾರದಿಂದ ಉದ್ಭವಿಸುವ ವಿನಿಮಯ ಪತ್ರಗಳ ಸಂದರ್ಭದಲ್ಲಿ, ಒಂದು ನೂರ ಎಂಬತ್ತು ದಿವಸಗಳೊಳಗೆ; ಮತ್ತು

(ii) ಯಾವುದೇ ಇತರ ಸಂದರ್ಭದಲ್ಲಿ, ತೊಂಬತ್ತು ದಿವಸಗಳೊಳಗೆ

- ವಾಯಿದೆ ತುಂಬುವ ಅಂಥ ವಿನಿಮಯ ಪತ್ರಗಳನ್ನು (ಟ್ರೆಜರಿ ಬಿಲ್ಲುಗಳನ್ನು ಒಳಗೊಂಡು) ಖರೀದಿ, ಮಾರಾಟ ಅಥವಾ ಮರು ಮುಂಗಡ ಮುರಿಕೆ ಮಾಡುವುದು:

ಪರಂತು, ಯಾವುದೇ ಅಂಥ ಖರೀದಿ, ಮಾರಾಟ ಅಥವಾ ಮರು ಮುಂಗಡ ಮುರಿಕೆಯನ್ನು ಭಾರತದಲ್ಲಿನ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕುಗಳೊಂದಿಗೆ ಅಲ್ಲದೆ, ಮಾಡತಕ್ಕುದಲ್ಲ.

* * * * *

(3ಎ) ತಗಾದೆ ಮಾಡಿದಾಗ ಅಥವಾ ಒಂದುನೂರ ಎಂಬತ್ತು ದಿವಸಗಳನ್ನು ಮೀರದ ನಿಗದಿತ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ ಯಾವುದೇ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕಿನ ಪ್ರಾಮಿಸರಿ ನೋಟುಗಳ ಆಧಾರದ ಮೇಲೆ ಅಂಥ ಬ್ಯಾಂಕಿಗೆ ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು:

ಪರಂತು, ಸಾಲ ಪಡೆಯುವ ಬ್ಯಾಂಕು –

(i) ಅದು,–

(ಎ) ಭಾರತದಲ್ಲಿ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಸದಸ್ಯನಾಗಿರುವಂಥ ಭಾರತದ ಹೊರಗಿನ ಯಾವುದೇ ದೇಶದಲ್ಲಿ ಯಾವುದೇ ಸ್ಥಳದ ಹೆಸರಿನಲ್ಲಿ ಅಥವಾ ಭಾರತದ ರಾಜಪತ್ರದಲ್ಲಿ ಬ್ಯಾಂಕ್ ಈ ಬಗ್ಗೆ ಅಧಿಸೂಚಿಸಿದ ಯಾವುದೇ ಇತರ ದೇಶದಲ್ಲಿ ಬರೆದ, ಮತ್ತು

(ಬಿ) ಆ ಸಾಲ ಅಥವಾ ಮುಂಗಡದ ದಿನಾಂಕದಿಂದ ಒಂದು ನೂರ ಎಂಬತ್ತು ದಿವಸಗಳನ್ನು ಮೀರದೆ ವಾಯಿದೆ ತುಂಬುವ

– ಅಂಥ ಸಾಲಗಳು ಮತ್ತು ಮುಂಗಡಗಳ ಮೊಬಲಗಿಗಿಂತ ಕಡಿಮೆ ಇಲ್ಲದ ಮೌಲ್ಯದ ಹಾಗೂ ಭಾರತದಿಂದ ಸರಕುಗಳ ರಫ್ತಿಗೆ ಸಂಬಂಧಪಟ್ಟ ಯಾವುದೇ ವ್ಯವಹಾರದಿಂದ ಉದ್ಭವಿಸುವ ವಿನಿಮಯ ಪತ್ರಗಳನ್ನು ಧಾರಣ ಮಾಡಿದೆ ಎಂದು ಮತ್ತು ಅದು ಅಂಥ ಸಾಲಗಳು ಮತ್ತು ಮುಂಗಡಗಳ ಯಾವುದೇ ಭಾಗವು ಸಂದಾಯವಾಗದೆ ಉಳಿದಿರುವವರೆಗೆ ತತ್ಕಾಲದಲ್ಲಿ ಬರಬೇಕಾಗಿರುವ ಅಂಥ ಸಾಲಗಳ ಮತ್ತು ಮುಂಗಡಗಳ ಮೊಬಲಗಿಗಿಂತ ಕಡಿಮೆ ಇಲ್ಲದ ಮೌಲ್ಯದ ಅಂಥ ವಿನಿಮಯ ಪತ್ರಗಳನ್ನು ಧಾರಣ ಮಾಡುವುದು ಮುಂದುವರಿಯುವುದೆಂದು; ಅಥವಾ

(ii) ಅದು, ಯಾವುದೇ ಕಾಲದಲ್ಲಿ, ಪಡೆದುಕೊಂಡ ಆ ಸಾಲ ಅಥವಾ ಮುಂಗಡ ಅಥವಾ ಬರಬೇಕಾಗಿರುವ ಮೊಬಲಗು ಬ್ಯಾಂಕಿನಿಂದ ಸಾಲಪಡೆಯುವ ಬ್ಯಾಂಕು ಪಡೆದುಕೊಂಡ ಆ ಸಾಲ ಅಥವಾ ಮುಂಗಡದ ಬರಬೇಕಾಗಿರುವ ಮೊಬಲಗಿಗೆ ಕಡಿಮೆಯಾಗಿಲ್ಲದೆ ಇರುವ, ಭಾರತದಿಂದ ಸರಕುಗಳನ್ನು ರಫ್ತು ಮಾಡಲು ಭಾರತದಲ್ಲಿನ ರಫ್ತುದಾರ ಅಥವಾ ಯಾವನೇ ಇತರ ವ್ಯಕ್ತಿಗೆ ಸಾಧ್ಯವಾಗಿಸುವಂತೆ ಅವನಿಗೆ ಹಡಗಿನಲ್ಲಿ ಸರಕು ತುಂಬಿಸುವುದಕ್ಕೆ ಮುಂಚಿನ ಸಾಲ ಅಥವಾ ಮುಂಗಡವನ್ನು ಕೊಟ್ಟಿದೆ ಎಂದು

– ಬರಹದಲ್ಲಿ ಘೋಷಣೆಯನ್ನು ಒದಗಿಸಿರಬೇಕು.

(3ಬಿ) ತಗಾದೆ ಮಾಡಿದ ಮೇಲೆ ಅಥವಾ ಅಂಥ ಬ್ಯಾಂಕಿನ ಪ್ರಾಮಿಸರಿ ನೋಟುಗಳ ಆಧಾರದ ಮೇಲೆ ಒಂದು ನೂರ ಎಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರು ಸಂದಾಯ ಮಾಡಬೇಕಾದ ಸಾಲಗಳು ಮತ್ತು ಮುಂಗಡಗಳನ್ನು ಯಾವುದೇ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕಿಗೆ ಕೊಡುವುದು:

ಪರಂತು, ಆ ಸಾಲ ಪಡೆಯುವ ಬ್ಯಾಂಕು, ಪ್ರಾಮಾಣಿಕ ವಾಣಿಜ್ಯ ಅಥವಾ ವ್ಯಾಪಾರ ವ್ಯವಹಾರಗಳಿಗಾಗಿ ಅಥವಾ ಕೃಷಿ ಕಾರ್ಯಾಚರಣೆಗಳು ಅಥವಾ ಫಸಲುಗಳ ಕ್ರಯವಿಕ್ರಯಗಳಿಗೆ ಹಣಕಾಸನ್ನು ಒದಗಿಸುವುದಕ್ಕಾಗಿ ಅಥವಾ ಘೋಷಣೆಯಲ್ಲಿ ನಿರೂಪಿಸಿರುವಂತೆ ಇತರ ಕೃಷಿ ಉದ್ದೇಶಗಳಿಗಾಗಿ ಅದು ಸಾಲಗಳು ಅಥವಾ ಮುಂಗಡಗಳನ್ನು ಕೊಟ್ಟಿದೆ ಎಂದು ಬರಹದಲ್ಲಿ ಘೋಷಣೆಯನ್ನು ಒದಗಿಸಿರಬೇಕು ಮತ್ತು ಸದರಿ ಘೋಷಣೆಯು, ಬ್ಯಾಂಕು ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ಒಳಗೊಂಡಿರಬೇಕು;

(4) ಸ್ಥಳೀಯ ಪ್ರಾಧಿಕಾರಗಳು, ಅನುಸೂಚಿತ ಬ್ಯಾಂಕುಗಳು, ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ರಾಜ್ಯ ಹಣಕಾಸು ನಿಗಮಗಳಿಗೆ,-

(ಎ) ಯಾವುದರಲ್ಲಿ ಯುನೈಟೆಡ್ ಕಿಂಗ್‌ಡಂನ ಸಂಸತ್ತಿನ ಯಾವುದೇ ಅಧಿನಿಯಮದ ಮೂಲಕ ಅಥವಾ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನ್ಯಾಸದ ಹಣವನ್ನು ಹೂಡಲು ನ್ಯಾಸಧಾರಿಯನ್ನು ಅಧಿಕೃತಗೊಳಿಸಲಾಗಿದೆಯೋ ಆ ಸ್ಟಾಕುಗಳು, ನಿಧಿಗಳು ಮತ್ತು ಭದ್ರತೆಗಳು(ಸ್ಥಿರ ಸ್ವತ್ತನ್ನು ಹೊರತುಪಡಿಸಿ);

(ಬಿ) ಚಿನ್ನ ಅಥವಾ ಬೆಳ್ಳಿ ಅಥವಾ ಅದರ ಬಗೆಗಿನ ಸ್ವಾಮ್ಯದ ದಸ್ತಾವೇಜುಗಳು;

(ಸಿ) ಬ್ಯಾಂಕು ಖರೀದಿಸುವುದು ಅಥವಾ ಮರು ಮುಂಗಡ ಮುರಿಕೆ ಮಾಡುವುದು ಇವುಗಳಿಗಾಗಿ ಅರ್ಹವಾಗಿರುವ ಅಥವಾ ರಾಜ್ಯಸರ್ಕಾರವು ಅಸಲಿನ ಮರು ಸಂದಾಯ ಮತ್ತು ಬಡ್ಡಿಯ ಮರು ಸಂದಾಯದ ಬಗ್ಗೆ ಸಂಪೂರ್ಣವಾಗಿ ಖಾತರಿ ಕೊಟ್ಟಿರುವಂಥ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳು;

(ಡಿ) ಪ್ರಾಮಾಣಿಕ ವಾಣಿಜ್ಯ ಅಥವಾ ವ್ಯಾಪಾರ ವ್ಯವಹಾರಗಳಿಗಾಗಿ ಅಥವಾ ಕೃಷಿ ಕಾರ್ಯಾಚರಣೆಗಳು ಅಥವಾ ಫಸಲುಗಳ ಕ್ರಯ ವಿಕ್ರಯಕ್ಕೆ ಹಣಕಾಸು ಒದಗಿಸುವ ಉದ್ದೇಶಕ್ಕಾಗಿ ಕೊಟ್ಟ ಸಾಲ ಅಥವಾ ಮುಂಗಡಕ್ಕಾಗಿ ಭದ್ರತೆ ಎಂದು ಯಾವುದೇ ಅಂಥ ಬ್ಯಾಂಕಿಗೆ ವರ್ಗಾಯಿಸಲಾಗಿರುವ, ಹಸ್ತಾಂತರಣ ಮಾಡಲಾಗಿರುವ ಅಥವಾ ಒತ್ತೆಯಿಟ್ಟಿರುವ ದಸ್ತಾವೇಜುಗಳಾಗಿದ್ದು ಸರಕುಗಳ ಸ್ವಾಮ್ಯದ ದಸ್ತಾವೇಜುಗಳಿಂದ ಸಮರ್ಥಿತವಾದ ಯಾವುದೇ ಅನುಸೂಚಿತ ಬ್ಯಾಂಕು ಅಥವಾ ರಾಜ್ಯ ಸಹಕಾರಿ ಬ್ಯಾಂಕುಗಳ ಪ್ರಾಮಿಸರಿ ನೋಟುಗಳು

-ಇವುಗಳ ಭದ್ರತೆಯ ಮೇಲೆ ತಗಾದೆ ಮಾಡಿದ ಮೇಲೆ ಅಥವಾ ತೊಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರು ಸಂದಾಯ ಮಾಡಬೇಕಾದ ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು:

ಪರಂತು, ಭಾರತದಿಂದ ಸರಕುಗಳನ್ನು ರಫ್ತು ಮಾಡುವುದಕ್ಕೆ ಸಂಬಂಧಪಟ್ಟ ಯಾವುವೇ ವ್ಯವಹಾರಗಳಿಂದ ಉದ್ಭವಿಸುವ ವಿನಿಮಯ ಪತ್ರಗಳು ಮತ್ತು ಪ್ರಾಮಿಸರಿ ನೋಟುಗಳ ಭದ್ರತೆಯ ಮೇಲೆ ಕೊಟ್ಟ ಸಾಲಗಳು ಮತ್ತು ಮುಂಗಡಗಳನ್ನು, ತಗಾದೆ ಮಾಡಿದ ಮೇಲೆ ಅಥವಾ ಒಂದುನೂರ ಎಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರು ಸಂದಾಯ ಮಾಡತಕ್ಕುದು;

(4ಎ) ಯಾವುದೇ ಕಾಲಕ್ಕೆ ವಾಯಿದೆ ತುಂಬುವ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ, ಭದ್ರತಾ ಪತ್ರಗಳ ಆಧಾರದ ಮೇಲೆ ಅಥವಾ ಆ ನಿಗಮವು ಹೊರಡಿಸಿದ ಮತ್ತು ಸಂಬಂಧಪಟ್ಟ ರಾಜ್ಯಸರ್ಕಾರವು ಖಾತರಿಕೊಟ್ಟ ಮತ್ತು ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ಅವಧಿಯೊಳಗೆ ವಾಯಿದೆ ತುಂಬುವ ಬಂಧಪತ್ರಗಳು ಮತ್ತು ಡಿಬೆಂಚರುಗಳ ಆಧಾರದ ಮೇಲೆ, ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರು ಸಂದಾಯ ಮಾಡಬೇಕಾದ ಸಾಲಗಳು ಮತ್ತು ಮುಂಗಡಗಳನ್ನು ಯಾವುದೇ ರಾಜ್ಯ ಹಣಕಾಸು ನಿಗಮಕ್ಕೆ ಕೊಡುವುದು:

ಪರಂತು, ರಾಜ್ಯ ಹಣಕಾಸು ನಿಗಮವು, ಸಾಲವನ್ನು ಪಡೆಯುವುದಕ್ಕಾಗಿ ರಾಜ್ಯ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆಯತಕ್ಕುದು ಮತ್ತು ಈ ಖಂಡದ ಮೇರೆಗೆ ಆ ನಿಗಮಕ್ಕೆ ಕೊಟ್ಟ

ಸಾಲಗಳು ಮತ್ತು ಮುಂಗಡಗಳ ಮೊಬಲಗು, ಯಾವುದೇ ಕಾಲದಲ್ಲಿ ಅದರ ಸಂದಾಯ ಮಾಡಿದ ಷೇರು ಬಂಡವಾಳದ ಒಟ್ಟು ಶೇಕಡಾ ತೊಂಬತ್ತರಷ್ಟನ್ನು ಮೀರತಕ್ಕುದಲ್ಲ;

(4ಎಎ) ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1981 (1981ರ 61)ರ ಅನುಕ್ರಮವಾಗಿ 42 ಮತ್ತು 44ನೇ ಪ್ರಕರಣಗಳ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಗ್ರಾಮೀಣ ಸಾಲ(ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿ ಮತ್ತು ರಾಷ್ಟ್ರೀಯ ಗ್ರಾಮೀಣ ಸಾಲ (ಸ್ಥಿರೀಕರಣ) ನಿಧಿಗೆ ವಾರ್ಷಿಕ ವಂತಿಗೆಗಳನ್ನು ಕೊಡುವುದು;

(4ಬಿ) ಭಾರತ ಕೈಗಾರಿಕಾ ಹಣಕಾಸು ನಿಗಮಕ್ಕೆ,-

(ಎ) ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಭದ್ರತೆಗಳ ಆಧಾರದ ಮೇಲೆ ತಗಾದೆ ಮಾಡಿದ ಮೇಲೆ ಅಥವಾ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ತೊಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರು ಸಂದಾಯ ಮಾಡಬೇಕಾದ; ಅಥವಾ

(ಬಿ) ಯಾವುದೇ ಕಾಲಕ್ಕೆ ವಾಯಿದೆ ತುಂಬುವ ಕೇಂದ್ರ ಸರ್ಕಾರದ ಭದ್ರತಾಪತ್ರಗಳ ಆಧಾರದ ಮೇಲೆ ಅಥವಾ ಸದರಿ ನಿಗಮವು ಹೊರಡಿಸಿದ ಮತ್ತು ಕೇಂದ್ರ ಸರ್ಕಾರವು ಖಾತರಿಕೊಟ್ಟಿರುವ ಮತ್ತು ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ಅವಧಿಯೊಳಗೆ ವಾಯಿದೆ ತುಂಬುವ ಬಂಧಪತ್ರಗಳು ಮತ್ತು ಡಿಬೆಂಚರುಗಳ ಆಧಾರದ ಮೇಲೆ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಸಂದಾಯ ಮಾಡಬೇಕಾದ

- ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು;

(4ಬಿಬಿ) ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಿದ ಯಾವುದೇ ಹಣಕಾಸು ಸಂಸ್ಥೆಗೆ,-

(ಎ) ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯಸರ್ಕಾರದ ಭದ್ರತಾಪತ್ರಗಳ ಆಧಾರದ ಮೇಲೆ, ತಗಾದೆಯನ್ನು ಮಾಡಿದ ಮೇಲೆ ಅಥವಾ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ತೊಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ; ಅಥವಾ

(ಬಿ) ಯಾವುದೇ ಕಾಲಕ್ಕೆ ವಾಯಿದೆ ತುಂಬುವ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯಸರ್ಕಾರದ, ಭದ್ರತಾಪತ್ರಗಳ ಆಧಾರದ ಮೇಲೆ ಅಥವಾ ಆ ಹಣಕಾಸು ಸಂಸ್ಥೆಯು ಹೊರಡಿಸಿದ ಮತ್ತು ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ಖಾತರಿಕೊಟ್ಟಿರುವ ಮತ್ತು ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ಅವಧಿಯೊಳಗೆ ವಾಯಿದೆ ತುಂಬುವ ಬಂಧಪತ್ರಗಳು ಮತ್ತು ಡಿಬೆಂಚರುಗಳ ಆಧಾರದ ಮೇಲೆ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ

-ಸಾಲಗಳನ್ನು ಮತ್ತು ಮುಂಗಡಗಳನ್ನು ಕೊಡುವುದು:

ಪರಂತು, (ಬಿ) ಉಪಖಂಡದ ಮೇರೆಗೆ ಹಣಕಾಸು ಸಂಸ್ಥೆಗೆ ಕೊಟ್ಟ ಸಾಲಗಳು ಮತ್ತು ಮುಂಗಡಗಳ ಮೊಬಲಗು, ಯಾವುದೇ ಕಾಲದಲ್ಲಿ, ಅದರ ಸಂದಾಯ ಮಾಡಿದ ಷೇರು ಬಂಡವಾಳದ ಒಟ್ಟು ಶೇಕಡಾ ಅರವತ್ತರಷ್ಟನ್ನು ಮೀರತಕ್ಕುದಲ್ಲ.

(4ಬಿಬಿಬಿ) ಯೂನಿಟ್ ಟ್ರಸ್ಟ್‌ಗೆ-

(i) ಯಾವುದರಲ್ಲಿ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನ್ಯಾಸದ ಹಣವನ್ನು ಹೂಡಲು ನ್ಯಾಸಧಾರಿಯನ್ನು ಅಧಿಕೃತಗೊಳಿಸಲಾಗಿದೆಯೋ ಅದರಲ್ಲಿನ ಸ್ಟಾಕುಗಳು, ನಿಧಿಗಳು ಮತ್ತು ಭದ್ರತಾಪತ್ರಗಳ ಭದ್ರತೆಯ ಮೇಲೆ (ಸ್ಥಿರಸ್ವತ್ತನ್ನು ಹೊರತುಪಡಿಸಿ) ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ತಗಾದೆ ಮಾಡಿದ ಮೇಲೆ ಅಥವಾ ತೊಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ;

(ii) ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಹೊರಡಿಸಿದ ಮತ್ತು ಅದು ಖಾತರಿ ಕೊಟ್ಟಿರುವ ಯೂನಿಟ್ ಟ್ರಸ್ಟ್‌ನ ಬಂಧಪತ್ರಗಳ ಭದ್ರತೆಯ ಮೇಲೆ, ತಗಾದೆಯನ್ನು ಮಾಡಿದ ಮೇಲೆ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳ ಅವಧಿಯೊಳಗೆ ಮರುಸಂದಾಯ ಮಾಡಬೇಕಾದ;

(iii) ಭಾರತ ಯೂನಿಟ್ ಟ್ರಸ್ಟ್ ಅಧಿನಿಯಮ, 1963 (1963ರ 52)ರ ಮೇರೆಗಿನ ಮೊದಲನೇ ಯೂನಿಟ್ ಯೋಜನೆಯನ್ನು ಹೊರತುಪಡಿಸಿ ಯಾವುದೇ ಇತರ ಯೋಜನೆಯ ಉದ್ದೇಶಕ್ಕಾಗಿ, ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಬ್ಯಾಂಕು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಯೂನಿಟ್ ಟ್ರಸ್ಟ್‌ನ ಇತರ ಸ್ವತ್ತಿನ ಭದ್ರತೆಯ ಮೇಲೆ

–ಸಾಲಗಳು ಮತ್ತು ಮುಂಗಡಗಳನ್ನು ಕೊಡಬಹುದು.

(4ಸಿ) ಕೃಷಿ ಉತ್ಪನ್ನ (ಅಭಿವೃದ್ಧಿ ಮತ್ತು ಉಗ್ರಾಣ) ನಿಗಮ ಅಧಿನಿಯಮ, 1956 (1956ರ 28)ರ ಮೇರೆಗೆ ಸ್ಥಾಪಿತವಾದ ಉಗ್ರಾಣ ನಿಗಮಕ್ಕೆ–

(ಎ) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯಸರ್ಕಾರದ ಭದ್ರತಾಪತ್ರಗಳ ಆಧಾರದ ಮೇಲೆ ತಗಾದೆ ಮಾಡಿದ ಮೇಲೆ ಅಥವಾ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ, ತೊಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ, ಅಥವಾ

(ಬಿ) ಯಾವುದೇ ಕಾಲಕ್ಕೆ ವಾಯಿದೆ ತುಂಬುವ ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಭದ್ರತಾಪತ್ರಗಳ ಆಧಾರದ ಮೇಲೆ ಅಥವಾ ಯಾವುದಕ್ಕೆ ಸಾಲ ಅಥವಾ ಮುಂಗಡವನ್ನು ಕೊಡಲಾಗಿದೆಯೋ ಆ ನಿಗಮವು ಹೊರಡಿಸಿದ ಮತ್ತು ಕೇಂದ್ರ ಅಥವಾ ರಾಜ್ಯ ಸರ್ಕಾರವು ಖಾತ್ರಿ ಕೊಟ್ಟಿರುವ ಮತ್ತು ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ಅವಧಿಯೊಳಗೆ ವಾಯಿದೆ ತುಂಬುವ ಬಂಧಪತ್ರಗಳು ಮತ್ತು ಡಿಬೆಂಚರುಗಳ ಆಧಾರದ ಮೇಲೆ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ

–ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು:

ಪರಂತು, (ಬಿ) ಖಂಡದ ಮೇರೆಗೆ ಕೊಟ್ಟ ಸಾಲಗಳು ಮತ್ತು ಮುಂಗಡಗಳ ಮೊಬಲಗು, ಯಾವುದೇ ಕಾಲದಲ್ಲಿ, ಕೇಂದ್ರ ಉಗ್ರಾಣ ನಿಗಮದ ಸಂದರ್ಭದಲ್ಲಿ ಒಟ್ಟಾರೆ ಮೂರು ಕೋಟಿ ರೂಪಾಯಿಗಳನ್ನು ಮತ್ತು ರಾಜ್ಯ ಉಗ್ರಾಣ ನಿಗಮದ ಸಂದರ್ಭದಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ಮೀರತಕ್ಕುದಲ್ಲ;

(4ಡಿ) ಠೇವಣಿ ವಿಮಾ ನಿಗಮಕ್ಕೆ ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು; ಮತ್ತು ಕೇಂದ್ರ ಮಂಡಳಿಯು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳ ಮೇಲೆ ಸಾಮಾನ್ಯವಾಗಿ ನಿಗಮಕ್ಕೆ ಸಹಾಯ ಮಾಡುವುದು;

(4ಡಿಡಿ) ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವುದು ಮತ್ತು ಒಟ್ಟಾರೆ, ಕೇಂದ್ರ ಮಂಡಲಿಯು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳ ಮೇಲೆ ರಾಷ್ಟ್ರೀಯ ಗೃಹನಿರ್ಮಾಣ ಬ್ಯಾಂಕಿಗೆ ಸಹಾಯ ಒದಗಿಸುವುದು;

(4ಇ) ರಾಷ್ಟ್ರೀಯ ಬ್ಯಾಂಕಿಗೆ,-

(i) ಯಾವುದರಲ್ಲಿ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನ್ಯಾಸದ ಹಣವನ್ನು ಹೂಡಲು ನ್ಯಾಸಧಾರಿಯನ್ನು ಅಧಿಕೃತಗೊಳಿಸಲಾಗಿದೆಯೋ ಆ ಸ್ಟಾಕುಗಳು, ನಿಧಿಗಳು ಮತ್ತು ಭದ್ರತೆಗಳ (ಭದ್ರತೆಯ ಸ್ಥಿರಸ್ವತ್ತನ್ನು ಹೊರತುಪಡಿಸಿ) ಮೇಲೆಯೇ ಆಗಲಿ; ಅಥವಾ

(ii) ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ಇತರ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆಯೇ ಆಗಲಿ ತಗಾದೆ ಮಾಡಿದ ಮೇಲೆ ಸಾಲ ಅಥವಾ ಮುಂಗಡವನ್ನು ಕೊಡುವ ದಿನಾಂಕದಿಂದ ಹದಿನೆಂಟು ತಿಂಗಳುಗಳನ್ನು ಮೀರದ ನಿಗದಿಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು;

(4ಎಫ್) ಯೂನಿಟ್ ಟ್ರಸ್ಟ್‌ನ ಪ್ರಾರಂಭಿಕ ಬಂಡವಾಳಕ್ಕೆ ವಂತಿಗೆ ಕೊಡುವುದು;

(4ಜಿ) 46ಸಿ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಕೈಗಾರಿಕಾ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿಯಿಂದ ಅಭಿವೃದ್ಧಿ ಬ್ಯಾಂಕಿಗೆ ಅಥವಾ ಎಕ್ಸಿಮ್ ಬ್ಯಾಂಕಿಗೆ ಅಥವಾ ಪುನಾರಚನೆ ಬ್ಯಾಂಕಿಗೆ ಅಥವಾ ಸಣ್ಣ ಕೈಗಾರಿಕೆಗಳ ಬ್ಯಾಂಕಿಗೆ ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು ಮತ್ತು ಅವುಗಳ ಬಂಧಪತ್ರಗಳು ಮತ್ತು ಡಿಬೆಂಚರುಗಳನ್ನು ಖರೀದಿಸುವುದು;

(4ಜಿಜಿ) 46ಡಿ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಗೃಹ ನಿರ್ಮಾಣ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿಯಿಂದ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಾಲಗಳು ಮತ್ತು ಮುಂಗಡಗಳನ್ನು ನೀಡುವುದು ಮತ್ತು ಅದರ ಬಾಂಡುಗಳು ಮತ್ತು ಡಿಬೆಂಚರುಗಳನ್ನು ಖರೀದಿಸುವುದು;

(4ಎಚ್) ಅಭಿವೃದ್ಧಿ ಬ್ಯಾಂಕಿಗೆ ಅಥವಾ ಸಣ್ಣ ಕೈಗಾರಿಕೆಗಳ ಬ್ಯಾಂಕಿಗೆ,-

(ಎ) ಯಾವುದರಲ್ಲಿ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನ್ಯಾಸದ ಹಣವನ್ನು ಹೂಡಲು ನ್ಯಾಸಧಾರಿಯನ್ನು ಅಧಿಕೃತಗೊಳಿಸಲಾಗಿದೆಯೋ ಆ ಸ್ಟಾಕುಗಳು, ನಿಧಿಗಳು ಮತ್ತು ಭದ್ರತಾಪತ್ರಗಳ (ಸ್ಥಿರಸ್ವತ್ತನ್ನು ಹೊರತುಪಡಿಸಿ) ಭದ್ರತೆಯ ಮೇಲೆ ತಗಾದೆ ಮಾಡಿದ ಮೇಲೆ ಅಥವಾ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ತೊಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ; ಅಥವಾ

(ಬಿ) ಎರಡು ಅಥವಾ ಅದಕ್ಕಿಂತ ಹೆಚ್ಚಿನ ಮಾನ್ಯತೆ ಪಡೆದ ರುಜುಗಳನ್ನು ಹೊಂದಿರುವ ಪ್ರಾಮಾಣಿಕ ವಾಣಿಜ್ಯ ಅಥವಾ ವ್ಯಾಪಾರ ವ್ಯವಹಾರಗಳಿಂದ ಉದ್ಭವಿಸುವ ಮತ್ತು ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಐದು ವರ್ಷಗಳೊಳಗೆ ವಾಯಿದೆ ತುಂಬುವ ವಿನಿಮಯ

ಪತ್ರಗಳು ಅಥವಾ ಪ್ರಾಮಿಸರಿ ನೋಟುಗಳ ಭದ್ರತೆಯ ಮೇಲೆ ಅಂಥ ಸಾಲ ಮತ್ತು ಮುಂಗಡಗಳನ್ನು ಕೊಡುವುದು;

(4ಐ) ಅನುಸೂಚಿತ ಬ್ಯಾಂಕುಗಳು, ಅಭಿವೃದ್ಧಿ ಬ್ಯಾಂಕು, ಎಕ್ಸಿಮ್ ಬ್ಯಾಂಕು, ಪುನಾರಚನೆ ಬ್ಯಾಂಕ್ ಅಥವಾ ಸಣ್ಣ ಕೈಗಾರಿಕೆಗಳ ಬ್ಯಾಂಕ್ ಕೈಗಾರಿಕಾ ಹಣಕಾಸು ನಿಗಮ ಮತ್ತು ಬ್ಯಾಂಕಿನ ಶಿಫಾರಸಿನ ಮೇಲೆ ಕೇಂದ್ರ ಸರ್ಕಾರವು ಈ ಬಗ್ಗೆ ಅನುಮೋದಿಸಬಹುದಾದಂಥ ಯಾವುದೇ ಇತರ ಹಣಕಾಸು ಸಂಸ್ಥೆಗೆ ಸಂದರ್ಭಾನುಸಾರ ಅಂಥ ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಯು ಬಂಡವಾಳ ಸರಕುಗಳ ಆಮದಿಗೆ ಹಣಕಾಸನ್ನು ಒದಗಿಸುವ ಉದ್ದೇಶಕ್ಕಾಗಿ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ಬ್ಯಾಂಕಿನಿಂದ ವಿದೇಶೀ ವಿನಿಮಯವನ್ನು ಖರೀದಿಸಲು ಅವುಗಳಿಗೆ ಸಾಧ್ಯವನ್ನಾಗಿಸುವ ಉದ್ದೇಶಕ್ಕಾಗಿ, ತಗಾದೆ ಮಾಡಿದ ಮೇಲೆ ಅಥವಾ ಅನ್ಯಥಾ ಮತ್ತು ಕೇಂದ್ರ ಮಂಡಳಿಯು ಈ ಬಗ್ಗೆ ಅನುಮೋದಿಸಬಹುದಾದಂಥ ಭದ್ರತೆಯ ಮೇಲೆ ಮತ್ತು ಅಂಥ ಇತರ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮರು ಸಂದಾಯ ಮಾಡಬೇಕಾದ ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು;

(4ಜೆ) ಎಕ್ಸಿಮ್ ಬ್ಯಾಂಕಿಗೆ,–

(ಎ) ಯಾವ ಸ್ಟಾಕುಗಳು, ನಿಧಿಗಳು ಮತ್ತು ಭದ್ರತಾ ಪತ್ರಗಳಲ್ಲಿ, ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನ್ಯಾಸದ ಹಣವನ್ನು ಹೂಡಲು ನ್ಯಾಸಧಾರಿಯನ್ನು ಅಧಿಕೃತಗೊಳಿಸಲಾಗಿದೆಯೋ ಆ ಸ್ಟಾಕುಗಳು, ನಿಧಿಗಳು ಮತ್ತು ಭದ್ರತಾ ಪತ್ರಗಳ (ಸ್ಥಿರ ಸ್ವತ್ತನ್ನು ಹೊರತುಪಡಿಸಿ) ಭದ್ರತೆಯ ಮೇಲೆ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ತೊಂಬತ್ತು ದಿವಸಗಳನ್ನು ಮೀರದಂತೆ ನಿಗದಿಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ; ಅಥವಾ

(ಬಿ) ಮಾನ್ಯತೆ ಪಡೆದ ಎರಡು ಅಥವಾ ಅದಕ್ಕಿಂತ ಹೆಚ್ಚು ರುಜುಗಳನ್ನು ಹೊಂದಿರುವ ಮತ್ತು ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಐದು ವರ್ಷಗಳೊಳಗೆ ವಾಯಿದೆ ತುಂಬುವ ಪ್ರಾಮಾಣಿಕ ವಾಣಿಜ್ಯ ಅಥವಾ ವ್ಯಾಪಾರ ವಹಿವಾಟುಗಳಿಂದ ಉದ್ಭವಿಸುವ ವಿನಿಮಯ ಪತ್ರಗಳು ಅಥವಾ ಪ್ರಾಮಿಸರಿ ನೋಟುಗಳ ಭದ್ರತೆಯ ಮೇಲೆ

–ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು.

(4ಕೆ) ಪುನಾರಚನೆ ಬ್ಯಾಂಕಿಗೆ,–

(ಎ) ಯಾವ ಸ್ಟಾಕುಗಳು, ನಿಧಿಗಳು ಮತ್ತು ಭದ್ರತಾ ಪತ್ರಗಳಲ್ಲಿ, ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ನ್ಯಾಸದ ಹಣವನ್ನು ಹೂಡಲು ನ್ಯಾಸಧಾರಿಯನ್ನು ಅಧಿಕೃತಗೊಳಿಸಲಾಗಿದೆಯೋ ಆ ಸ್ಟಾಕುಗಳು, ನಿಧಿಗಳು ಮತ್ತು ಭದ್ರತಾ ಪತ್ರಗಳ (ಸ್ಥಿರ ಸ್ವತ್ತನ್ನು ಹೊರತುಪಡಿಸಿ) ಭದ್ರತೆಯ ಮೇಲೆ ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ತೊಂಭತ್ತು ದಿನಗಳಿಗೆ ಮೀರದಂತೆ ನಿಗದಿಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ; ಅಥವಾ

(ಬಿ) ಮಾನ್ಯತೆ ಪಡೆದ ಎರಡು ಅಥವಾ ಅದಕ್ಕಿಂತ ಹೆಚ್ಚು ರುಜುಗಳನ್ನು ಹೊಂದಿರುವ ಮತ್ತು ಅಂಥ ಸಾಲ ಅಥವಾ ಮುಂಗಡದ ದಿನಾಂಕದಿಂದ ಐದು ವರ್ಷಗಳೊಳಗೆ ವಾಯಿದೆ ತುಂಬುವ ಪ್ರಾಮಾಣಿಕ ವಾಣಿಜ್ಯ ಅಥವಾ ವ್ಯಾಪಾರ ವಹಿವಾಟುಗಳಿಂದ ಉದ್ಭವಿಸುವ ವಿನಿಮಯ ಪತ್ರಗಳು ಅಥವಾ ಪ್ರಾಮಿಸರಿ ನೋಟುಗಳ ಭದ್ರತೆಯ ಮೇಲೆ,

– ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು.

(5) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಆ ಮುಂಗಡವನ್ನು ಕೊಡುವ ದಿನಾಂಕದಿಂದ ಪ್ರತಿಯೊಂದು ಸಂದರ್ಭದಲ್ಲಿ ಮೂರು ತಿಂಗಳುಗಳನ್ನು ಮೀರದಂತೆ ಮರು ಸಂದಾಯ ಮಾಡಬೇಕಾದ ಮುಂಗಡಗಳನ್ನು ಕೊಡುವುದು;

(6) ಅದರ ಕಛೇರಿಗಳು ಅಥವಾ ಏಜೆನ್ಸಿಗಳಲ್ಲಿ ಸಂದಾಯ ಮಾಡುವ ಹಾಗೆ ಡಿಮ್ಯಾಂಡ್ ಡ್ರಾಫ್ಟುಗಳು, ತಂತಿ ವರ್ಗಾವಣೆಗಳು ಮತ್ತು ಇತರ ಬಗೆಗಳ ಇರಸಾಲುಗಳನ್ನು ಕೊಡುವುದು, ತಂತಿ ವರ್ಗಾವಣೆಗಳನ್ನು ಖರೀದಿಸುವುದು ಮತ್ತು ಬ್ಯಾಂಕ್ ಪೋಸ್ಟ್ ಬಿಲ್ಲುಗಳನ್ನು ಕೊಡುವುದು, ಹೊರಡಿಸುವುದು ಮತ್ತು ಪರಿಚಲನೆ ಮಾಡುವುದು.

(7) * * * * *

(8) ಯಾವುದೇ ಕಾಲಕ್ಕೆ ವಾಯಿದೆ ತುಂಬುವ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಭದ್ರತಾಪತ್ರಗಳು ಅಥವಾ ಕೇಂದ್ರ ಮಂಡಳಿಯ ಶಿಫಾರಸಿನ ಮೇಲೆ, ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಪ್ರಾಧಿಕಾರದ ಭದ್ರತಾಪತ್ರಗಳನ್ನು ಖರೀದಿಸುವುದು ಮತ್ತು ಮಾರಾಟ ಮಾಡುವುದು:

ಪರಂತು, ಯಾವುದೇ ಅಂಥ ಸರ್ಕಾರ ಅಥವಾ ಪ್ರಾಧಿಕಾರವು ಬಂಡವಾಳ ಮತ್ತು ಬಡ್ಡಿಯ ಬಗ್ಗೆ, ಸಂಪೂರ್ಣವಾಗಿ ಖಾತರಿ ಕೊಟ್ಟಿರುವ ಭದ್ರತಾಪತ್ರಗಳನ್ನು, ಈ ಖಂಡದ ಉದ್ದೇಶಗಳಿಗಾಗಿ ಅಂಥ ಸರ್ಕಾರ ಅಥವಾ ಪ್ರಾಧಿಕಾರದ ಭದ್ರತಾಪತ್ರಗಳಾಗಿರುವುದಾಗಿ ಭಾವಿಸತಕ್ಕುದು;

* * * *

(8ಎ) ರಾಷ್ಟ್ರೀಯ ಬ್ಯಾಂಕು, ಠೇವಣಿ ವಿಮಾ ನಿಗಮ, ಅಭಿವೃದ್ಧಿ ಬ್ಯಾಂಕು, ಸ್ಟೇಟ್ ಬ್ಯಾಂಕು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಿದ ಹಣಕಾಸು ನಿಗಮದಲ್ಲಿ ಷೇರುಗಳನ್ನು ಅಥವಾ ಬಂಡವಾಳವನ್ನು ಖರೀದಿಸುವುದು ಮತ್ತು ಅವುಗಳನ್ನು ಮಾರಾಟ ಮಾಡುವುದು;

(8ಎಎ) ಯಾವುದೇ ಹಣಕಾಸು ಸಂಸ್ಥೆಯನ್ನು, ಅದು ಸಹಾಯಕ ಸಂಸ್ಥೆಯಾಗಿರಲಿ ಅಥವಾ ಅನ್ಯಥಾ ಇರಲಿ ಪ್ರವರ್ಧಿಸುವುದು, ಸ್ಥಾಪಿಸುವುದು ಮತ್ತು ಬೆಂಬಲಿಸುವುದು ಅಥವಾ ಅದರ ಪ್ರವರ್ಧನೆ, ಸ್ಥಾಪನೆಯಲ್ಲಿ ಮತ್ತು ಬೆಂಬಲಿಸಿ ಅದಕ್ಕೆ ನೆರವು ನೀಡುವುದು.

(8ಬಿ) ಈ ಬಗ್ಗೆ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥ ನಿರ್ದಿಷ್ಟ ಉದ್ದೇಶಗಳಿಗಾಗಿ ಸ್ಟೇಟ್ ಬ್ಯಾಂಕಿನಲ್ಲಿ ಠೇವಣಿಗಳನ್ನು ಇಡುವುದು;

(9) ಹಣಗಳು, ಭದ್ರತಾಪತ್ರಗಳು ಮತ್ತು ಮೌಲ್ಯದ ಇತರ ವಸ್ತುಗಳ ಅಭಿರಕ್ಷೆ ಮತ್ತು ಯಾವುದೇ ಅಂಥ ಭದ್ರತಾಪತ್ರಗಳ ಬಗ್ಗೆ ಬಂಡವಾಳವೇ ಆಗಿರಲಿ, ಬಡ್ಡಿಯೇ ಆಗಿರಲಿ ಅಥವಾ ಲಾಭಾಂಶಗಳೇ ಆಗಿರಲಿ– ಉತ್ಪತ್ತಿಗಳ ಸಂಗ್ರಹಣೆ;

(10) ಅದರ ಯಾವುದೇ ಕ್ಲೇಮಿನ ತೀರಿಕೆ ಅಥವಾ ಭಾಗಶಃ ತೀರಿಕೆಯಲ್ಲಿ ಬ್ಯಾಂಕಿನ ಸ್ವಾಧೀನಕ್ಕೆ ಯಾವುದೇ ರೀತಿಯಿಂದ ಬರಬಹುದಾದಂಥ ಎಲ್ಲಾ ಸ್ವತ್ತಿನ ಅದು ಚರ ಅಥವಾ ಸ್ಥಿರ ಸ್ವತ್ತೇ ಆಗಿರಲಿ– ಮಾರಾಟ ಮತ್ತು ಅದನ್ನು ಪಡೆಯುವುದು;

(11) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಭಾರತ ಕೈಗಾರಿಕಾ ಹಣಕಾಸು ನಿಗಮ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಅಥವಾ ರಚಿತವಾದಂಥ ಯಾವುದೇ ಇತರ

ನಿಗಮಿತ ನಿಕಾಯ ಅಥವಾ ಭಾರತದ ಹೊರಗಿನ ಯಾವುದೇ ಅಂಥ ದೇಶದ ಸರ್ಕಾರ, ಈ ಬಗ್ಗೆ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥ ಯಾವನೇ ವ್ಯಕ್ತಿ ಅಥವಾ ಪ್ರಾಧಿಕಾರಿಗಾಗಿ ಈ ಕೆಳಕಂಡ ಬಗೆಯ ಯಾವುದೇ ವ್ಯವಹಾರವನ್ನು ನಡೆಸುವುದರಲ್ಲಿ ಏಜೆಂಟನಾಗಿ ಕಾರ್ಯನಿರ್ವಹಿಸುವುದು, ಎಂದರೆ:-

(ಎ) ಚಿನ್ನ ಅಥವಾ ಬೆಳ್ಳಿ ಅಥವಾ ವಿದೇಶೀ ವಿನಿಮಯವನ್ನು ಖರೀದಿಸುವುದು ಮತ್ತು ಮಾರಾಟ ಮಾಡುವುದು;

(ಬಿ) ವಿನಿಮಯ ಪತ್ರಗಳು, ಭದ್ರತಾಪತ್ರಗಳು ಅಥವಾ ಯಾವುದೇ ಕಂಪನಿಯಲ್ಲಿನ ಷೇರುಗಳನ್ನು ಖರೀದಿಸುವುದು, ಮಾರಾಟ ಮಾಡುವುದು, ವರ್ಗಾವಣೆ ಮಾಡುವುದು ಮತ್ತು ಅವುಗಳನ್ನು ಅಭಿರಕ್ಷೆಯಲ್ಲಿಟ್ಟುಕೊಳ್ಳುವುದು;

(ಸಿ) ಯಾವುವೇ ಭದ್ರತಾಪತ್ರಗಳು ಅಥವಾ ಷೇರುಗಳ ಉತ್ಪತ್ತಿಯ ಅಸಲೇ ಆಗಿರಲಿ ಅಥವಾ ಬಡ್ಡಿಯೇ ಆಗಿರಲಿ ಅಥವಾ ಲಾಭಾಂಶಗಳೇ ಆಗಿರಲಿ- ಸಂಗ್ರಹಣೆ;

(ಡಿ) ಯಜಮಾನನ ಹೊಣೆಯ ಮೇಲೆ ಭಾರತದಲ್ಲಾಗಲೀ ಅಥವಾ ಬೇರೆಡೆಯಲ್ಲಾಗಲಿ ಸಂದಾಯ ಮಾಡಬೇಕಾದ ವಿನಿಮಯ ಪತ್ರಗಳ ಮೂಲಕ, ಅಂಥ ಉತ್ಪನ್ನಗಳನ್ನು ರವಾನೆ ಮಾಡುವುದು;

(ಇ) ಸಾರ್ವಜನಿಕ ಸಾಲದ ವ್ಯವಸ್ಥಾಪನೆ;

(ಎಫ್) ಬಾಂಡುಗಳು ಮತ್ತು ಡಿಬೆಂಚರುಗಳನ್ನು ಹೊರಡಿಸುವುದು ಮತ್ತು ಅವುಗಳ ವ್ಯವಸ್ಥಾಪನೆ;

(11ಎ) ಕೇಂದ್ರ ಸರ್ಕಾರಕ್ಕಾಗಿ-

(ಎ) * * * * *

(ಬಿ) ಭಾರತದಿಂದ ಯಾವುದೇ ರಫ್ತು ಮಾಡುವುದಕ್ಕಾಗಿ ಹಣಕಾಸನ್ನು ಒದಗಿಸುವುದು ಅಥವಾ ಅದಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶಕ್ಕಾಗಿ, ಬ್ಯಾಂಕುಗಳು ಅಥವಾ ಇತರ ಹಣಕಾಸು ಸಂಸ್ಥೆಗಳು ಕೊಟ್ಟ ಯಾವುವೇ ಸಾಲಗಳು ಅಥವಾ ಮುಂಗಡಗಳು ಅಥವಾ ಒದಗಿಸಿದ ಇತರ ಸಾಲ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಬಡ್ಡಿಯ ದರ ಅಥವಾ ಇತರ ವೆಚ್ಚಗಳ ಬಗ್ಗೆ ಸಹಾಯ ಧನವನ್ನು ಒದಗಿಸುವ ಯಾವುದೇ ಯೋಜನೆಯನ್ನು ಜಾರಿಗೊಳಿಸುವಲ್ಲಿ ಮತ್ತು ಅಂಥ ಏಜೆಂಟನಾಗಿ ಕೇಂದ್ರ ಸರ್ಕಾರದ ಪರವಾಗಿ ಸಂದಾಯಗಳನ್ನು ಮಾಡುವಲ್ಲಿ

-ಏಜೆಂಟನೆಂದು ಕಾರ್ಯ ನಿರ್ವಹಿಸುವುದು;

(12) ಚಿನ್ನ ಅಥವಾ ಬೆಳ್ಳಿಯ ನಾಣ್ಯಗಳು ಮತ್ತು ಚಿನ್ನ ಮತ್ತು ಬೆಳ್ಳಿಗಳು ಮತ್ತು ವಿದೇಶಿ ವಿನಿಮಯವನ್ನು ಖರೀದಿಸುವುದು ಮತ್ತು ಮಾರಾಟ ಮಾಡುವುದು ಮತ್ತು ಯಾವುದೇ ವಿದೇಶದ ಪ್ರಧಾನ ಕರೆನ್ಸಿ ಪ್ರಾಧಿಕಾರ ಅಥವಾ ಅಂತರರಾಷ್ಟ್ರೀಯ ಒಪ್ಪಂದಗಳಿಗಾಗಿನ ಬ್ಯಾಂಕು ಅಥವಾ ಅಂಥ ಪ್ರಧಾನ ಕರೆನ್ಸಿ ಪ್ರಾಧಿಕಾರ ಅಥವಾ ಪ್ರಾಧಿಕಾರಗಳು ಅಥವಾ ಯಾವುದೇ ವಿದೇಶಿ ಸರ್ಕಾರವು ರಚಿಸಿದ ಹಣಕಾಸು ಸಂಸ್ಥೆಯಲ್ಲಿ ಚಿನ್ನದ ಖಾತೆಯನ್ನು ತೆಗೆಯುವುದು;

(12ಎ) ಭಾರತದ ಹೊರಗಿನ ಯಾವುದೇ ದೇಶದ ಸರ್ಕಾರವು ಅಥವಾ ಭಾರತದ ಹೊರಗಡೆ ಸ್ಥಾಪಿಸಲಾಗಿರುವ ಯಾವುದೇ ಸಂಸ್ಥೆ ಅಥವಾ ನಿಗಮಿತ ನಿಕಾಯವು ಹೊರಡಿಸಿದ ಮತ್ತು ವಿದೇಶಿ ಕರೆನ್ಸಿ ಅಥವಾ ಯಾವುದೇ ಅಂತರರಾಷ್ಟ್ರೀಯ ಅಥವಾ ಸಂಯುಕ್ತ ಕರೆನ್ಸಿ ಘಟಕದಲ್ಲಿ ಸಂದಾಯ

ಮಾಡಬೇಕೆಂದು ವ್ಯಕ್ತಪಡಿಸಿದ, ಬ್ಯಾಂಕು ಖರೀದಿಸುವ ಸಂದರ್ಭದಲ್ಲಿ, ಖರೀದಿಯ ದಿನಾಂಕದಿಂದ ಹತ್ತು ವರ್ಷಗಳ ಅವಧಿಯ ಒಳಗೆ ವಾಯಿದೆ ತುಂಬುವ ಭದ್ರತಾ ಪತ್ರಗಳಾಗಿರುವ ಭದ್ರತಾಪತ್ರಗಳನ್ನು ಖರೀದಿಸುವುದು ಮತ್ತು ಮಾರಾಟ ಮಾಡುವುದು:

ಪರಂತು, ಒಂದು ಸಂಸ್ಥೆಯ ಅಥವಾ ನಿಗಮಿತ ನಿಕಾಯದ ಭದ್ರತಾಪತ್ರಗಳ ಸಂದರ್ಭದಲ್ಲಿ, ಅಂಥ ಭದ್ರತಾಪತ್ರಗಳಿಗೆ ಸಂಬಂಧಿಸಿದಂತೆ ಅಸಲಿನ ಮರುಸಂದಾಯ ಮತ್ತು ಬಡ್ಡಿಯ ಸಂದಾಯದ ಬಗ್ಗೆ ಸಂಬಂಧಪಟ್ಟ ದೇಶದ ಸರ್ಕಾರವು ಖಾತ್ರಿಯನ್ನು ಕೊಡತಕ್ಕುದು;

(12ಬಿ) ಅನುಸೂಚಿತ ಬ್ಯಾಂಕುಗಳು, ಅಭಿವೃದ್ಧಿ ಬ್ಯಾಂಕು, ಎಕ್ಸಿಂ ಬ್ಯಾಂಕು, ಪುನಾರಚನೆ ಬ್ಯಾಂಕು ಅಥವಾ ಸಣ್ಣ ಕೈಗಾರಿಕೆಗಳ ಬ್ಯಾಂಕು, ಕೈಗಾರಿಕಾ ಹಣಕಾಸು ನಿಗಮ, ಯಾವುದೇ ರಾಜ್ಯ ಹಣಕಾಸು ನಿಗಮ ಮತ್ತು ಬ್ಯಾಂಕಿನ ಶಿಫಾರಸಿನ ಮೇಲೆ, ಕೇಂದ್ರ ಸರ್ಕಾರವು ಅನುಮೋದಿಸಬಹುದಾದ ಇತರ ಹಣಕಾಸು ಸಂಸ್ಥೆಗೆ ಮತ್ತು ಈ ಬಗ್ಗೆ ಕೇಂದ್ರ ಮಂಡಳಿಯು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಸಂದರ್ಭಾನುಸಾರ ಬ್ಯಾಂಕು ಅಥವಾ ಹಣಕಾಸು ಸಂಸ್ಥೆಯ ಪ್ರಾಮಿಸರಿ ನೋಟುಗಳ ಆಧಾರದ ಮೇಲೆ ವಿದೇಶೀ ಕರೆನ್ಸಿಯಲ್ಲಿ ಅಂಥ ಸಾಲಗಳು ಮತ್ತು ಮುಂಗಡಗಳನ್ನು ಕೊಡುವುದು:

ಪರಂತು, ಸಂದರ್ಭಾನುಸಾರ, ಸಾಲ ಪಡೆಯುವ ಬ್ಯಾಂಕು ಅಥವಾ ಹಣಕಾಸು ಸಂಸ್ಥೆಯು–

(ಎ) ಅದು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಹಣಕಾಸು ಒದಗಿಸುವುದಕ್ಕಾಗಿ ಅಥವಾ ಬಂಡವಾಳ ಸರಕುಗಳನ್ನು ಆಮದು ಮಾಡಿಕೊಳ್ಳುವುದಕ್ಕಾಗಿ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ವಿದೇಶಿ ಕರೆನ್ಸಿಗಳಲ್ಲಿ ಸಾಲಗಳು ಮತ್ತು ಮುಂಗಡಗಳನ್ನು ಕೊಟ್ಟಿದೆಯೆಂದು; ಮತ್ತು

(ಬಿ) ಯಾವುದೇ ಕಾಲದಲ್ಲಿ ಹಾಗೆ ಕೊಟ್ಟಿರುವ ಮತ್ತು ಬರಬೇಕಾಗಿರುವ ಸಾಲಗಳು ಮತ್ತು ಮುಂಗಡಗಳ ಮೊಬಲಗು ಬ್ಯಾಂಕಿನಿಂದ ಅದು ಪಡೆದುಕೊಂಡಿರುವ ಸಾಲಗಳು ಮತ್ತು ಮುಂಗಡಗಳ ಬರಬೇಕಾದ ಮೊಬಲಗಿಗಿಂತ ಕಡಿಮೆ ಇರುವುದಿಲ್ಲವೆಂದು

–ಬರಹದಲ್ಲಿ ಘೋಷಣೆಯನ್ನು ಒದಗಿಸಬೇಕು;

(13) ಭಾರತದಲ್ಲಿ ನಿಗಮನಗೊಂಡಿರುವ ಬ್ಯಾಂಕನ್ನು ಒಳಗೊಂಡು, ಭಾರತದ ಹೊರಗಡೆ ಇರುವ ಯಾವುದೇ ಬ್ಯಾಂಕಿನ ಕಛೇರಿಯಲ್ಲಿ ಖಾತೆಯನ್ನು ತೆರೆಯುವುದು ಅಥವಾ ಭಾರತದ ಹೊರಗಡೆ ನಿಗಮನಗೊಂಡಿರುವ ಯಾವುದೇ ಬ್ಯಾಂಕು, ಅಥವಾ ಆ ದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಯಾವುದೇ ದೇಶದ ಪ್ರಧಾನ ಕರೆನ್ಸಿ ಪ್ರಾಧಿಕಾರ ಅಥವಾ ಅಂಥ ಪ್ರಧಾನ ಕರೆನ್ಸಿ ಪ್ರಾಧಿಕಾರಗಳು ಅಥವಾ ವಿದೇಶೀ ಸರ್ಕಾರಗಳು ರಚಿಸಿರುವ ಯಾವುದೇ ಅಂತರರಾಷ್ಟ್ರೀಯ ಅಥವಾ ಪ್ರಾದೇಶಿಕ ಬ್ಯಾಂಕು ಅಥವಾ ಹಣಕಾಸು ಸಂಸ್ಥೆಗೆ ಏಜೆಂಟನೆಂದು ಅಥವಾ ಬಾತ್ಮೀದಾರನೆಂದು ಕೆಲಸ ನಿರ್ವಹಿಸುವುದು ಮತ್ತು ಬ್ಯಾಂಕಿನ ನಿಧಿಗಳನ್ನು ಯಾವುದೇ ಅಂಥ ಅಂತರರಾಷ್ಟ್ರೀಯ ಅಥವಾ ಪ್ರಾದೇಶಿಕ ಬ್ಯಾಂಕು ಅಥವಾ ಹಣಕಾಸು ಸಂಸ್ಥೆಯ ಅಥವಾ ಈ ಬಗ್ಗೆ ಕೇಂದ್ರ ಮಂಡಳಿಯು ಅನುಮೋದಿಸಬಹುದಾದ ಯಾವುದೇ ಇತರ ವಿದೇಶೀ ಸಂಸ್ಥೆಯ ಷೇರುಗಳು ಮತ್ತು ಭದ್ರತಾ ಪತ್ರಗಳಲ್ಲಿ ಹೂಡುವುದು;

(13ಎ) ಯಾವುದೇ ಇತರ ದೇಶ ಅಥವಾ ದೇಶಗಳ ಗುಂಪಿನೊಂದಿಗೆ ಭಾರತದ ವಿದೇಶೀ ವ್ಯಾಪಾರದ ಕಾರಣದಿಂದಾಗಿ ಯಾವನೇ ವ್ಯಕ್ತಿಯಿಂದ ಅಥವಾ ಪ್ರಾಧಿಕಾರದಿಂದ ಬಾಕಿಯಾದ ಅಥವಾ ಅವನಿಗೆ ಅಥವಾ ಅದಕ್ಕೆ ಕೊಡಬೇಕಾದ ಯಾವುವೇ ಮೊಬಲಗುಗಳು ಅಥವಾ ಅದಕ್ಕೆ

ಸಂಬಂಧಿಸಿದಂತೆ ಯಾವುದೇ ಕರೆನ್ಸಿಯಲ್ಲಿ ಯಾವುದೇ ಮೊಬಲಗನ್ನು ಮುಂಗಡವಾಗಿ ಕೊಡುವುದು ಅಥವಾ ಸ್ವೀಕರಿಸುವುದನ್ನು ಒಳಗೊಂಡು ಆ ದೇಶ ಅಥವಾ ದೇಶಗಳ ಗುಂಪಿಗೆ ಯಾವುದೇ ಜಮೆಗಳ ಅಥವಾ ಯಾವುದೇ ಕರೆನ್ಸಿಯಲ್ಲಿ ಯಾವುದೇ ಮೊಬಲಗನ್ನು ಸ್ವೀಕರಿಸುವ ಬಗ್ಗೆ ತೀರಿಕೆ ಮತ್ತು ಇತ್ಯರ್ಥಕ್ಕಾಗಿನ ಯಾವುದೇ ವ್ಯವಸ್ಥೆಯಲ್ಲಿ ಭಾಗವಹಿಸುವುದು ಮತ್ತು ಆ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಕೇಂದ್ರ ಬ್ಯಾಂಕುಗಳು, ಹಣಕಾಸು ಅಥವಾ ಇತರ ಪ್ರಾಧಿಕಾರಗಳ ಯಾವುದೇ ಅಂತರರಾಷ್ಟ್ರೀಯ ಅಥವಾ ಪ್ರಾಂತೀಯ ತೀರಿಕೆ ಸಂಘದ ಸದಸ್ಯನಾಗುವುದು ಅಥವಾ ಯಾವುದೇ ಅಂಥ ತೀರಿಕೆ ವ್ಯವಸ್ಥೆಗಳೊಂದಿಗೆ ಸಹವರ್ತಿಸುವುದು ಅಥವಾ ಕೇಂದ್ರ ಬ್ಯಾಂಕುಗಳು, ಹಣಕಾಸು ಅಥವಾ ಇತರ ಅಂಥವೇ ಪ್ರಾಧಿಕಾರಗಳು ರೂಪಿಸಿದ ಯಾವುದೇ ನಿಕಾಯ ಅಥವಾ ಸಂಘದ ಸದಸ್ಯನಾಗುವುದು ಅಥವಾ ಅದರೊಂದಿಗೆ ಯಾವುದೇ ರೀತಿಯಲ್ಲಿ ಸಹವರ್ತಿಸುವುದು;

(14) ಆ ಬ್ಯಾಂಕಿನ ವ್ಯವಹಾರದ ಉದ್ದೇಶಗಳಿಗಾಗಿ ಒಂದು ತಿಂಗಳನ್ನು ಮೀರದ ಅವಧಿಯವರೆಗೆ ಹಣವನ್ನು ಸಾಲವಾಗಿ ಪಡೆಯುವುದು ಮತ್ತು ಹಾಗೆ ಸಾಲವಾಗಿ ಪಡೆದುಕೊಂಡ ಹಣಕ್ಕಾಗಿ ಭದ್ರತೆಯನ್ನು ಕೊಡುವುದು:

ಪರಂತು, ಅನುಸೂಚಿತ ಬ್ಯಾಂಕನ್ನು ಹೊರತುಪಡಿಸಿ ಭಾರತದಲ್ಲಿನ ಯಾವನೇ ವ್ಯಕ್ತಿಯಿಂದ ಅಥವಾ ಯಾವುದೇ ದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಆ ದೇಶದ ಪ್ರಧಾನ ಕರೆನ್ಸಿ ಪ್ರಾಧಿಕಾರವಾಗಿರುವ ಬ್ಯಾಂಕನ್ನು ಹೊರತುಪಡಿಸಿ, ಭಾರತದ ಹೊರಗಡೆ ಇರುವ ಯಾವನೇ ವ್ಯಕ್ತಿಯಿಂದ ಈ ಖಂಡದ ಮೇರೆಗೆ, ಯಾವುದೇ ಹಣವನ್ನು ಸಾಲವಾಗಿ ಪಡೆಯತಕ್ಕುದಲ್ಲ:

ಮತ್ತೂ ಪರಂತು, ಭಾರತದಲ್ಲಿನ ವ್ಯಕ್ತಿಗಳಿಂದ ಪಡೆದಂಥ ಸಾಲಗಳ ಒಟ್ಟು ಮೊಬಲಗು ಯಾವುದೇ ಕಾಲದಲ್ಲಿ ಆ ಬ್ಯಾಂಕಿನ ಬಂಡವಾಳವನ್ನು ಮೀರತಕ್ಕುದಲ್ಲ.

(14ಎ) * * * * *

(15) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಬ್ಯಾಂಕು ನೋಟುಗಳನ್ನು ಮುದ್ರಿಸುವುದು ಮತ್ತು ಹೊರಡಿಸುವುದು;

(15ಎ) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಬ್ಯಾಂಕಿಗೆ ವಹಿಸುವ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸುವುದು ಮತ್ತು ಕರ್ತವ್ಯಗಳನ್ನು ನೆರವೇರಿಸುವುದು;

(15ಬಿ) ಬ್ಯಾಂಕು, ಅದರ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸಲು ಕರ್ತವ್ಯಗಳನ್ನು ನಿರ್ವಹಿಸುವುದು ಅಂಥ ವ್ಯವಸ್ಥೆಯು ಬ್ಯಾಂಕಿನ ಅಭಿಪ್ರಾಯದಲ್ಲಿ ಅನುಕೂಲ ಮಾಡಿಕೊಡುವಲ್ಲಿ ಬ್ಯಾಂಕು ವ್ಯವಹಾರದಲ್ಲಿ ತರಬೇತಿಗಾಗಿ ಮತ್ತು ಸಂಶೋಧನೆಯ ಸಂವರ್ಧನೆಗಾಗಿ ಸೌಲಭ್ಯಗಳನ್ನು ಒದಗಿಸುವುದು;

(16) ಸಾಮಾನ್ಯವಾಗಿ, ಈ ಅಧಿನಿಯಮದ ಮೇರೆಗಿನ ಅದರ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅಥವಾ ಅದರ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಪ್ರಾಸಂಗಿಕ ಅಥವಾ ತತ್ಪರಿಣಾಮವಾಗಬಹುದಾದಂಥ ಎಲ್ಲ ವಿಷಯಗಳು ಮತ್ತು ಕಾರ್ಯಗಳನ್ನು ಮಾಡುವುದು.

**18. ನೇರ ಮುಂಗಡ ಮುರಿಕೆಯ ಅಧಿಕಾರ.–** ಬ್ಯಾಂಕಿನ ಅಭಿಪ್ರಾಯದಲ್ಲಿ ಭಾರತದ ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಮತ್ತು ಕೃಷಿ ಇವುಗಳ ಹಿತಾಸಕ್ತಿಯಲ್ಲಿ, ಸಾಲವನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ, ಈ ಪ್ರಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳಬೇಕಾಗಿರುವುದು ಅವಶ್ಯ ಅಥವಾ

ವಿಹಿತವೆನಿಸುವ ವಿಶೇಷ ಸಂದರ್ಭವು ಉದ್ಭವಿಸಿದಾಗ, 17ನೇ ಪ್ರಕರಣದಲ್ಲಿ ಅಡಕವಾದ ಯಾವುದೇ ಪರಿಮಿತಿಯು ಇದ್ದಾಗ್ಯೂ ಬ್ಯಾಂಕು,–

(1) ಆ ಪ್ರಕರಣದ ಮೇರೆಗೆ ವಿನಿಮಯಪತ್ರ ಅಥವಾ ಪ್ರಾಮಿಸರಿ ನೋಟನ್ನು ಬ್ಯಾಂಕು ಖರೀದಿಸಲು ಅಥವಾ ಮುಂಗಡ ಮುರಿಕೆ ಮಾಡಲು ಅರ್ಹವಾಗಿಲ್ಲದಿದ್ದಾಗ್ಯೂ, ಅಂಥ ಯಾವುದೇ ವಿನಿಮಯಪತ್ರ ಅಥವಾ ಪ್ರಾಮಿಸರಿ ನೋಟನ್ನು ಖರೀದಿಸಬಹುದು, ಮಾರಾಟ ಮಾಡಬಹುದು ಅಥವಾ ಮುಂಗಡವಾಗಿ ಮುರಿಕೆ ಮಾಡಬಹುದು; ಅಥವಾ

(2) * * *

(3) (ಎ) ರಾಜ್ಯ ಸರಕಾರಿ ಬ್ಯಾಂಕಿಗೆ, ಅಥವಾ

(ಬಿ) ಯಾವ ಪ್ರದೇಶದಲ್ಲಿ ರಾಜ್ಯ ಸಹಕಾರಿ ಬ್ಯಾಂಕು ಕಾರ್ಯಾಚರಣೆಯನ್ನು ನಡೆಸುವುದೋ ಆ ಪ್ರದೇಶದಲ್ಲಿ ನೋಂದಾಯಿತವಾದ ರಾಜ್ಯ ಸಹಕಾರಿ ಸಂಘದ ಶಿಫಾರಸಿನ ಮೇಲೆ, ಅಥವಾ

(ಸಿ) ಯಾವನೇ ಇತರ ವ್ಯಕ್ತಿಗೆ

– ತಗಾದೆ ಮಾಡಿದ ಮೇಲೆ ಅಥವಾ ಬ್ಯಾಂಕು ಸಾಕಷ್ಟೆಂದು ಪರ್ಯಾಲೋಚಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ತೊಂಬತ್ತು ದಿವಸಗಳನ್ನು ಮೀರದ ನಿಗದಿಪಡಿಸಿದ ಅವಧಿಗಳು ಮುಕ್ತಾಯವಾದ ಮೇಲೆ ಮರುಸಂದಾಯ ಮಾಡಬೇಕಾದ ಸಾಲಗಳು ಅಥವಾ ಮುಂಗಡಗಳನ್ನು ಮಾಡಬಹುದು.

* * *

**18ಎ. ಸಾಲ ಅಥವಾ ಮುಂಗಡದ ಸಿಂಧುತ್ವವನ್ನು ಪ್ರಶ್ನಿಸತಕ್ಕುದಲ್ಲ.**– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಡಕವಾಗಿರುವುದಕ್ಕೆ ತದ್ವಿರುದ್ಧವಾಗಿ ಏನೇ ಇದ್ದಾಗ್ಯೂ,–

(ಎ) ಈ ಅಧಿನಿಯಮದ ಉಪಬಂಧಗಳ ಅನುಸರಣೆಯಲ್ಲಿ ಬ್ಯಾಂಕ್ ಕೊಟ್ಟಿರುವ ಯಾವುದೇ ಸಾಲ ಅಥವಾ ಮುಂಗಡದ ಸಿಂಧುತ್ವವನ್ನು, ಹಿಂದೆ ಹೇಳಿದ ಅಂಥ ಇತರ ಕಾನೂನಿನ ಅಥವಾ ಯಾವುದೇ ನಿರ್ಣಯ, ಕರಾರು, ವಿವರಣ ಪತ್ರ, ಸಂಘದ ನಿಯಮಾವಳಿ ಅಥವಾ ಇತರ ಲಿಖಿತದ ಅಗತ್ಯತೆಗಳನ್ನು ಪಾಲಿಸಿಲ್ಲ ಎಂಬ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕುದಲ್ಲ:

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಕಂಪನಿ ಅಥವಾ ಸಹಕಾರಿ ಸಂಘವನ್ನು ಅದರ ವಿವರ ಪತ್ರದ ಮೂಲಕ ಸಾಲಗಳು ಅಥವಾ ಮುಂಗಡಗಳನ್ನು ಪಡೆಯಲು ಶಕ್ತಗೊಳಿಸದೆ ಇರುವಲ್ಲಿ, ಯಾವುದೇ ಅಂಥ ಕಂಪನಿ ಅಥವಾ ಸಹಕಾರಿ ಸಂಘವು ಪಡೆದುಕೊಂಡಿರುವ ಯಾವುದೇ ಸಾಲ ಅಥವಾ ಮುಂಗಡವನ್ನು ಸಿಂಧುಗೊಳಿಸತಕ್ಕುದಲ್ಲ;

(ಬಿ) 17ನೇ ಪ್ರಕರಣದ (3ಎ) ಖಂಡದ ಮೇರೆಗೆ ಅಥವಾ (3ಬಿ) ಖಂಡದ ಮೇರೆಗೆ ಸಾಲ ಅಥವಾ ಮುಂಗಡವನ್ನು ಕೊಟ್ಟಿರುವಲ್ಲಿ ಯಾವನೇ ವ್ಯಕ್ತಿಗೆ ಬ್ಯಾಂಕು ಅಥವಾ 18ನೇ ಪ್ರಕರಣದ (3)ನೇ ಖಂಡದ ಮೇರೆಗೆ ಕೊಟ್ಟ ಸಾಲ ಅಥವಾ ಮುಂಗಡವನ್ನು ಯಾವನೇ ಸಾಲ ಪಡೆಯುವವನಿಗೆ ಸಂಪೂರ್ಣವಾಗಿ ಅಥವಾ ಭಾಗಶಃ ಸಾಲ ಅಥವಾ ಮುಂಗಡವನ್ನು ಕೊಡುವಲ್ಲಿ–

(i) ಯಾವುದಕ್ಕೆ ಸಂಬಂಧಿಸಿದಂತೆ 17ನೇ ಪ್ರಕರಣದ (3ಎ) ಖಂಡದ ಪರಂತುಕದ (i) ನೇ ಖಂಡದ ಮೇರೆಗೆ ಘೋಷಣೆಯನ್ನು ಒದಗಿಸಲಾಗಿದೆಯೋ ಆ ವಿನಿಮಯ ಪತ್ರಗಳ ಬಗ್ಗೆ ಬ್ಯಾಂಕು ಸಾಲ ಪಡೆಯುವುದರ ಮೂಲಕ ಅಥವಾ ಸದರಿ ಪರಂತುಕದ (ii)ನೇ ಖಂಡದಲ್ಲಿ ಅಥವಾ ಸದರಿ

ಪ್ರಕರಣದ (3ಬಿ) ಖಂಡದ ಪರಂತುಕದಲ್ಲಿ ಉಲ್ಲೇಖಿಸಲಾದ ಬರಬೇಕಾಗಿರುವ ಸಾಲಗಳು ಮತ್ತು ಮುಂಗಡಗಳ ಮರುಸಂದಾಯವನ್ನು ಮಾಡುವಲ್ಲಿ ಅಥವಾ ವಸೂಲಿಯಲ್ಲಿ; ಅಥವಾ

(ii) ಸಾಲ ಪಡೆಯುವ ಬ್ಯಾಂಕು ಅಥವಾ ಯಾವನೇ ಇತರ ವ್ಯಕ್ತಿಯು, 18ನೇ ಪ್ರಕರಣದ ಮೇರೆಗೆ ಬ್ಯಾಂಕಿನಿಂದ ಅದು ಅಥವಾ ಅವನು ಪಡೆದಿರುವ ನಿಧಿಗಳಿಂದ ಸಾಲಗಾರನಿಗೆ ಕೊಟ್ಟಿರುವ ಸಾಲ ಮತ್ತು ಮುಂಗಡಗಳ ಮರು ಸಂದಾಯದಲ್ಲಿ ಅಥವಾ ಅವುಗಳನ್ನು ವಸೂಲು ಮಾಡುವುದರಲ್ಲಿ

–ಸ್ವೀಕರಿಸಿದ ಯಾವುದೇ ಮೊತ್ತವನ್ನು, ಬ್ಯಾಂಕಿಗೆ ಅದು ಅಥವಾ ಅವನು ಮರುಸಂದಾಯ ಮಾಡಬೇಕಾಗಿರುವ ಮೊಬಲಗುಗಳನ್ನು ಸಂದರ್ಭಾನುಸಾರ ಸಾಲಪಡೆಯುವ ಬ್ಯಾಂಕು ಅಥವಾ ಇತರ ವ್ಯಕ್ತಿಯು ಮರುಸಂದಾಯ ಮಾಡುವುದಕ್ಕಾಗಿ ಮಾತ್ರ ಉಪಯೋಗಿಸತಕ್ಕುದು ಮತ್ತು ಆ ಮೊಬಲಗುಗಳನ್ನು ಹಾಗೆ ಮರುಸಂದಾಯ ಮಾಡುವಂಥ ಕಾಲದವರೆಗೆ ಬ್ಯಾಂಕಿಗಾಗಿ ನ್ಯಾಸರೂಪವಾಗಿ ಅದು ಅಥವಾ ಅವನು ಧಾರಣಮಾಡತಕ್ಕುದು.

**19. ಬ್ಯಾಂಕು ವ್ಯವಹರಿಸಲಾಗದಂಥ ವ್ಯವಹಾರ.**– 17, 18, 42 ಮತ್ತು 45ನೇ ಪ್ರಕರಣಗಳಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಬ್ಯಾಂಕು,–

(1) ಅದರ ಯಾವುದೇ ಕ್ಲೇಮನ್ನು ಪೂರೈಸುವ ಕ್ರಮದಲ್ಲಿ ಯಾವುದೇ ರೀತಿಯಲ್ಲಿ ಅದು ಆರ್ಜಿಸಬಹುದಾದಂಥ ಹಿತಾಸಕ್ತಿಯನ್ನು ಹೊರತುಪಡಿಸಿ ಯಾವುದೇ ವಾಣಿಜ್ಯ, ಕೈಗಾರಿಕೆ ಅಥವಾ ಇತರ ಉದ್ಯಮಗಳಲ್ಲಿ, ವ್ಯಾಪಾರದಲ್ಲಿ ತೊಡಗಬಾರದು ಅಥವಾ ಅನ್ಯಥಾ ಪ್ರತ್ಯಕ್ಷ ಹಿತಾಸಕ್ತಿಯನ್ನು ಹೊಂದಿರಬಾರದು: ಪರಂತು ಅಂಥ ಎಲ್ಲ ಹಿತಾಸಕ್ತಿಗಳನ್ನು, ಸಾಧ್ಯವಾದಷ್ಟು ಬೇಗ ವಿಲೇ ಮಾಡತಕ್ಕುದು;

(2) ಯಾವುದೇ ಬ್ಯಾಂಕಿಂಗ್ ಕಂಪನಿಯ ಅಥವಾ ಯಾವುದೇ ಇತರ ಕಂಪನಿಯ ಷೇರುಗಳನ್ನು ಖರೀದಿಸಬಾರದು ಅಥವಾ ಯಾವುದೇ ಅಂಥ ಷೇರುಗಳ ಭದ್ರತೆಯ ಮೇಲೆ ಸಾಲಗಳನ್ನು ಕೊಡಬಾರದು;

(3) ಸ್ಥಿರಸ್ವತ್ತು ಅಥವಾ ಅದಕ್ಕೆ ಸಂಬಂಧಪಟ್ಟಂತೆ ಸ್ವಾಮ್ಯದ ದಸ್ತಾವೇಜುಗಳ ಅಡಮಾನದ ಮೇಲೆ ಅಥವಾ ಅನ್ಯಥಾ ಭದ್ರತೆಯ ಮೇಲೆ ಹಣವನ್ನು ಕೊಡಬಾರದು ಅಥವಾ ಅದರದೇ ಆದ ವ್ಯವಹಾರ ಆವರಣಗಳು ಮತ್ತು ಅದರ ಅಧಿಕಾರಿಗಳು ಮತ್ತು ನೌಕರರ ವಾಸದ ಮನೆಗಳಿಗಾಗಿ ಅವಶ್ಯವಾಗುವಷ್ಟರ ಮಟ್ಟಿಗಲ್ಲದೆ, ಸ್ಥಿರಸ್ವತ್ತಿನ ಒಡೆಯನಾಗಬಾರದು;

(4) ಸಾಲಗಳು ಮತ್ತು ಮುಂಗಡಗಳನ್ನು ಕೊಡಬಾರದು;

(5) ತಗಾದೆಯ ಮೇಲಲ್ಲದೆ ಅನ್ಯಥಾ ಸಂದಾಯ ಮಾಡಬೇಕಾದ ವಿನಿಮಯಪತ್ರಗಳನ್ನು ಬರೆಯಬಾರದು ಅಥವಾ ಅಂಗೀಕರಿಸಬಾರದು;

(6) ಠೇವಣಿಗಳು ಅಥವಾ ಚಾಲ್ತಿ ಖಾತೆಗಳ ಮೇಲೆ ಬಡ್ಡಿಯನ್ನು ಕೊಡಬಾರದು.

## ಅಧ್ಯಾಯ–III

## ಕೇಂದ್ರ ಬ್ಯಾಂಕಿನ ಪ್ರಕಾರ್ಯಗಳು

**20. ಸರ್ಕಾರದ ವ್ಯವಹಾರವನ್ನು ನಡೆಸುವುದು ಬ್ಯಾಂಕಿನ ಹೊಣೆ.**– ಬ್ಯಾಂಕು, ಕೇಂದ್ರ ಸರ್ಕಾರದ ಲೆಕ್ಕದಲ್ಲಿ ಜಮೆಯಲ್ಲಿರುವ ಮೊಬಲಗಿನಷ್ಟರ ಮಟ್ಟಿಗೆ ಮತ್ತು ಸಂದಾಯಗಳನ್ನು ಮಾಡಲು ಅದರ ಲೆಕ್ಕಕ್ಕಾಗಿ ಹಣಗಳನ್ನು ಅಂಗೀಕರಿಸಲು ಸಂಘದ ಸಾರ್ವಜನಿಕ ಸಾಲದ

ವ್ಯವಸ್ಥಾಪನೆಯನ್ನು ಒಳಗೊಂಡು, ಅದರ ವಿನಿಮಯ, ಇರಸಾಲು ಮತ್ತು ಇತರ ಬ್ಯಾಂಕು ವ್ಯವಹಾರದ ಕಾರ್ಯಾಚರಣೆಗಳನ್ನು ಕೈಗೊಳ್ಳತಕ್ಕುದು.

**(20ಎ)** [* * *]

**21. ಬ್ಯಾಂಕು, ಭಾರತದಲ್ಲಿ ಸರ್ಕಾರದ ವ್ಯವಹಾರವನ್ನು ನಡೆಸುವ ಹಕ್ಕನ್ನು ಹೊಂದಿರತಕ್ಕುದು.–** (1) ಒಪ್ಪಬಹುದಾದಂಥ ಷರತ್ತುಗಳ ಮೇಲೆ, ಕೇಂದ್ರ ಸರ್ಕಾರವು ಭಾರತದಲ್ಲಿ ಅದರ ಎಲ್ಲ ಹಣ, ಇರಸಾಲು, ವಿನಿಮಯ ಮತ್ತು ಬ್ಯಾಂಕು ವ್ಯವಹಾರಗಳನ್ನು ಬ್ಯಾಂಕಿಗೆ ವಹಿಸಿಕೊಡತಕ್ಕುದು ಮತ್ತು ವಿಶೇಷವಾಗಿ, ಬ್ಯಾಂಕಿನಲ್ಲಿ ಅದರ ಎಲ್ಲ ನಗದು ಶಿಲ್ಕುಗಳನ್ನು ಬಡ್ಡಿ ಇಲ್ಲದೆ ಠೇವಣಿ ಇಡತಕ್ಕುದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಬ್ಯಾಂಕು ಶಾಖೆಗಳನ್ನು ಮತ್ತು ಏಜೆನ್ಸಿಗಳನ್ನು ಹೊಂದಿಲ್ಲದೇ ಇರುವ ಸ್ಥಳಗಳಲ್ಲಿ ಹಣದ ವ್ಯವಹಾರವನ್ನು ಮಾಡುವುದನ್ನು ತಡೆಗಟ್ಟತಕ್ಕುದಲ್ಲ ಮತ್ತು ಕೇಂದ್ರ ಸರ್ಕಾರವು ಅದಕ್ಕೆ ಅಗತ್ಯವೆನಿಸಬಹುದಾದಂಥ ಶಿಲ್ಕುಗಳನ್ನು ಅಂಥ ಸ್ಥಳಗಳಲ್ಲಿ ಹೊಂದಿರಬಹುದು.

(2) ಒಪ್ಪಿಸಬಹುದಾದಂಥ ಷರತ್ತುಗಳ ಮೇಲೆ ಕೇಂದ್ರ ಸರ್ಕಾರವು ಬ್ಯಾಂಕಿಗೆ ಸಾರ್ವಜನಿಕ ಸಾಲದ ವ್ಯವಸ್ಥಾಪನೆಯನ್ನು ಮತ್ತು ಯಾವುದೇ ಹೊಸ ಸಾಲಗಳನ್ನು ಹೊರಡಿಸುವುದನ್ನು ವಹಿಸಿಕೊಡತಕ್ಕುದು.

(3) ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ಷರತ್ತುಗಳ ಮೇಲೆ ಒಪ್ಪಂದವನ್ನು ಮಾಡಿಕೊಳ್ಳಲು ಯಾವುದೇ ವೈಫಲ್ಯದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ಯಾವ ಷರತ್ತುಗಳು ಇರತಕ್ಕುದು ಎಂಬುದನ್ನು ತೀರ್ಮಾನಿಸತಕ್ಕುದು.

(4) ಈ ಪ್ರಕರಣದ ಮೇರೆಗೆ ಮಾಡಿಕೊಂಡ ಯಾವುದೇ ಒಪ್ಪಂದವನ್ನು, ಅದನ್ನು ಮಾಡಿಕೊಂಡ ತರುವಾಯ ಸಾಧ್ಯವಾದಷ್ಟು ಬೇಗ ಸಂಸತ್ತಿನ ಮುಂದೆ ಇಡತಕ್ಕುದು.

* * * *

**21ಎ. ಬ್ಯಾಂಕು ಒಪ್ಪಂದವನ್ನು ಮಾಡಿಕೊಂಡ ಮೇಲೆ ರಾಜ್ಯ ಸರ್ಕಾರದ ವ್ಯವಹಾರವನ್ನು ನಡೆಸತಕ್ಕುದು.–** (1) ಬ್ಯಾಂಕು, ಯಾವುದೇ ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡ ಒಪ್ಪಂದದ ಮೂಲಕ,–

(ಎ) ಬ್ಯಾಂಕಿನಲ್ಲಿ ಅದರ ಎಲ್ಲ ನಗದು ಶಿಲ್ಕುಗಳನ್ನು, ವಿಶೇಷವಾಗಿ ಬಡ್ಡಿ ರಹಿತ ಠೇವಣಿಯನ್ನು ಒಳಗೊಂಡು ಭಾರತದಲ್ಲಿ ಅದರ ಎಲ್ಲ ಹಣ, ಇರಸಾಲು, ವಿನಿಮಯ ಮತ್ತು ಬ್ಯಾಂಕು ವ್ಯವಹಾರಗಳನ್ನು; ಮತ್ತು

(ಬಿ) ಆ ರಾಜ್ಯದ ಸಾರ್ವಜನಿಕ ಸಾಲದ ವ್ಯವಸ್ಥಾಪನೆ ಮತ್ತು ಅದರ ಯಾವುದೇ ಹೊಸ ಸಾಲವನ್ನು ಹೊರಡಿಸುವುದನ್ನು–ಕೈಗೊಳ್ಳಬಹುದು.

(2) ಈ ಪ್ರಕರಣದ ಮೇರೆಗೆ ಮಾಡಿಕೊಂಡ ಯಾವುದೇ ಒಪ್ಪಂದವನ್ನು, ಅದನ್ನು ಮಾಡಿಕೊಂಡ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಮುಂದೆ ಇಡತಕ್ಕುದು.

**21ಬಿ. 1956ರ ನವೆಂಬರ್ 1ಕ್ಕಿಂತ ಮುಂಚೆ ಬ್ಯಾಂಕು ಮತ್ತು ಕೆಲವು ರಾಜ್ಯಗಳ ನಡುವೆ ಮಾಡಿಕೊಂಡ ಒಪ್ಪಂದಗಳ ಪರಿಣಾಮ.–** (1) ಈ ಕೆಳಕಂಡ ವಿವರಣೆಯಲ್ಲಿ ನಿರ್ದಿಷ್ಟಪಡಿಸಿರುವ ಮತ್ತು 1956ರ ನವೆಂಬರ್ 1ನೇ ದಿವಸಕ್ಕೆ ಮುಂಚೆ ರಾಜ್ಯ ಸರ್ಕಾರದ ನಡುವೆ 21ನೇ ಪ್ರಕರಣ ಅಥವಾ 21ಬಿ ಪ್ರಕರಣದ ಮೇರೆಗೆ ಮಾಡಿಕೊಂಡ ಯಾವುದೇ ಒಪ್ಪಂದವು, ಆ ದಿವಸದಿಂದ ಬ್ಯಾಂಕು ಮತ್ತು ಸಂವಾದಿ ರಾಜ್ಯದ ನಡುವೆ ಒಪ್ಪಂದವಾಗಬಹುದಾದಂತೆ ಅಥವಾ ಅಂಥ

ಒಪ್ಪಂದವು ಆಗದೇ ಇರುವಲ್ಲಿ ಕೇಂದ್ರ ಸರ್ಕಾರವು ಆದೇಶದ ಮೂಲಕ ಅದರಲ್ಲಿ ಮಾಡಬಹುದಾದಂತೆ, ಒಪ್ಪಂದದ ಸಾಮಾನ್ಯ ಪ್ರವರ್ತನೆಗೆ ಬಾಧಕವನ್ನುಂಟುಮಾಡದ ಸ್ವರೂಪದ್ದಾಗಿರುವಂಥ ಮಾರ್ಪಾಟುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಬ್ಯಾಂಕು ಮತ್ತು ಸಂವಾದಿ ರಾಜ್ಯ ಸರ್ಕಾರದ ನಡುವೆ 21ಎ ಪ್ರಕರಣದ ಮೇರೆಗೆ ಮಾಡಿಕೊಂಡ ಒಪ್ಪಂದವು ಅದು ಆಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕುದು.

**ವಿವರಣೆ:-** ಈ ಉಪಪ್ರಕರಣದಲ್ಲಿ "ಸಂವಾದಿ ರಾಜ್ಯ" ಎಂದರೆ, -

(ಎ) ಬ್ಯಾಂಕು ಮತ್ತು ಆಂಧ್ರ ರಾಜ್ಯದ ನಡುವಣ ಒಪ್ಪಂದಕ್ಕೆ ಸಂಬಂಧಪಟ್ಟಂತೆ ಆಂಧ್ರ ಪ್ರದೇಶದ ರಾಜ್ಯ;

(ಬಿ) ಬ್ಯಾಂಕು ಮತ್ತು 1956ರ ನವೆಂಬರ್ 1ನೇ ದಿವಸಕ್ಕೆ ಮುಂಚೆ ಅದು ಅಸ್ತಿತ್ವದಲ್ಲಿದ್ದಂತೆ ಯಾವುದೇ ಇತರ ಭಾಗ 'ಎ' ದ ರಾಜ್ಯದ ನಡುವಣ ಒಪ್ಪಂದಕ್ಕೆ ಸಂಬಂಧಪಟ್ಟಂತೆ ಅದೇ ಹೆಸರಿನ ರಾಜ್ಯ; ಮತ್ತು

(ಸಿ) ಬ್ಯಾಂಕು ಮತ್ತು 1956ರ ನವೆಂಬರ್ 1ನೇ ದಿವಸಕ್ಕೆ ಮುಂಚೆ ಅದು ಅಸ್ತಿತ್ವದಲ್ಲಿದ್ದಂತೆ ಭಾಗ 'ಬಿ' ದ ಮೈಸೂರು ಅಥವಾ ತಿರುವಾಂಕೂರು- ಕೊಚ್ಚಿನ್ ನಡುವಣ ಆದ ಒಪ್ಪಂದಕ್ಕೆ ಸಂಬಂಧಪಟ್ಟಂತೆ ಅನುಕ್ರಮವಾಗಿ ಮೈಸೂರು ಅಥವಾ ಕೇರಳ ರಾಜ್ಯ;

(2) ಬ್ಯಾಂಕು ಮತ್ತು ಹೈದರಾಬಾದ್, ಮಧ್ಯ ಭಾರತ ಅಥವಾ ಸೌರಾಷ್ಟ್ರದ ಭಾಗ 'ಬಿ' ರಾಜ್ಯದ ಸರ್ಕಾರದ ನಡುವೆ 21ಎ ಪ್ರಕರಣದ ಮೇರೆಗೆ ಮಾಡಿಕೊಂಡ ಯಾವುದೇ ಒಪ್ಪಂದವು, 1956ರ ಅಕ್ಟೋಬರ್ 31ನೇ ದಿವಸದಂದು ಕೊನೆಗೊಂಡಿರುವುದಾಗಿ ಭಾವಿಸತಕ್ಕುದು.

**22. ಬ್ಯಾಂಕು ನೋಟುಗಳನ್ನು ಹೊರಡಿಸುವ ಹಕ್ಕು.-**(1) ಬ್ಯಾಂಕು, ಭಾರತದಲ್ಲಿ ಬ್ಯಾಂಕು ನೋಟುಗಳನ್ನು ಹೊರಡಿಸುವ ಏಕಮಾತ್ರ ಹಕ್ಕನ್ನು ಹೊಂದಿರತಕ್ಕುದು ಮತ್ತು ಅದು ಕೇಂದ್ರ ಮಂಡಳಿಯ ಶಿಫಾರಸಿನ ಮೇಲೆ ಕೇಂದ್ರ ಸರ್ಕಾರವು ನಿಗದಿಪಡಿಸತಕ್ಕಂಥ ಅವಧಿಗಾಗಿ ಕೇಂದ್ರ ಸರ್ಕಾರವು ಅದಕ್ಕೆ ಸರಬರಾಜು ಮಾಡಿದ ಭಾರತ ಸರ್ಕಾರದ ಕರೆನ್ಸಿ ನೋಟುಗಳನ್ನು ಹೊರಡಿಸಬಹುದು ಮತ್ತು ಬ್ಯಾಂಕು ನೋಟುಗಳಿಗೆ ಅನ್ವಯವಾಗುವ ಈ ಅಧಿನಿಯಮದ ಉಪಬಂಧಗಳು, ತದ್ವಿರುದ್ಧವಾದ ಉದ್ದೇಶವು ಕಂಡುಬಂದ ಹೊರತು, ಕೇಂದ್ರ ಸರ್ಕಾರವೇ ಆಗಲಿ ಅಥವಾ ಅದೇ ರೀತಿಯಲ್ಲಿ ಬ್ಯಾಂಕಾಗಲಿ ಹೊರಡಿಸಿದ ಭಾರತ ಸರ್ಕಾರದ ಎಲ್ಲ ಕರೆನ್ಸಿ ನೋಟುಗಳಿಗೆ, ಅಂಥ ಕರೆನ್ಸಿ ನೋಟುಗಳು ಬ್ಯಾಂಕು ನೋಟುಗಳಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು ಮತ್ತು ಬ್ಯಾಂಕು ನೋಟುಗಳ ಬಗ್ಗೆ ಈ ಅಧಿನಿಯಮದಲ್ಲಿ ಮಾಡಿದ ಉಲ್ಲೇಖಗಳನ್ನು ತದನುಸಾರವಾಗಿ ಅರ್ಥೈಸತಕ್ಕುದು.

(2) ಈ ಅಧ್ಯಾಯವು ಜಾರಿಗೆ ಬರುವಂಥ ದಿನಾಂಕದಂದು ಮತ್ತು ಅಂದಿನಿಂದ ಕೇಂದ್ರ ಸರ್ಕಾರವು ಯಾವುದೇ ಕರೆನ್ಸಿ ನೋಟುಗಳನ್ನು ಹೊರಡಿಸತಕ್ಕುದಲ್ಲ.

**23. ಹೊರಡಿಸುವ ಇಲಾಖೆ.-** (1) ಬ್ಯಾಂಕು ನೋಟುಗಳನ್ನು ಹೊರಡಿಸುವುದನ್ನು, ನೋಟುಗಳನ್ನು ಹೊರಡಿಸುವ ಇಲಾಖೆಯಲ್ಲಿ ಬ್ಯಾಂಕು ನಿರ್ವಹಿಸತಕ್ಕುದು; ಈ ಇಲಾಖೆಯು ಬ್ಯಾಂಕು ವ್ಯವಹಾರದ ಇಲಾಖೆಯಿಂದ ಪ್ರತ್ಯೇಕವಾಗಿರತಕ್ಕುದು ಮತ್ತು ಪೂರ್ಣವಾಗಿ ವಿಭಿನ್ನವಾಗಿರತಕ್ಕುದು ಮತ್ತು ಹೊರಡಿಸುವ ಇಲಾಖೆಯ ಆಸ್ತಿಗಳು, ಇಲ್ಲಿ ಇನ್ನು ಮುಂದೆ 34ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಹೊರಡಿಸುವ ಇಲಾಖೆಯ ಹೊಣೆಗಾರಿಕೆಗಳನ್ನು ಹೊರತುಪಡಿಸಿ ಯಾವುದೇ ಹೊಣೆಗೆ ಒಳಪಟ್ಟಿರತಕ್ಕುದಲ್ಲ.

(2) ಹೊರಡಿಸುವ ಇಲಾಖೆಯು, ಇತರ ಬ್ಯಾಂಕು ನೋಟುಗಳು ಅಥವಾ ಮೀಸಲಿನ ಭಾಗವಾಗಿರುವ ಹಾಗೂ ಈ ಅಧಿನಿಯಮದ ಮೂಲಕ ಅನುಮತಿಸಲಾಗಿರುವಂಥ ನಾಣ್ಯ, ಬೆಳ್ಳಿ ಬಂಗಾರ ಅಥವಾ ಭದ್ರತಾಪತ್ರಗಳಿಗಾಗಿನ ವಿನಿಮಯದಲ್ಲಿ ಹೊರತು, ಬ್ಯಾಂಕು ವ್ಯವಹಾರದ ಇಲಾಖೆ ಅಥವಾ ಯಾವನೇ ಇತರ ವ್ಯಕ್ತಿಗೆ ಬ್ಯಾಂಕು ನೋಟುಗಳನ್ನು ಕೊಡತಕ್ಕುದಲ್ಲ.

* * * *

**24. ನೋಟುಗಳ ವರ್ಗಗಳು.–** (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಬ್ಯಾಂಕು ನೋಟುಗಳು, ಎರಡು ರೂಪಾಯಿಗಳು, ಐದು ರೂಪಾಯಿಗಳು, ಹತ್ತು ರೂಪಾಯಿಗಳು, ಇಪ್ಪತ್ತು ರೂಪಾಯಿಗಳು, ಐವತ್ತು ರೂಪಾಯಿಗಳು, ಒಂದು ನೂರು ರೂಪಾಯಿಗಳು, ಐದು ನೂರು ರೂಪಾಯಿಗಳು, ಒಂದು ಸಾವಿರ ರೂಪಾಯಿಗಳು, ಐದು ಸಾವಿರ ರೂಪಾಯಿಗಳು ಮತ್ತು ಹತ್ತು ಸಾವಿರ ರೂಪಾಯಿಗಳ ಮೌಲ್ಯಗಳ ವರ್ಗಗಳ ಅಥವಾ ಕೇಂದ್ರ ಮಂಡಳಿಯ ಶಿಫಾರಸಿನ ಮೇಲೆ ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತೆ ಹತ್ತು ಸಾವಿರ ರೂಪಾಯಿಗಳನ್ನು ಮೀರದ ಇತರ ಮೌಲ್ಯಗಳ ವರ್ಗದ್ದಾಗಿರತಕ್ಕುದು.

(2) ಕೇಂದ್ರ ಸರ್ಕಾರವು, ಕೇಂದ್ರ ಮಂಡಳಿಯ ಶಿಫಾರಸಿನ ಮೇಲೆ, ಈ ಬಗ್ಗೆ ಅದು ನಿರ್ದಿಷ್ಟಪಡಿಸಬಹುದಾದಂಥ ಮೌಲ್ಯಗಳ ವರ್ಗದ ಬ್ಯಾಂಕು ನೋಟುಗಳ ಹೊರಡಿಸುವಿಕೆಯನ್ನು ಅಥವಾ ಹೊರಡಿಸುವುದನ್ನು ಮುಂದುವರಿಸದಂತೆ ನಿರ್ದೇಶಿಸಬಹುದು.

**25. ಬ್ಯಾಂಕು ನೋಟುಗಳ ನಮೂನೆ.–** ಬ್ಯಾಂಕು ನೋಟುಗಳ ವಿನ್ಯಾಸ, ನಮೂನೆ ಮತ್ತು ಸಾಮಗ್ರಿಯು, ಕೇಂದ್ರ ಮಂಡಳಿಯು, ಮಾಡಿದ ಶಿಫಾರಸುಗಳನ್ನು ಪರ್ಯಾಲೋಚಿಸಿದ ತರುವಾಯ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂತೆ ಇರತಕ್ಕುದು.

**26. ನೋಟುಗಳ ಕಾನೂನು ಸಮ್ಮತ ಚಲಾವಣೆ ಹಣದ ಸ್ವರೂಪ.–** (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರತಿಯೊಂದು ಬ್ಯಾಂಕು ನೋಟು ಅದರಲ್ಲಿ ವ್ಯಕ್ತಪಡಿಸಿರುವ ಮೊಬಲಗಿಗಾಗಿ ಸಂದಾಯದಲ್ಲಿ ಅಥವಾ ಲೆಕ್ಕದ ಬಗ್ಗೆ ಭಾರತದಲ್ಲಿ ಯಾವುದೇ ಸ್ಥಳದಲ್ಲಿ ಕಾನೂನು ಸಮ್ಮತ ಚಲಾವಣೆಯ ಹಣವಾಗಿರತಕ್ಕುದು ಮತ್ತು ಅದರ ಬಗ್ಗೆ ಕೇಂದ್ರ ಸರ್ಕಾರವು ಖಾತ್ರಿಯನ್ನು ಕೊಡತಕ್ಕುದು.

(2) ಕೇಂದ್ರ ಮಂಡಳಿಯ ಶಿಫಾರಸಿನ ಮೇಲೆ, ಕೇಂದ್ರ ಸರ್ಕಾರವು, ಭಾರತದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಯಾವುದೇ ವರ್ಗದ ಬ್ಯಾಂಕು ನೋಟುಗಳ ಯಾವುದೇ ಸರಣಿಯು, ಬ್ಯಾಂಕಿನ ಅಂಥ ಕಛೇರಿ ಅಥವಾ ಏಜೆನ್ಸಿಯನ್ನು ಹೊರತುಪಡಿಸಿ ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟರಮಟ್ಟಿಗೆ ಕಾನೂನು ಸಮ್ಮತ ಚಲಾವಣೆಯ ಹಣವಾಗಿರುವುದು ನಿಂತು ಹೋಗತಕ್ಕುದೆಂದು ಘೋಷಿಸಬಹುದು.

**26ಎ. ಕೆಲವು ಬ್ಯಾಂಕು ನೋಟುಗಳು ಕಾನೂನು ಸಮ್ಮತ ಚಲಾವಣೆ ಹಣವಾಗಿರುವುದು ನಿಂತುಹೋಗತಕ್ಕುದು.–** 26ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, 1946ರ ಜನವರಿ 13ನೇ ದಿವಸಕ್ಕೆ ಮುಂಚೆ ಹೊರಡಿಸಿರುವ ಐದು ನೂರು ರೂಪಾಯಿಗಳು, ಒಂದು ಸಾವಿರ ರೂಪಾಯಿಗಳು ಅಥವಾ ಹತ್ತು ಸಾವಿರ ರೂಪಾಯಿಗಳ ಮೌಲ್ಯದ ವರ್ಗದ ಯಾವುದೇ ಬ್ಯಾಂಕು ನೋಟು, ಅದರಲ್ಲಿ ವ್ಯಕ್ತಪಡಿಸಿರುವ ಮೊಬಲಗಿಗಾಗಿ ಸಂದಾಯದಲ್ಲಿ ಅಥವಾ ಲೆಕ್ಕದ ಬಗ್ಗೆ ಕಾನೂನು ಸಮ್ಮತ ಚಲಾವಣೆಯ ಹಣವಾಗಿರತಕ್ಕುದಲ್ಲ.

**27. ನೋಟುಗಳನ್ನು ಪುನಃ ಹೊರಡಿಸುವುದು.–** ಹರಿದಿರುವ, ವಿರೂಪಗೊಂಡಿರುವ ಅಥವಾ ಅತಿ ಹೆಚ್ಚಾಗಿ ಕೊಳಕಾಗಿರುವ ಬ್ಯಾಂಕು ನೋಟುಗಳನ್ನು ಬ್ಯಾಂಕು ಪುನಃ ಹೊರಡಿಸತಕ್ಕುದಲ್ಲ.

**28. ಕಳೆದುಹೊದ, ಕಳುವಾದ, ವಿಕೃತಗೊಂಡ ಅಥವಾ ಅಪರಿಪೂರ್ಣ ನೋಟುಗಳ ವಸೂಲಿ.–** ತದ್ವಿರುದ್ಧವಾಗಿ ಯಾವುದೇ ಅಧಿನಿಯಮಿತಿ ಅಥವಾ ಕಾನೂನಿನ ನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವನೇ ವ್ಯಕ್ತಿಯು, ಯಾವುದೇ ಕಳೆದು ಹೋದ, ಕಳುವಾದ, ವಿಕೃತಗೊಂಡ ಅಥವಾ ಅಪರಿಪೂರ್ಣವಾದ ಭಾರತ ಸರ್ಕಾರದ ಕರೆನ್ಸಿ ನೋಟು ಅಥವಾ ಬ್ಯಾಂಕು ನೋಟಿನ ಮೌಲ್ಯವನ್ನು ಕೇಂದ್ರ ಸರ್ಕಾರ ಅಥವಾ ಬ್ಯಾಂಕಿನಿಂದ ವಸೂಲು ಮಾಡಲು ಹಕ್ಕುಳ್ಳವನಾಗಿರತಕ್ಕುದಲ್ಲ:

ಪರಂತು, ಬ್ಯಾಂಕು, ಕೇಂದ್ರ ಸರ್ಕಾರದ ಪೂರ್ವಾನುಮತಿಯೊಂದಿಗೆ, ಯಾವ ಸಂದರ್ಭಗಳಲ್ಲಿ ಮತ್ತು ಯಾವ ಷರತ್ತುಗಳು ಹಾಗೂ ಪರಿಮಿತಿಗಳಿಗೆ ಒಳಪಟ್ಟು ಅಂಥ ಕರೆನ್ಸಿ ನೋಟುಗಳು ಅಥವಾ ಬ್ಯಾಂಕು ನೋಟುಗಳ ಮೌಲ್ಯವನ್ನು ರಿಯಾಯಿತಿಯೆಂದು ಮರುಪಾವತಿ ಮಾಡಬಹುದೋ ಆ ಸಂದರ್ಭಗಳು ಮತ್ತು ಷರತ್ತುಗಳು ಮತ್ತು ಪರಿಮಿತಿಗಳನ್ನು ನಿಯಮಿಸಬಹುದು ಮತ್ತು ಈ ಪರಂತುಕದ ಮೇರೆಗೆ ರಚಿಸಿದ ನಿಯಮಗಳನ್ನು ಸಂಸತ್ತಿನ ಮುಂದೆ ಇಡತಕ್ಕುದು.

* * * *

**28ಎ. ಕೆಲವು ಸಂದರ್ಭಗಳಲ್ಲಿ ವಿಶೇಷ ಬ್ಯಾಂಕು ನೋಟುಗಳು ಮತ್ತು ವಿಶೇಷ ಒಂದು ರೂಪಾಯಿ ನೋಟುಗಳನ್ನು ಹೊರಡಿಸುವುದು.–** (1) ಭಾರತದ ಹೊರಗಡೆ ಬ್ಯಾಂಕು ನೋಟುಗಳ ಚಲಾವಣೆಯನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ, ಬ್ಯಾಂಕು, ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಏನೇ ಅಡಕವಾಗಿದ್ದಾಗ್ಯೂ, (3)ನೇ ಉಪಪ್ರಕರಣದ ಮೇರೆಗೆ ಅನುಮೋದಿಸಬಹುದಾದಂಥ ವಿನ್ಯಾಸ, ನಮೂನೆ ಮತ್ತು ಸಾಮಗ್ರಿಯ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ವಿಶೇಷ ಬ್ಯಾಂಕು ನೋಟುಗಳೆಂದು ಉಲ್ಲೇಖಿಸಲಾಗಿದೆ) ಐದು ರೂಪಾಯಿಗಳು, ಹತ್ತು ರೂಪಾಯಿಗಳು ಮತ್ತು ಒಂದು ನೂರು ರೂಪಾಯಿಗಳ ಮೌಲ್ಯದ ವರ್ಗಗಳ ಬ್ಯಾಂಕು ನೋಟುಗಳನ್ನು ಹೊರಡಿಸಬಹುದು.

(2) ಭಾರತದ ಹೊರಗಡೆ ಭಾರತ ಸರ್ಕಾರದ ಒಂದು ರೂಪಾಯಿ ನೋಟುಗಳ ಚಲಾವಣೆಯನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಅಥವಾ ಕರೆನ್ಸಿ ಅಧ್ಯಾದೇಶ, 1940ರಲ್ಲಿ ಏನೇ ಅಡಕವಾಗಿದ್ದಾಗ್ಯೂ, (3)ನೇ ಉಪಪ್ರಕರಣದ ಮೇರೆಗೆ ಅಂಗೀಕರಿಸಬಹುದಾದಂಥ ವಿನ್ಯಾಸ, ನಮೂನೆ ಮತ್ತು ಸಾಮಗ್ರಿಯ ಒಂದು ರೂಪಾಯಿ ಮೌಲ್ಯದ ವರ್ಗದ ಭಾರತ ಸರ್ಕಾರದ ನೋಟುಗಳನ್ನು ಹೊರಡಿಸಬಹುದು (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ವಿಶೇಷ ಒಂದು ರೂಪಾಯಿ ನೋಟುಗಳು ಎಂದು ಉಲ್ಲೇಖಿಸಲಾಗಿದೆ).

(3) ವಿಶೇಷ ಬ್ಯಾಂಕು ನೋಟುಗಳ ವಿನ್ಯಾಸ, ನಮೂನೆ ಮತ್ತು ಸಾಮಗ್ರಿಯು, ಗವರ್ನರನು ಮಾಡಿರುವ ಶಿಫಾರಸುಗಳನ್ನು ಪರ್ಯಾಲೋಚಿಸಿದ ತರುವಾಯ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥವು ಆಗಿರತಕ್ಕುದು ಮತ್ತು ವಿಶೇಷ ಒಂದು ರೂಪಾಯಿ ನೋಟುಗಳಿನವು ಕೇಂದ್ರ ಸರ್ಕಾರವು ಅಂಗೀಕರಿಸಲು ಸೂಕ್ತವೆಂದು ಯೋಚಿಸುವಂಥದು ಆಗಿರತಕ್ಕುದು.

(4) ವಿಶೇಷ ಬ್ಯಾಂಕು ನೋಟುಗಳೇ ಆಗಲಿ ಅಥವಾ ವಿಶೇಷ ಒಂದು ರೂಪಾಯಿ ನೋಟುಗಳೇ ಆಗಲಿ ಭಾರತದಲ್ಲಿ ಕಾನೂನು ಸಮ್ಮತ ಚಲಾವಣೆಯ ಹಣವಾಗಿರತಕ್ಕುದಲ್ಲ.

(5) ವಿಶೇಷ ಒಂದು ರೂಪಾಯಿ ನೋಟು, 39ನೇ ಪ್ರಕರಣವನ್ನು ಹೊರತುಪಡಿಸಿ ಈ ಅಧಿನಿಯಮದ ಎಲ್ಲ ಉದ್ದೇಶಗಳಿಗಾಗಿ, "ರೂಪಾಯಿ ನಾಣ್ಯ" ಎಂಬ ಪದಾವಳಿಯಲ್ಲಿ ಒಳಗೊಂಡಿರುವುದಾಗಿ ಭಾವಿಸತಕ್ಕುದು, ಆದರೆ ಅದನ್ನು ಈ ಅಧಿನಿಯಮದ ಯಾವುದೇ ಉದ್ದೇಶಕ್ಕಾಗಿ ಕರೆನ್ಸಿ ನೋಟು ಅಲ್ಲ ಎಂಬುದಾಗಿ ಭಾವಿಸತಕ್ಕುದು.

(6) ಬ್ಯಾಂಕಿನ ನಿರ್ದಿಷ್ಟಪಡಿಸಿದ ಕಛೇರಿ ಅಥವಾ ಶಾಖೆಯಲ್ಲಿ ಸಂದಾಯ ಮಾಡಬೇಕೆಂದು ವಿಶೇಷ ಬ್ಯಾಂಕು ನೋಟಿನ ಮೇಲೆ ವ್ಯಕ್ತಪಡಿಸಿರುವಲ್ಲಿ, 39ನೇ ಪ್ರಕರಣದ ಮೂಲಕ ವಿಧಿಸಿರುವ ಹೊಣೆಯು, ನಿರ್ದಿಷ್ಟಪಡಿಸಿದ ಕಛೇರಿ ಅಥವಾ ಶಾಖೆಯಲ್ಲಿ ಮಾತ್ರ ಇರತಕ್ಕುದು, ಮತ್ತು ಇನ್ನೂ ಹೆಚ್ಚಿಗೆಯಾಗಿ ಈ ಪ್ರಕರಣದ ಮೇರೆಗೆ ರಚಿಸಬಹುದಾದಂಥ ವಿನಿಯಮಗಳಿಗೆ ಒಳಪಟ್ಟಿರತಕ್ಕುದು.

(7) ಬ್ಯಾಂಕು, ಕೇಂದ್ರ ಸರ್ಕಾರದ ಪೂರ್ವಮಂಜೂರಾತಿಯೊಂದಿಗೆ, ಈ ಪ್ರಕರಣದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಉಪಬಂಧವು ಅವಶ್ಯ ಅಥವಾ ಅನುಕೂಲಕರವಾಗಿರುವಂಥ ಎಲ್ಲ ವಿಷಯಗಳಿಗಾಗಿ ಉಪಬಂಧಿಸಲು ಮತ್ತು ವಿಶೇಷವಾಗಿ ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟು–

(i) ಭಾರತದ ಹೊರಗಡೆ ಯಾವುದೇ ದೇಶದಲ್ಲಿ ಚಲಾವಣೆಯಲ್ಲಿರುವ ಬ್ಯಾಂಕು ನೋಟುಗಳು ಮತ್ತು ಒಂದು ರೂಪಾಯಿ ನೋಟುಗಳನ್ನು ಈ ಪ್ರಕರಣದ ಮೇರೆಗೆ ಹೊರಡಿಸಿದ ವಿಶೇಷ ನೋಟುಗಳ ಮೂಲಕ ಪ್ರತಿಸ್ಥಾಪಿಸಬಹುದೋ;

(ii) ಯಾವುದೇ ಅಂಥ ವಿಶೇಷ ನೋಟುಗಳನ್ನು ಯಾವುದೇ ಇತರ ಬ್ಯಾಂಕು ನೋಟುಗಳು ಅಥವಾ ಒಂದು ರೂಪಾಯಿ ನೋಟುಗಳಿಗಾಗಿ ವಿನಿಮಯ ಮಾಡಬಹುದೋ

– ಆ ರೀತಿ ಮತ್ತು ಷರತ್ತುಗಳು ಅಥವಾ ಪರಿಮಿತಿಗಳನ್ನು ಉಪಬಂಧಿಸಲು ವಿನಿಯಮಗಳನ್ನು ಮಾಡಬಹುದು.

**29. ಬ್ಯಾಂಕು ನೋಟುಗಳ ಮೇಲಿನ ಸ್ಟಾಂಪು ಸುಂಕದಿಂದ ಬ್ಯಾಂಕು ವಿನಾಯತಿಯನ್ನು ಹೊಂದಿರತಕ್ಕುದು.**– ಬ್ಯಾಂಕು, ಅದು ಹೊರಡಿಸಿದ ಬ್ಯಾಂಕು ನೋಟುಗಳಿಗೆ ಸಂಬಂಧಿಸಿದಂತೆ ಭಾರತ ಸ್ಟ್ಯಾಂಪ್ ಅಧಿನಿಯಮ, 1899ರ ಮೇರೆಗೆ ಯಾವುದೇ ಸ್ಟಾಂಪು ಸುಂಕವನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕುದಲ್ಲ.

**30. ಕೇಂದ್ರ ಮಂಡಳಿಯನ್ನು ರದ್ದುಮಾಡಲು ಕೇಂದ್ರ ಸರ್ಕಾರದ ಅಧಿಕಾರಗಳು.**– (1) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಬ್ಯಾಂಕು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ವಿಧಿಸಿರುವ ಹೊಣೆಯನ್ನು ಈಡೇರಿಸಲು ತಪ್ಪಿದರೆ, ಕೇಂದ್ರ ಸರ್ಕಾರವು, ಭಾರತದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಮಂಡಳಿಯನ್ನು ರದ್ದುಗೊಳಿಸಿರುವುದಾಗಿ ಘೋಷಿಸಬಹುದು ಮತ್ತು ಆ ತರುವಾಯ ಬ್ಯಾಂಕಿನ ವ್ಯವಹಾರಗಳ ಸಾಮಾನ್ಯ ಅಧೀಕ್ಷಣೆ ಮತ್ತು ನಿರ್ದೇಶನವನ್ನು, ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಏಜೆನ್ಸಿಗೆ ವಹಿಸಿಕೊಡತಕ್ಕುದು ಮತ್ತು ಅಂಥ ಏಜೆನ್ಸಿಯು ಈ ಅಧಿನಿಯಮದ ಮೇರೆಗೆ ಕೇಂದ್ರ ಮಂಡಳಿಯು ಚಲಾಯಿಸಬಹುದಾದ ಅಥವಾ ಮಾಡಬಹುದಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು ಅಥವಾ ಎಲ್ಲ ಕೆಲಸಗಳು ಮತ್ತು ಕಾರ್ಯಗಳನ್ನು ಮಾಡಬಹುದು.

(2) ಈ ಪ್ರಕರಣದ ಮೇರೆಗೆ ಕ್ರಮವನ್ನು ತೆಗೆದುಕೊಂಡಾಗ, ಕೇಂದ್ರ ಸರ್ಕಾರವು, ಅಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕಾರಣವಾದ ಸಂದರ್ಭಗಳ ಮತ್ತು ತೆಗೆದುಕೊಂಡ ಕ್ರಮದ ಬಗ್ಗೆ ಪೂರ್ಣ ವರದಿಯನ್ನು ಅತಿ ಶೀಘ್ರವಾಗಿ ಮತ್ತು ಯಾವುದೇ ಸಂದರ್ಭದಲ್ಲಿ ಆ ಮಂಡಳಿಯನ್ನು ರದ್ದುಗೊಳಿಸುವ ಅಧಿಸೂಚನೆಯನ್ನು ಹೊರಡಿಸಿದ ಮೂರು ತಿಂಗಳುಗಳ ಒಳಗೆ ಸಂಸತ್ತಿನ ಮುಂದೆ ಇರಿಸುವಂತೆ ಮಾಡತಕ್ಕುದು.

**31. ತಗಾದೆ ಬಿಲ್ಲುಗಳು ಮತ್ತು ನೋಟುಗಳನ್ನು ಹೊರಡಿಸುವುದು.**- (1) ಬ್ಯಾಂಕು ಅಥವಾ ಈ ಅಧಿನಿಯಮದ ಮೂಲಕ ಸ್ಪಷ್ಟವಾಗಿ ಅಧಿಕೃತಗೊಳಿಸಿದಂತೆ ಕೇಂದ್ರ ಸರ್ಕಾರವನ್ನು ಹೊರತುಪಡಿಸಿ ಭಾರತದಲ್ಲಿನ ಯಾವುದೇ ವ್ಯಕ್ತಿಯ ತಗಾದೆಯ ಮೇಲೆ ಧಾರಕನಿಗೆ ಸಂದಾಯ ಮಾಡಬೇಕಾದ ಹಣದ ಸಂದಾಯಕ್ಕಾಗಿನ ವಿನಿಮಯ ಪತ್ರ, ಹುಂಡಿ, ಪ್ರಾಮಿಸರಿ ನೋಟು ಅಥವಾ ವಚನಬಂಧವನ್ನು ಬರೆಯತಕ್ಕುದಲ್ಲ, ಅಂಗೀಕರಿಸತಕ್ಕುದಲ್ಲ, ಅಥವಾ ಕೊಡತಕ್ಕುದಲ್ಲ ಅಥವಾ ಹೊರಡಿಸತಕ್ಕುದಲ್ಲ ಅಥವಾ ಯಾವನೇ ಅಂಥ ವ್ಯಕ್ತಿಯು ತಗಾದೆ ಮಾಡಿದ ಮೇಲೆ ಧಾರಕನಿಗೆ ಸಂದಾಯ ಮಾಡಬೇಕಾದ ಬಿಲ್ಲುಗಳ, ಹುಂಡಿಗಳ ಅಥವಾ ನೋಟುಗಳ ಬಗ್ಗೆ ಯಾವುದೇ ಹಣದ ಮೊತ್ತ ಅಥವಾ ಮೊತ್ತಗಳನ್ನು ಸಾಲವಾಗಿ ಪಡೆಯತಕ್ಕುದಲ್ಲ, ಕೊಡತಕ್ಕುದಲ್ಲ ಅಥವಾ ತೆಗೆದುಕೊಳ್ಳತಕ್ಕುದಲ್ಲ:

ಪರಂತು, ತಗಾದೆಯನ್ನು ಮಾಡಿದ ಮೇಲೆ ಅಥವಾ ಅನ್ಯಥಾ ಧಾರಕನಿಗೆ ಸಂದಾಯ ಮಾಡಬೇಕಾದ ಹುಂಡಿಗಳನ್ನೂ ಒಳಗೊಂಡು, ಚೆಕ್ಕುಗಳು ಅಥವಾ ಡ್ರಾಫ್ಟುಗಳನ್ನು ಬ್ಯಾಂಕರ್, ಶರಾಫ್ ಅಥವಾ ಏಜೆಂಟ್‌ನಲ್ಲಿನ ವೈಯಕ್ತಿಕ ಖಾತೆಯ ಮೇಲೆ ಬರೆಯಬಹುದು.

(2) ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881, (1881ರ 26) ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಬ್ಯಾಂಕನ್ನು ಅಥವಾ ಈ ಅಧಿನಿಯಮದ ಮೂಲಕ ಸ್ಪಷ್ಟವಾಗಿ ಅಧಿಕೃತಗೊಳಿಸಿದಂತೆ, ಕೇಂದ್ರ ಸರ್ಕಾರವನ್ನು ಹೊರತುಪಡಿಸಿ ಭಾರತದಲ್ಲಿನ ಯಾವನೇ ವ್ಯಕ್ತಿಯು ಆ ಲಿಖಿತದ ಧಾರಕನಿಗೆ ಸಂದಾಯಮಾಡಬೇಕೆಂದು ವ್ಯಕ್ತಪಡಿಸಿದ ಯಾವುದೇ ಪ್ರಾಮಿಸರಿ ನೋಟನ್ನು ಬರೆಯತಕ್ಕುದಲ್ಲ, ಅಥವಾ ಕೊಡತಕ್ಕುದಲ್ಲ.

**32. [ದಂಡ].**- ಭಾರತದ ರಿಸರ್ವ್ ಬ್ಯಾಂಕು (ತಿದ್ದುಪಡಿ) ಅಧಿನಿಯಮ, 1974 (1974ರ 51)ರ 9ನೇ ಪ್ರಕರಣದ ಮೂಲಕ ನಿರಸನಗೊಂಡಿದೆ.

**33. ಹೊರಡಿಸುವ ಇಲಾಖೆಯ ಆಸ್ತಿಗಳು.**- (1) ಹೊರಡಿಸುವ ಇಲಾಖೆಯ ಆಸ್ತಿಗಳು, ಇಲ್ಲಿ ಇನ್ನು ಮುಂದೆ ಪರಿಭಾಷಿಸಿದಂತೆ, ಹೊರಡಿಸುವ ಇಲಾಖೆಯ ಒಟ್ಟು ಹೊಣೆಗಾರಿಕೆಗಳಿಗಿಂತ ಕಡಿಮೆಯಲ್ಲದಿರುವಷ್ಟರಮಟ್ಟಿಗಿನ ಒಟ್ಟು ಮೊಬಲಗಿನಷ್ಟು ಚಿನ್ನದ ನಾಣ್ಯ, ಚಿನ್ನದ ಗಟ್ಟಿ, ವಿದೇಶಿ ಭದ್ರತಾ ಪತ್ರಗಳು, ರೂಪಾಯಿ ನಾಣ್ಯ ಮತ್ತು ರೂಪಾಯಿ ಭದ್ರತೆಗಳನ್ನು ಒಳಗೊಂಡಿರತಕ್ಕುದು.

(2) ಆಸ್ತಿಗಳೆಂದು ಧಾರಣ ಮಾಡಿರುವ ಚಿನ್ನದ ನಾಣ್ಯ, ಚಿನ್ನದ ಗಟ್ಟಿ, ವಿದೇಶಿ ಭದ್ರತೆಗಳ ಒಟ್ಟು ಮೌಲ್ಯವು ಮತ್ತು ಹಾಗೆ ಧಾರಣ ಮಾಡಿರುವ ಚಿನ್ನದ ನಾಣ್ಯ ಮತ್ತು ಚಿನ್ನದ ಗಟ್ಟಿಯ ಒಟ್ಟು ಮೌಲ್ಯವು ಯಾವುದೇ ಕಾಲದಲ್ಲಿ ಅನುಕ್ರಮವಾಗಿ ಎರಡು ನೂರು ಕೋಟಿ ರೂಪಾಯಿಗಳು ಮತ್ತು ಒಂದು ನೂರ ಹದಿನೈದು ಕೋಟಿ ರೂಪಾಯಿಗಳಿಗಿಂತ ಕಡಿಮೆಯಾಗಿರತಕ್ಕುದಲ್ಲ.

(3) ಆಸ್ತಿಗಳ ಉಳಿದವುಗಳನ್ನು ರೂಪಾಯಿ ನಾಣ್ಯ, ಯಾವುದೇ ಕಾಲಕ್ಕೆ ವಾಯಿದೆ ತುಂಬುವ ಭಾರತ ಸರ್ಕಾರದ ರೂಪಾಯಿ ಭದ್ರತೆಗಳು ಮತ್ತು 17ನೇ ಪ್ರಕರಣದ (4ಇ) ಖಂಡದ ಮೇರೆಗೆ ಯಾವುವೇ ಸಾಲಗಳು ಮತ್ತು ಮುಂಗಡಗಳಿಗಾಗಿ ರಾಷ್ಟ್ರೀಯ ಬ್ಯಾಂಕು ಬರೆದ ಪ್ರಾಮಿಸರಿ ನೋಟುಗಳು ಮತ್ತು 17ನೇ ಪ್ರಕರಣದ (ಎ) ಉಪಖಂಡ ಅಥವಾ (ಬಿ) ಉಪಖಂಡದ ಅಥವಾ

(ಬಿಬಿ) ಉಪಖಂಡದ ಮೇರೆಗೆ ಅಥವಾ 18ನೇ ಪ್ರಕರಣದ (1)ನೇ ಖಂಡದ ಮೇರೆಗೆ ಅರ್ಹತೆಯನ್ನು ಹೊಂದಿರುವ ಹಾಗೂ ಭಾರತದಲ್ಲಿ ಸಂದಾಯ ಮಾಡಬೇಕಾದಂಥ ವಿನಿಮಯಪತ್ರಗಳು ಮತ್ತು ಪ್ರಾಮಿಸರಿ ನೋಟುಗಳಲ್ಲಿ ಧಾರಣಮಾಡತಕ್ಕುದು.

*　　　　*　　　　*　　　　*

(4) ಈ ಪ್ರಕರಣದ ಉದ್ದೇಶಗಳಿಗಾಗಿ, ಚಿನ್ನದ ನಾಣ್ಯ ಮತ್ತು ಚಿನ್ನದ ಗಟ್ಟಿಯನ್ನು ತತ್ಕಾಲದಲ್ಲಿ ಪಡೆಯುವ ಅಂತರ್ ರಾಷ್ಟ್ರೀಯ ಮಾರುಕಟ್ಟೆ ಬೆಲೆಯನ್ನು ಮೀರದ ಬೆಲೆಯ ಮೇರೆಗೆ ಮೌಲ್ಯ ನಿರ್ಣಯಮಾಡತಕ್ಕುದು, ರೂಪಾಯಿ ನಾಣ್ಯವನ್ನು, ಅದರ ಮುಖ ಬೆಲೆಯ ಮೇರೆಗೆ ಮೌಲ್ಯ ನಿರ್ಣಯ ಮಾಡತಕ್ಕುದು ಮತ್ತು ಭದ್ರತೆಗಳನ್ನು ತತ್ಕಾಲದಲ್ಲಿ ಇರುವ ಮಾರುಕಟ್ಟೆ ದರಗಳನ್ನು ಮೀರದ ದರಗಳ ಮೇರೆಗೆ ಮೌಲ್ಯ ನಿರ್ಣಯಮಾಡತಕ್ಕುದು.

(5) ಆಸ್ತಿಗಳೆಂದು ಧಾರಣಮಾಡಿರುವ ಚಿನ್ನದ ನಾಣ್ಯ ಮತ್ತು ಚಿನ್ನದ ಗಟ್ಟಿಯ ಪೈಕಿ ಇಪ್ಪತ್ತರಲ್ಲಿ ಹದಿನೇಳರಷ್ಟಕ್ಕಿಂತ ಕಡಿಮೆಯಿಲ್ಲದೆ ಇರುವುದನ್ನು ಭಾರತದಲ್ಲಿ ಧಾರಣ ಮಾಡತಕ್ಕುದು ಮತ್ತು ಆಸ್ತಿಗಳಾಗಿ ಧಾರಣಮಾಡಿರುವ ಎಲ್ಲ ಚಿನ್ನದ ನಾಣ್ಯ ಮತ್ತು ಚಿನ್ನದ ಗಟ್ಟಿಗಳನ್ನು ಬ್ಯಾಂಕು ಅಥವಾ ಅದರ ಏಜೆನ್ಸಿಗಳ ಅಭಿರಕ್ಷೆಯಲ್ಲಿ ಧಾರಣ ಮಾಡತಕ್ಕುದು:

ಪರಂತು, ಯಾವುದೇ ಇತರ ಬ್ಯಾಂಕಿನಲ್ಲಿ ಅಥವಾ ಯಾವುದೇ ಟಂಕಸಾಲೆ ಅಥವಾ ಖಜಾನೆಯಲ್ಲಿ ಅಥವಾ ಸಾಗಣೆಯಲ್ಲಿರುವ ಬ್ಯಾಂಕಿಗೆ ಸೇರಿದ ಚಿನ್ನವನ್ನು ಆಸ್ತಿಗಳ ಭಾಗವೆಂದು ಪರಿಗಣಿಸತಕ್ಕುದು.

(6) ಈ ಪ್ರಕರಣದ ಉದ್ದೇಶಗಳಿಗಾಗಿ, ಆಸ್ತಿಗಳ ಭಾಗವೆಂದು ಧಾರಣಮಾಡಬಹುದಾದಂಥ ವಿದೇಶಿ ಭದ್ರತೆಗಳು,-

(i) ಅಂತರರಾಷ್ಟ್ರೀಯ ಹಣಕಾಸು ನಿಧಿಯ ಸದಸ್ಯನಾಗಿರುವಂಥ ಯಾವುದೇ ವಿದೇಶದ ಕರೆನ್ಸಿಯಲ್ಲಿ ಸಂದಾಯ ಮಾಡಬೇಕಾದ ಈ ಕೆಳಕಂಡ ಬಗೆಯ ಭದ್ರತೆಗಳಾಗಿರತಕ್ಕುದು, ಎಂದರೆ:-

(ಎ) ಆ ವಿದೇಶದ ಪ್ರಧಾನ ಕರೆನ್ಸಿ ಪ್ರಾಧಿಕಾರವಾಗಿರುವಂಥ ಬ್ಯಾಂಕಿನಲ್ಲಿನ ಶಿಲ್ಕುಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ, ಪುನರ್‌ನಿರ್ಮಾಣ ಮತ್ತು ಅಭಿವೃದ್ಧಿಗಾಗಿನ ಅಂತರರಾಷ್ಟ್ರೀಯ ಬ್ಯಾಂಕು, ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘ ಅಥವಾ ಅಂತರರಾಷ್ಟ್ರೀಯ ಹಣಕಾಸು ನಿಗಮ ಅಥವಾ ಏಷ್ಯಾ ಅಭಿವೃದ್ಧಿ ಬ್ಯಾಂಕು ಅಥವಾ ಅಂತರರಾಷ್ಟ್ರೀಯ ಒಪ್ಪಂದಗಳ ಬ್ಯಾಂಕು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅನುಮೋದಿಸಿದ ಯಾವುದೇ ಬ್ಯಾಂಕು ವ್ಯವಹಾರಗಳ ಅಥವಾ ಹಣಕಾಸು ಸಂಸ್ಥೆಯಲ್ಲಿ ಇಟ್ಟುಕೊಂಡು ಬಂದ ಅಥವಾ ಅವು ಹೊರಡಿಸಿದ ವಿದೇಶಿ ಕರೆನ್ಸಿಯಲ್ಲಿನ ಯಾವುದೇ ಇತರ ಶಿಲ್ಕುಗಳು ಅಥವಾ ಭದ್ರತೆಗಳು, ಪರಂತು, ಅವುಗಳನ್ನು ಹತ್ತು ವರ್ಷಗಳ ಅವಧಿಯೊಳಗೆ ಮರುಪಾವತಿ ಮಾಡಬೇಕು;

(ಬಿ) ಎರಡು ಅಥವಾ ಅದಕ್ಕಿಂತ ಹೆಚ್ಚು ಮಾನ್ಯತೆ ಪಡೆದ ರುಜುಗಳನ್ನು ಹೊಂದಿರುವ ಮತ್ತು ಆ ವಿದೇಶದಲ್ಲಿನ ಯಾವುದೇ ಸ್ಥಳದಲ್ಲಿ ಬರೆಯಲಾದ ಮತ್ತು ಸಂದಾಯ ಮಾಡಬೇಕಾದ ಮತ್ತು ತೊಂಬತ್ತು ದಿವಸಗಳನ್ನು ಮೀರದ ವಾಯಿದೆ ತುಂಬುವಿಕೆಯನ್ನು ಹೊಂದಿರುವ ವಿನಿಮಯ ಪತ್ರಗಳು; ಮತ್ತು

(ಸಿ) ಹತ್ತು ವರ್ಷಗಳೊಳಗೆ ವಾಯಿದೆ ತುಂಬುವ ಆ ವಿದೇಶದ ಸರ್ಕಾರದ ಭದ್ರತಾಪತ್ರಗಳಾಗಿರತಕ್ಕುದು;

(ii) ಅಂತರರಾಷ್ಟ್ರೀಯ ಹಣಕಾಸು ನಿಧಿಯ ಹೊಣೆಗಾರಿಕೆಯನ್ನು ಪ್ರತಿನಿಧಿಸುವ ಯಾವುದೇ ಹಣ ಪಡೆಯುವ ಹಕ್ಕುಗಳು.

**34. ಹೊರಡಿಸುವ ಇಲಾಖೆಯ ಹೊಣೆಗಾರಿಕೆಗಳು.-** (1) ಹೊರಡಿಸುವ ಇಲಾಖೆಯ ಹೊಣೆಗಾರಿಕೆಗಳು, ತತ್ಕಾಲದಲ್ಲಿ ಚಲಾವಣೆಯಲ್ಲಿರುವ ಭಾರತ ಸರ್ಕಾರದ ಕರೆನ್ಸಿ ನೋಟುಗಳ ಮತ್ತು ಬ್ಯಾಂಕು ನೋಟುಗಳ ಒಟ್ಟು ಮೊಬಲಗಿಗೆ ಸಮನಾದ ಮೊಬಲಗು ಆಗಿರತಕ್ಕದು.

* * * *

* * * *

**35.** [***ಪ್ರಾರಂಭಿಕ ಆಸ್ತಿಗಳು ಮತ್ತು ಹೊಣೆಗಾರಿಕೆಗಳು***] 1948ರ ಅಧಿನಿಯಮ 62, 7ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ (1.1.1949 ರಿಂದ ಜಾರಿಗೆ ಬರುವಂತೆ) ನಿರಸನಗೊಂಡಿದೆ.

**36.** [***ರೂಪಾಯಿ ನಾಣ್ಯಗಳ ಆಸ್ತಿಗಳಲ್ಲಿನ ಏರಿಳಿತಗಳೊಂದಿಗೆ ವ್ಯವಹರಿಸುವ ವಿಧಾನ***] 1963ರ ಅಧಿನಿಯಮ 55ರ 3ನೇ ಪ್ರಕರಣದ ಮೂಲಕ (1.2.1964ರಿಂದ ಜಾರಿಗೆ ಬಂದಂತೆ) ನಿರಸನಗೊಂಡಿದೆ.

**37. ವಿದೇಶಿ ಭದ್ರತಾಪತ್ರಗಳ ಬಗೆಗಿನ ಆಸ್ತಿಗಳ ಅಗತ್ಯತೆಯನ್ನು ಅಮಾನತುಗೊಳಿಸುವುದು.-** ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಬ್ಯಾಂಕು 33ನೇ ಪ್ರಕರಣದ (2)ನೇ ಉಪಖಂಡದ ಮೂಲಕ ಅಗತ್ಯಪಡಿಸಿದುದಕ್ಕಿಂತ ಕಡಿಮೆ ಮೌಲ್ಯದ ವಿದೇಶೀ ಭದ್ರತಾಪತ್ರಗಳನ್ನು ಆಸ್ತಿಗಳೆಂದು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮೊದಲ ಬಾರಿಗೆ ಆರು ತಿಂಗಳುಗಳನ್ನು ಮೀರದ ಅವಧಿಯವರೆಗೆ ಮತ್ತು ಅಂಥದೇ ಮಂಜೂರಾತಿಯೊಂದಿಗೆ ಒಂದು ಬಾರಿಗೆ ಮೂರು ತಿಂಗಳನ್ನು ಮೀರದ ಅವಧಿಗಳ ಮೂಲಕ ಕಾಲಕಾಲಕ್ಕೆ ವಿಸ್ತರಿಸಬಹುದಾದಂಥ ಅವಧಿಗಳಿಗಾಗಿ ಧಾರಣಮಾಡಬಹುದು:

* * * *

**38. ರೂಪಾಯಿ ನಾಣ್ಯಕ್ಕೆ ಸಂಬಂಧಿಸಿದಂತೆ ಸರ್ಕಾರ ಮತ್ತು ರಿಸರ್ವ್ ಬ್ಯಾಂಕಿನ ಹೊಣೆಗಳು.-** ಕೇಂದ್ರ ಸರ್ಕಾರವು, ಬ್ಯಾಂಕಿನ ಮೂಲಕವಲ್ಲದೆ ಯಾವುವೇ ರೂಪಾಯಿಗಳನ್ನು ಚಲಾವಣೆಗೆ ತರುವುದಿಲ್ಲವೆಂದು ವಚನಬಂಧವನ್ನು ಕೊಡತಕ್ಕುದು ಮತ್ತು ಬ್ಯಾಂಕು, ಚಲಾವಣೆಯ ಉದ್ದೇಶಗಳಿಗಾಗಿ ಅಲ್ಲದೆ ಅನ್ಯಥಾ ರೂಪಾಯಿ ನಾಣ್ಯವನ್ನು ವಿಲೇ ಮಾಡುವುದಿಲ್ಲವೆಂದು ವಚನಬಂಧವನ್ನು ಕೊಡತಕ್ಕುದು.

**39. ವಿವಿಧ ಬಗೆಯ ಕರೆನ್ಸಿಯನ್ನು ಸರಬರಾಜು ಮಾಡುವ ಬಗ್ಗೆ ಹೊಣೆ.-** (1) ಬ್ಯಾಂಕು, ರೂಪಾಯಿ ನಾಣ್ಯವನ್ನು ಬ್ಯಾಂಕು ನೋಟುಗಳು ಮತ್ತು ಭಾರತಸರ್ಕಾರದ ಕರೆನ್ಸಿ ನೋಟುಗಳಿಗಾಗಿ ತಗಾದೆ ಮಾಡಿದ ಮೇಲೆ ವಿನಿಮಯದಲ್ಲಿ ಕೊಡತಕ್ಕುದು ಮತ್ತು ಭಾರತ ನಾಣ್ಯ ತಯಾರಿಕೆ ಅಧಿನಿಯಮ, 1906ರ ಮೇರೆಗೆ ಕಾನೂನುಸಮ್ಮತ ಚಲಾವಣೆ ಹಣವಾಗಿರುವಂಥ ನಾಣ್ಯಕ್ಕಾಗಿ ವಿನಿಮಯದಲ್ಲಿ ನೋಟುಗಳು ಮತ್ತು ಬ್ಯಾಂಕು ನೋಟುಗಳನ್ನು ಕೊಡತಕ್ಕುದು.

(2) ಬ್ಯಾಂಕು, ಎರಡು ರೂಪಾಯಿಗಳು ಅಥವಾ ಅದಕ್ಕೂ ಹೆಚ್ಚಿನ ಕರೆನ್ಸಿ ನೋಟುಗಳು ಅಥವಾ ಬ್ಯಾಂಕು ನೋಟುಗಳಿಗಾಗಿ ವಿನಿಮಯದಲ್ಲಿ ಬ್ಯಾಂಕಿನ ಅಭಿಪ್ರಾಯದಲ್ಲಿ ಚಲಾವಣೆಗಾಗಿ ಅಗತ್ಯವಾಗಬಹುದಾದಂಥ ಪರಿಮಾಣಗಳಲ್ಲಿ ಕಡಿಮೆ ಮೌಲ್ಯದ ಕರೆನ್ಸಿ ನೋಟುಗಳು ಅಥವಾ ಬ್ಯಾಂಕು ನೋಟುಗಳು ಅಥವಾ ಭಾರತ ನಾಣ್ಯ ತಯಾರಿಕಾ ಅಧಿನಿಯಮ, 1906ರ ಮೇರೆಗೆ

ಕಾನೂನು ಸಮ್ಮತ ಚಲಾವಣೆಯ ಹಣವಾಗಿರುವಂಥ ಇತರ ನಾಣ್ಯಗಳನ್ನು ಸರಬರಾಜು ಮಾಡತಕ್ಕುದು; ಮತ್ತು ಕೇಂದ್ರ ಸರ್ಕಾರವು, ತಗಾದೆ ಮಾಡಿದ ಮೇಲೆ ಅಂಥ ನಾಣ್ಯಗಳನ್ನು ಸರಬರಾಜು ಮಾಡತಕ್ಕುದು. ಯಾವುದೇ ಕಾಲದಲ್ಲಿ ಕೇಂದ್ರ ಸರ್ಕಾರವು ಅಂಥ ನಾಣ್ಯಗಳನ್ನು ಸರಬರಾಜು ಮಾಡಲು ತಪ್ಪಿದರೆ, ಬ್ಯಾಂಕು ಸಾರ್ವಜನಿಕರಿಗೆ ಅವುಗಳನ್ನು ಸರಬರಾಜು ಮಾಡುವ ಅದರ ಹೊಣೆಗಳಿಂದ ಮುಕ್ತವಾಗತಕ್ಕುದು.

**40. ವಿದೇಶಿ ವಿನಿಮಯದಲ್ಲಿನ ವ್ಯವಹಾರಗಳು.**- ಬ್ಯಾಂಕು, ಅದರ ಮುಂಬಯಿ, ಕಲ್ಕತ್ತಾ, ದೆಹಲಿ ಅಥವಾ ಮದ್ರಾಸು ಕಛೇರಿಯಲ್ಲಿ ಅಥವಾ ಕೇಂದ್ರ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ಅದರ ಶಾಖೆಗಳಲ್ಲಿ, ಅಂತರರಾಷ್ಟ್ರೀಯ ಹಣಕಾಸು ನಿಧಿಯ ಬಗ್ಗೆ ಅದರ ಹೊಣೆಗಳಿಗೆ ವಿನಿಮಯ ದರಗಳು ಸಂಬಂಧಪಡುವಷ್ಟರಮಟ್ಟಿಗೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ಧರಿಸಬಹುದಾದಂಥ ವಿನಿಮಯ ದರಗಳಲ್ಲಿ ಮತ್ತು ಅಂಥ ಷರತ್ತುಗಳ ಮೇಲೆ ವಿದೇಶಿ ವಿನಿಮಯವನ್ನು, ಈ ಬಗ್ಗೆ ತಗಾದೆಯನ್ನು ಮಾಡುವ ಯಾವನೇ ಅಧಿಕೃತಗೊಳಿಸಿದ ವ್ಯಕ್ತಿಗೆ ಮಾರಾಟ ಮಾಡತಕ್ಕುದು, ಅಥವಾ ಅವನಿಂದ ಕೊಳ್ಳತಕ್ಕುದು:

ಪರಂತು, ಯಾವನೇ ವ್ಯಕ್ತಿಯು, ಎರಡು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಮೌಲ್ಯದ ವಿದೇಶಿ ವಿನಿಮಯವನ್ನು ಕೊಳ್ಳಲು ಅಥವಾ ಮಾರಾಟ ಮಾಡಲು ತಗಾದೆ ಮಾಡಲು ಹಕ್ಕುಳ್ಳವನಾಗಿರತಕ್ಕುದಲ್ಲ.

**ವಿವರಣೆ:**- ಈ ಪ್ರಕರಣದಲ್ಲಿ "ಅಧಿಕೃತಗೊಳಿಸಿದ ವ್ಯಕ್ತಿ" ಎಂದರೆ ಅವನ ತಗಾದೆಗೆ ಸಂಬಂಧಪಡುವಂಥ ವಿದೇಶಿ ವಿನಿಮಯವನ್ನು ಕೊಳ್ಳಲು ಅಥವಾ ಸಂದರ್ಭಾನುಸಾರ ಮಾರಾಟ ಮಾಡಲು ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1947 (1947ರ 7)ರ ಮೂಲಕ ಅಥವಾ ಅದರ ಮೇರೆಗೆ ಹಕ್ಕುಳ್ಳವನಾಗಿರುವ ವ್ಯಕ್ತಿ;

**41** [* * *]

**41ಎ.** [***ಭಾರತ ಮತ್ತು ಬರ್ಮಾದ ನಡುವೆ ರವಾನೆಯ ವ್ಯವಸ್ಥೆ ಮಾಡಲು ಹೊಣೆ***] 1947ರ ಅಧಿನಿಯಮ ಸಂಖ್ಯೆ 11,22ನೇ ಪ್ರಕರಣದ ಮೂಲಕ (1.4.1947ರಿಂದ ಜಾರಿಗೆ ಬರುವಂತೆ) ನಿರಸನಗೊಂಡಿದೆ.

**42. ಅನುಸೂಚಿತ ಬ್ಯಾಂಕುಗಳ ನಗದು ಮೀಸಲುಗಳನ್ನು ಬ್ಯಾಂಕಿನಲ್ಲಿ ಇಡತಕ್ಕುದು.**- (1) ಎರಡನೇ ಅನುಸೂಚಿಯಲ್ಲಿ ಸೇರಿಸಿರುವ ಪ್ರತಿಯೊಂದು ಬ್ಯಾಂಕು ಯಾವುದರ ಸರಾಸರಿ ದೈನಂದಿನ ಶಿಲ್ಕು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿವರಣ ಪಟ್ಟಿಕೆಯಲ್ಲಿ ತೋರಿಸಿರುವಂತೆ ಭಾರತದಲ್ಲಿ ಅಂಥ ಬ್ಯಾಂಕಿನ ಒಟ್ಟು ತಗಾದೆ ಮತ್ತು ಅವಧಿ ಹೊಣೆಗಾರಿಕೆಗಳ ಶೇಕಡ ಮೂರರಷ್ಟಕ್ಕಿಂತ ಮತ್ತು ಅವಧಿ ಹೊಣೆಗಾರಿಕೆಗಳ ಎರಡಕ್ಕಿಂತ ಕಡಿಮೆಯಾಗಿರತಕ್ಕುದಲ್ಲವೋ ಆ ಸರಾಸರಿ ದೈನಂದಿನ ಶಿಲ್ಕು ಮೊಬಲಗನ್ನು ಬ್ಯಾಂಕಿನಲ್ಲಿ ಇಟ್ಟುಕೊಂಡು ಬರತಕ್ಕುದು:

ಪರಂತು, ಬ್ಯಾಂಕು, ಭಾರತದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸದರಿ ದರವನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಾದ ದರಕ್ಕೆ ಹೆಚ್ಚಿಸಬಹುದು, ಆದಾಗ್ಯೂ ಆ ದರವು, ಒಟ್ಟು ತಗಾದೆ ಮತ್ತು ಅವಧಿ ಹೊಣೆಗಾರಿಕೆಗಳ ಶೇಕಡ ಇಪ್ಪತ್ತಕ್ಕಿಂತ ಹೆಚ್ಚಿಗೆಯಾಗಿರತಕ್ಕುದಲ್ಲ.

**ವಿವರಣೆ:**- ಈ ಪ್ರಕರಣದ ಉದ್ದೇಶಕ್ಕಾಗಿ-

(ಎ) "ಸರಾಸರಿ ದೈನಂದಿನ ಶಿಲ್ಕು" ಎಂಬುದು ಹದಿನೈದು ದಿವಸದ ಪ್ರತಿದಿನದಂದು ವ್ಯವಹಾರವನ್ನು ಮುಕ್ತಾಯಮಾಡುವಲ್ಲಿ ಧಾರಣ ಮಾಡಿದ ಶಿಲ್ಕುಗಳ ಸರಾಸರಿ ಎಂಬ ಅರ್ಥವನ್ನು ಹೊಂದಿರತಕ್ಕುದು;

(ಬಿ) "ಹದಿನೈದು ದಿವಸಗಳು" ಎಂಬುದು ಶನಿವಾರದಿಂದ ಮುಂದಿನ ಎರಡನೇ ಶುಕ್ರವಾರದವರೆಗಿನ (ಎರಡೂ ದಿವಸಗಳನ್ನು ಒಳಗೊಂಡ) ಅವಧಿ ಎಂಬ ಅರ್ಥವನ್ನು ಹೊಂದಿರತಕ್ಕುದು;

(ಸಿ) "ಹೊಣೆಗಾರಿಕೆಗಳು" ಎಂಬುದು–

(i) ಬ್ಯಾಂಕಿನ ಲಾಭ ಅಥವಾ ನಷ್ಟದ ಲೆಕ್ಕದಲ್ಲಿ ಸಂದಾಯ ಮಾಡಿದ ಬಂಡವಾಳ ಅಥವಾ ಮೀಸಲುಗಳು ಅಥವಾ ಯಾವುದೇ ಜಮೆ ಶಿಲ್ಕು;

(ii) ಬ್ಯಾಂಕು ಅಥವಾ ರಾಷ್ಟ್ರೀಯ ಬ್ಯಾಂಕಿನಿಂದ ಅಥವಾ ಅಭಿವೃದ್ಧಿ ಬ್ಯಾಂಕಿನಿಂದ ಅಥವಾ ಎಕ್ಸಿಂ ಬ್ಯಾಂಕಿನಿಂದ ಅಥವಾ ಪುನಾರಚನೆ ಬ್ಯಾಂಕಿನಿಂದ ಅಥವಾ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನಿಂದ ಅಥವಾ ಸಣ್ಣ ಕೈಗಾರಿಕೆಗಳ ಬ್ಯಾಂಕಿನಿಂದ ತೆಗೆದುಕೊಂಡ ಯಾವುದೇ ಸಾಲದ ಮೊಬಲಗು;

(iii) ರಾಜ್ಯ ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ ಅಂಥ ಬ್ಯಾಂಕು ರಾಜ್ಯ ಸರ್ಕಾರ ಅಥವಾ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ಅಧಿನಿಯಮ, 1962ರ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದಿಂದ ತೆಗೆದುಕೊಂಡ ಯಾವುದೇ ಸಾಲವು ಸಹ ಮತ್ತು ಯಾವುದೇ ಸಹಕಾರಿ ಸಂಘವು ಅದರ ಕಾರ್ಯಾಚರಣೆಯ ಪ್ರದೇಶದಲ್ಲಿ ಬ್ಯಾಂಕಿನಲ್ಲಿ ಇಟ್ಟುಕೊಂಡು ಬಂದ ಅದರ ಮೀಸಲು ನಿಧಿ ಅಥವಾ ಅದರ ಯಾವುದೇ ಭಾಗವನ್ನು ಪ್ರತಿನಿಧಿಸುವ ಅಂಥ ಬ್ಯಾಂಕಿನಲ್ಲಿನ ಹಣದ ಯಾವುದೇ ಠೇವಣಿ;

(iv) ರಾಜ್ಯ ಸಹಕಾರಿ ಬ್ಯಾಂಕಿನಲ್ಲಿ ಇಟ್ಟುಕೊಂಡು ಬಂದ ಯಾವುದೇ ಶಿಲ್ಕಿನ ಮೇಲೆ ಮುಂಗಡವನ್ನು ಕೊಟ್ಟಿರುವಂಥ ಆ ರಾಜ್ಯ ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಅಂಥ ಮುಂಗಡಕ್ಕೆ ಸಂಬಂಧಿಸಿದಂತೆ ಬಾಕಿಯಾಗಿರುವ ಮೊಬಲಗಿನಷ್ಟರಮಟ್ಟಿಗೆ ಅಂಥ ಶಿಲ್ಕು;

(v) ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಸಂದರ್ಭದಲ್ಲಿ ಅದರ ಪ್ರಾಯೋಜಿತ ಬ್ಯಾಂಕಿನಿಂದ ಅಂಥ ಬ್ಯಾಂಕು ತೆಗೆದುಕೊಂಡ ಯಾವುದೇ ಸಾಲವು ಸಹ

–ಇವುಗಳನ್ನು ಒಳಗೊಳ್ಳತಕ್ಕುದಲ್ಲ;

(ಡಿ) (i) ಸ್ಟೇಟ್ ಬ್ಯಾಂಕು;

(ii) ಭಾರತ ಸ್ಟೇಟ್ ಬ್ಯಾಂಕು (ಸಹಾಯಕ ಬ್ಯಾಂಕುಗಳ) ಅಧಿನಿಯಮ, 1959 (1959ರ 38)ರ 2ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಸಹಾಯಕ ಬ್ಯಾಂಕು;

(iii) ಬ್ಯಾಂಕಿಂಗ್ ಕಂಪನಿಗಳ ( ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5)ರ 3ನೇ ಪ್ರಕರಣದ ಮೂಲಕ ರಚಿಸಲಾದ ಸಂವಾದಿ ಹೊಸ ಬ್ಯಾಂಕು;

(iiiಎ) ಬ್ಯಾಂಕಿಂಗ್ ಕಂಪೆನಿಗಳ ( ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980ರ 1)ರ 3ನೇ ಪ್ರಕರಣದ ಮೂಲಕ ರಚಿಸಲಾದ ಸಂವಾದಿ ಹೊಸ ಬ್ಯಾಂಕು;

(iv) ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ 10)ರ 5ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿದಂತೆ ಬ್ಯಾಂಕಿಂಗ್ ಕಂಪೆನಿ; ಅಥವಾ

(v) ಸಹಕಾರಿ ಬ್ಯಾಂಕು; ಅಥವಾ

(vi) ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಿರುವ ಯಾವುದೇ ಇತರ ಹಣಕಾಸು ಸಂಸ್ಥೆ

–ಇವುಗಳಿಗೆ ರಾಜ್ಯ ಸಹಕಾರಿ ಬ್ಯಾಂಕು ಆಗಿಲ್ಲದೇ ಇರುವಂಥ ಅನುಸೂಚಿತ ಬ್ಯಾಂಕ್ "ಹೊಣೆಗಾರಿಕೆಗಳ" ಒಟ್ಟು ಮೊತ್ತವನ್ನು ಎಲ್ಲ ಅಂಥ ಬ್ಯಾಂಕುಗಳು ಮತ್ತು ಅನುಸೂಚಿತ ಬ್ಯಾಂಕಿಗೆ ಸೇರಿದ ಸಂಸ್ಥೆಗಳ ಹೊಣೆಗಾರಿಕೆಗಳ ಒಟ್ಟು ಮೊತ್ತದಿಂದ ಕಳೆಯತಕ್ಕುದು;

(ಇ) (i) ಸ್ಟೇಟ್ ಬ್ಯಾಂಕು;

(ii) ಭಾರತ ಸ್ಟೇಟ್ ಬ್ಯಾಂಕು (ಸಹಾಯಕ ಬ್ಯಾಂಕುಗಳ) ಅಧಿನಿಯಮ, 1959 (1959ರ 38)ರ 2ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ಸಹಾಯಕ ಬ್ಯಾಂಕು;

(iii) ಬ್ಯಾಂಕಿಂಗ್ ಕಂಪೆನಿಗಳ ( ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5)ರ 3ನೇ ಪ್ರಕರಣದ ಮೂಲಕ ರಚಿಸಲಾದ ಸಂವಾದಿ ಹೊಸ ಬ್ಯಾಂಕು;

(iiiಎ) ಬ್ಯಾಂಕಿಂಗ್ ಕಂಪೆನಿಗಳ ( ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5)ರ 3ನೇ ಪ್ರಕರಣದ ಮೂಲಕ ರಚಿಸಲಾದ ಸಂವಾದಿ ಹೊಸ ಬ್ಯಾಂಕು;

(iv) ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ 10)ರ 5ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿದಂತೆ ಬ್ಯಾಂಕಿಂಗ್ ಕಂಪೆನಿ; ಅಥವಾ

(v) ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಿರುವ ಯಾವುದೇ ಇತರ ಹಣಕಾಸು ಸಂಸ್ಥೆ

–ಇವುಗಳಿಗೆ ರಾಜ್ಯ ಸಹಕಾರಿ ಬ್ಯಾಂಕು ಆಗಿರುವಂಥ ಅನುಸೂಚಿತ ಬ್ಯಾಂಕಿನ "ಹೊಣೆಗಾರಿಕೆಗಳ" ಒಟ್ಟು ಮೊತ್ತವನ್ನು ಎಲ್ಲ ಅಂಥ ಬ್ಯಾಂಕುಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕಿನ ಸಂಸ್ಥೆಗಳ ಒಟ್ಟು ಹೊಣೆಗಾರಿಕೆಗಳ ಒಟ್ಟು ಮೊತ್ತದಿಂದ ಕಳೆಯತಕ್ಕುದು.

(1ಎ) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಬ್ಯಾಂಕು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಪ್ರತಿಯೊಂದು ಅನುಸೂಚಿತ ಬ್ಯಾಂಕು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಬ್ಯಾಂಕಿನಲ್ಲಿ, (1)ನೇ ಉಪಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಿದ ಶಿಲ್ಕಿನ ಜತೆಗೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದರಕ್ಕಿಂತ ಕಡಿಮೆಯಾಗಿಲ್ಲದೆ ಇರತಕ್ಕಂಥ ಮೊಬಲಗಿನ ಹೆಚ್ಚುವರಿ ಸರಾಸರಿ ದೈನಂದಿನ ಶಿಲ್ಕನ್ನು ಇಟ್ಟುಕೊಂಡು ಬರತಕ್ಕುದು; ಅಂಥ ಹೆಚ್ಚುವರಿ ಶಿಲ್ಕನ್ನು ಅದರ ತಗಾದೆ ಮತ್ತು

ಅವಧಿ ಹೊಣೆಗಾರಿಕೆಗಳ ಮೇಲಿನ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ವಿವರ ಪಟ್ಟಿಕೆಯಲ್ಲಿ ತೋರಿಸಿರುವಂತೆ ಬ್ಯಾಂಕಿನ ತಗಾದೆ ಮತ್ತು ಅವಧಿ ಹೊಣೆಗಾರಿಕೆಗಳ ಒಟ್ಟಿನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಲೆಕ್ಕ ಹಾಕಿರಬೇಕು:

ಪರಂತು, ಬ್ಯಾಂಕು ಭಾರತ ರಾಜಪತ್ರದಲ್ಲಿ ಪ್ರತ್ಯೇಕ ಅಧಿಸೂಚನೆಯ ಮೂಲಕ 2ನೇ ಅನುಸೂಚಿಯಲ್ಲಿ ತರುವಾಯದಲ್ಲಿ ಸೇರಿಸಿದ ಬ್ಯಾಂಕಿಗೆ ಸಂಬಂಧಿಸಿದಂತೆ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

(1–ಎಎ) (1)ನೇ ಉಪಪ್ರಕರಣದಲ್ಲಿ ಅಥವಾ (1ಎ) ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ಅನುಸೂಚಿತ ಬ್ಯಾಂಕು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿವರ ಪಟ್ಟಿಕೆಯಲ್ಲಿ ತೋರಿಸಿರುವಂತೆ ಅದರ ತಗಾದೆ ಮತ್ತು ಅವಧಿ ಹೊಣೆಗಾರಿಕೆಗಳ ಒಟ್ಟಿನ ಶೇಕಡ ಇಪ್ಪತ್ತಕ್ಕಿಂತ ಹೆಚ್ಚಾಗಿರತಕ್ಕಂಥ ಯಾವುದೇ ಶಿಲ್ಕನ್ನು ಬ್ಯಾಂಕಿನಲ್ಲಿ ಇಟ್ಟುಕೊಂಡುಬರುವುದು ಯಾವುದೇ ಅನುಸೂಚಿತ ಬ್ಯಾಂಕಿಗೆ ಅವಶ್ಯವಿರತಕ್ಕುದಲ್ಲ.

(1ಬಿ) ಯಾವುದೇ ಅನುಸೂಚಿತ ಬ್ಯಾಂಕು, (1)ನೇ ಉಪಪ್ರಕರಣದ ಪರಂತುಕದ ಮೇರೆಗೆ ಅಥವಾ (1ಎ) ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಅನುಸರಣೆಯಲ್ಲಿ, ಅಂಥ ಅಧಿಸೂಚನೆಯ ಮೂಲಕ ಇಟ್ಟುಕೊಂಡು ಬರಬೇಕೆಂದು ಅಗತ್ಯಪಡಿಸಿರುವುದಕ್ಕಿಂತ ಕಡಿಮೆಯಿಲ್ಲದಂಥ ಮೊಬಲಗಿನ ಯಾವುದೇ ಶಿಲ್ಕನ್ನು ಬ್ಯಾಂಕಿನಲ್ಲಿ ಇಟ್ಟುಕೊಂಡು ಬಂದಿರುವಲ್ಲಿ ಬ್ಯಾಂಕು, ಯಾವುದೇ ಅಂಥ ಅಧಿಸೂಚನೆಯನ್ನು ಹೊರಡಿಸಿಲ್ಲದಿದ್ದರೆ ಆ ಅನುಸೂಚಿತ ಬ್ಯಾಂಕು ಇಟ್ಟುಕೊಂಡು ಬರಬೇಕಾಗಿದ್ದಂಥ ಶಿಲ್ಕಿಗಿಂತ ಹೆಚ್ಚಿಗೆಯಾಗಿ ವಾಸ್ತವವಾಗಿ ಇಟ್ಟುಕೊಂಡು ಬಂದಿರುವಂಥ ಶಿಲ್ಕಿನ ಮೊಬಲಗಿನ ಮೇಲೆ ಕಾಲಕಾಲಕ್ಕೆ ಬ್ಯಾಂಕು ನಿರ್ಧರಿಸಬಹುದಾದಂಥ ದರ ಅಥವಾ ದರಗಳಲ್ಲಿ ಬಡ್ಡಿಯನ್ನು ಅನುಸೂಚಿತ ಬ್ಯಾಂಕಿಗೆ ಸಂದಾಯ ಮಾಡಬಹುದು:

ಪರಂತು, (1)ನೇ ಉಪಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ಅಥವಾ (1ಎ) ಉಪಪ್ರಕರಣದ ಮೇರೆಗೆ ಇಟ್ಟುಕೊಂಡು ಬರಬೇಕೆಂದು ಅಗತ್ಯಪಡಿಸಿದ ಶಿಲ್ಕಿಗಿಂತ ಹೆಚ್ಚಿಗೆಯಾಗಿರುವಂತೆ ವಾಸ್ತವವಾಗಿ ಇಟ್ಟುಕೊಂಡುಬಂದ ಯಾವುದೇ ಅಂಥ ಮೊಬಲಗಿನ ಮೇಲೆ ಯಾವುದೇ ಬಡ್ಡಿಯನ್ನು ಸಂದಾಯಮಾಡತಕ್ಕುದಲ್ಲ:

ಮತ್ತೂ ಪರಂತು, 5ನೇ ಉಪಪ್ರಕರಣದ ಮೇರೆಗೆ, ಬ್ಯಾಂಕು, (3)ನೇ ಉಪಪ್ರಕರಣದ ಮೂಲಕ ವಿಧಿಸಿದ ದಂಡದ ಸಂದಾಯವನ್ನು ತಗಾದೆ ಮಾಡದೇ ಇರುವಲ್ಲಿ, ಅದು, ಅಂಥ ಮೊಬಲಗು (1)ನೇ ಉಪಪ್ರಕರಣದ ಪರಂತುಕದ ಮೇರೆಗೆ ಅಥವಾ (1ಎ) ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಅನುಸರಣೆಯಲ್ಲಿ ಇಟ್ಟುಕೊಂಡು ಬರಬೇಕೆಂದು ಅಗತ್ಯಪಡಿಸಿದ ಶಿಲ್ಕಿಗಿಂತ ಕಡಿಮೆಯಾಗಿದ್ದಾಗ್ಯೂ, ಅನುಸೂಚಿತ ಬ್ಯಾಂಕು ಅದರಲ್ಲಿ ವಾಸ್ತವವಾಗಿ ಇಟ್ಟುಕೊಂಡುಬಂದಿರುವ ಮೊಬಲಗಿನ ಮೇಲೆ ಕಾಲಕಾಲಕ್ಕೆ ಬ್ಯಾಂಕು ನಿರ್ಧರಿಸಬಹುದಾದಂಥ ದರ ಅಥವಾ ದರಗಳಲ್ಲಿ ಬಡ್ಡಿಯನ್ನು ಸಂದಾಯ ಮಾಡಬಹುದು.

(1ಸಿ) ಬ್ಯಾಂಕು ಈ ಪ್ರಕರಣದ ಉದ್ದೇಶಗಳಿಗಾಗಿ, ಯಾವುದೇ ವ್ಯವಹಾರಕ್ಕೆ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಅಂಥ ವ್ಯವಹಾರವನ್ನು ಅಥವಾ ವ್ಯವಹಾರಗಳನ್ನು ಅನುಸೂಚಿತ ಬ್ಯಾಂಕಿನ ಭಾರತದಲ್ಲಿನ ಹೊಣೆಯೆಂದು ಪರಿಗಣಿಸತಕ್ಕುದೆಂದು ನಿರ್ದಿಷ್ಟಪಡಿಸಬಹುದು ಮತ್ತು ಯಾವುದೇ ವ್ಯವಹಾರದ ಅಥವಾ ವ್ಯವಹಾರಗಳ ವರ್ಗವು ಈ ಪ್ರಕರಣದ ಉದ್ದೇಶಗಳಿಗಾಗಿ ಅನುಸೂಚಿತ ಬ್ಯಾಂಕಿನ ಹೊಣೆಯೆಂದು ಪರಿಗಣಿಸತಕ್ಕುದೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಅದರ ಬಗ್ಗೆ ಬ್ಯಾಂಕಿನ ತೀರ್ಮಾನವು ಅಂತಿಮವಾಗಿರತಕ್ಕುದು.

(2) ಪ್ರತಿಯೊಂದು ಅನುಸೂಚಿತ ಬ್ಯಾಂಕು,-

(ಎ) ಅದರ ತಗಾದೆ ಮತ್ತು ಅವಧಿ ಹೊಣೆಗಾರಿಕೆಗಳ ಮೊಬಲಗು ಮತ್ತು ಅವುಗಳನ್ನು ತಗಾದೆ ಮತ್ತು ಅವಧಿ ಹೊಣೆಗಾರಿಕೆಗಳೆಂದು ವರ್ಗೀಕರಿಸಿ ಭಾರತದಲ್ಲಿ ಬ್ಯಾಂಕುಗಳಿಂದ ಅದು ಪಡೆದ ಸಾಲಗಳ ಮೊಬಲಗು,

* * * *

(ಬಿ) ಅದು ಭಾರತದಲ್ಲಿ ಧಾರಣಮಾಡಿರುವ ಕಾನೂನು ಸಮ್ಮತ ಚಲಾವಣೆಯ ನೋಟುಗಳು ಮತ್ತು ನಾಣ್ಯಗಳ ಒಟ್ಟು ಮೊಬಲಗು,

(ಸಿ) ಭಾರತದಲ್ಲಿನ ಬ್ಯಾಂಕಿನಲ್ಲಿ ಅದು ಧಾರಣಮಾಡಿರುವ ಶಿಲ್ಕು,

(ಡಿ) ಚಾಲ್ತಿ ಖಾತೆಯಲ್ಲಿ ಇತರ ಬ್ಯಾಂಕುಗಳಲ್ಲಿ ಅದು ಧಾರಣಮಾಡಿರುವ ಶಿಲ್ಕುಗಳು ಮತ್ತು ಭಾರತದಲ್ಲಿ ಕೇಳಿದಾಗ ಮತ್ತು ಅಲ್ಪಕಾಲಿಕ ನೋಟೀಸಿನ ಮೂಲಕ ಕೊಡಬೇಕಾದ ಹಣ,

(ಇ) ಖಜಾನೆ ಬಿಲ್ಲುಗಳು ಮತ್ತು ಖಜಾನೆ ಠೇವಣಿ ರಸೀತಿಗಳನ್ನು ಒಳಗೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತಾಪತ್ರಗಳಲ್ಲಿನ ಹೂಡಿಕೆಗಳು (ಪುಸ್ತಕ ಮೌಲ್ಯದಲ್ಲಿ),

(ಎಫ್) ಭಾರತದಲ್ಲಿನ ಮುಂಗಡಗಳ ಮೊಬಲಗು,

(ಜಿ) ಭಾರತದಲ್ಲಿ ಖರೀದಿಸಿರುವ ಮತ್ತು ಮುಂಗಡವಾಗಿ ಮುರಿದ ಅಂತರ್ದೇಶೀಯ ಬಿಲ್ಲುಗಳು ಮತ್ತು ಖರೀದಿಸಿದ ಮತ್ತು ಮುಂಗಡವಾಗಿ ಮುರಿದ ವಿದೇಶಿ ಬಿಲ್ಲುಗಳು

- ಇವುಗಳನ್ನು ತೋರಿಸುವ ಅಂಥ ಬ್ಯಾಂಕಿನ ಇಬ್ಬರು ಜವಾಬ್ದಾರಿಯುತ ಅಧಿಕಾರಿಗಳು ರುಜು ಮಾಡಿರುವ ವಿವರ ಪಟ್ಟಿಕೆಯನ್ನು, ಬ್ಯಾಂಕಿಗೆ ಪ್ರತಿಯೊಂದು ಪರ್ಯಾಯವಾದ ಶುಕ್ರವಾರದಂದು ವ್ಯವಹಾರವು ಮುಕ್ತಾಯವಾದ ಮೇಲೆ ಕಳುಹಿಸತಕ್ಕುದು, ಮತ್ತು

ಅಂಥ ಪ್ರತಿಯೊಂದು ವಿವರಪಟ್ಟಿಕೆಯನ್ನು, ಅದು ಸಂಬಂಧಪಡುವಂಥ ದಿನಾಂಕದ ತರುವಾಯ ಏಳು ದಿವಸಗಳನ್ನು ಮೀರದಂತೆ ಕಳುಹಿಸತಕ್ಕುದು:

ಪರಂತು, ಬ್ಯಾಂಕು, ಭಾರತದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಹಿಂದೆ ಹೇಳಿದ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿವರವನ್ನು ತೆಗೆದುಹಾಕಬಹುದು, ಮಾರ್ಪಾಟು ಮಾಡಬಹುದು ಅಥವಾ ಅದಕ್ಕೆ ಸೇರಿಸಬಹುದು:

ಮತ್ತೂ ಪರಂತು, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ 26)ರ ಮೇರೆಗೆ ಅಂಥ ಪರ್ಯಾಯ ಶುಕ್ರವಾರವು ಅನುಸೂಚಿತ ಬ್ಯಾಂಕಿನ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಕಚೇರಿಗಳಿಗೆ ಸಾರ್ವಜನಿಕ ರಜಾ ದಿನವಾಗಿರುವಲ್ಲಿ, ಆ ವಿವರ ಪಟ್ಟಿಕೆಯು ಅಂಥ ಕಚೇರಿಗೆ ಅಥವಾ ಕಚೇರಿಗಳಿಗೆ ಸಂಬಂಧಿಸಿದಂತೆ, ಹಿಂದಿನ ಕೆಲಸದ ದಿವಸದ ಅಂಕಿಅಂಶಗಳನ್ನು ಕೊಡತಕ್ಕುದು. ಆದರೆ ಅದು ಆ ಶುಕ್ರವಾರಕ್ಕೆ ಸಂಬಂಧಪಡುವುದೆಂದು ಭಾವಿಸತಕ್ಕುದು:

ಅದೂ ಅಲ್ಲದೆ, ಬ್ಯಾಂಕಿಗೆ ಯಾವುದೇ ಅನುಸೂಚಿತ ಬ್ಯಾಂಕಿನ ಸಂದರ್ಭದಲ್ಲಿ ಆ ಬ್ಯಾಂಕು ಅಥವಾ ಅದರ ಶಾಖೆಗಳ ಭೌಗೋಳಿಕ ಪರಿಸ್ಥಿತಿಯ ಕಾರಣದಿಂದಾಗಿ ಈ ಉಪಪ್ರಕರಣದ ಮೇರೆಗೆ ಪಾಕ್ಷಿಕ ವಿವರಪಟ್ಟಿಕೆಯನ್ನು ಒದಗಿಸುವುದು ಕಾರ್ಯಸಾಧ್ಯವಲ್ಲ ಎಂದು ಮನದಟ್ಟಾಗಿರುವಲ್ಲಿ, ಬ್ಯಾಂಕು,-

(i) ವಿವರಪಟ್ಟಿಕೆಯನ್ನು ಸಂಬಂಧಪಡುವಂಥ ದಿನಾಂಕದ ತರುವಾಯ ಇಪ್ಪತ್ತು ದಿವಸಗಳನ್ನು ಮೀರದಂತೆ ಅಂತಿಮ ವಿವರಪಟ್ಟಿಕೆಯನ್ನು ಕಳುಹಿಸಬೇಕಾದ ಹಿಂದೆ ಹೇಳಿದ ಅವಧಿಯೊಳಗೆ ಆ ಪಾಕ್ಷಿಕಕ್ಕಾಗಿನ ತಾತ್ಕಾಲಿಕ ವಿವರ ಪಟ್ಟಿಕೆಯನ್ನು ಒದಗಿಸಲು, ಅಥವಾ

(ii) ಪಾಕ್ಷಿಕ ವಿವರಪಟ್ಟಿಕೆಗೆ ಬದಲು ಆ ತಿಂಗಳ ವ್ಯವಹಾರವು ಮುಕ್ತಾಯವಾದ ಮೇಲೆ ಅಂಥ ಬ್ಯಾಂಕಿಗೆ ಸಂಬಂಧಿಸಿದಂತೆ ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಕೊಟ್ಟು ಅದು ಸಂಬಂಧಪಡುವಂಥ ತಿಂಗಳು ಮುಕ್ತಾಯವಾದ ತರುವಾಯ ಇಪ್ಪತ್ತು ದಿವಸಗಳನ್ನು ಮೀರದಂತೆ ಕಳುಹಿಸಬೇಕಾದ ಮಾಸಿಕ ವಿವರಣಪಟ್ಟಿಕೆಯನ್ನು, ಒದಗಿಸಲು

- ಅಂಥ ಬ್ಯಾಂಕಿಗೆ ಅವಕಾಶಮಾಡಿಕೊಡಬಹುದು.

(2ಎ) (2)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ ತಿಂಗಳ ಕೊನೆಯ ಶುಕ್ರವಾರವು ಪರ್ಯಾಯ ಶುಕ್ರವಾರವಾಗಿಲ್ಲದೇ ಇರುವಲ್ಲಿ, ಪ್ರತಿಯೊಂದು ಅನುಸೂಚಿತ ಬ್ಯಾಂಕು, ಅಂಥ ಕೊನೆಯ ಶುಕ್ರವಾರದಂದಿನ ವ್ಯವಹಾರವು ಮುಕ್ತಾಯವಾದ ಮೇಲೆ ಅಥವಾ ಅಂಥ ಕೊನೆಯ ಶುಕ್ರವಾರವು ವರ್ಗಾವಣೆಯ ಲಿಖಿತಗಳ ಅಧಿನಿಯಮ, 1881 (1881ರ 26)ರ ಮೇರೆಗೆ ಸಾರ್ವಜನಿಕ ರಜಾ ದಿನವಾಗಿರುವಲ್ಲಿ ಹಿಂದಿನ ಕೆಲಸದ ದಿವಸದಂದಿನ ವ್ಯವಹಾರವು ಮುಕ್ತಾಯವಾದ ಮೇಲೆ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಕೊಟ್ಟು ವಿಶೇಷ ವಿವರಪಟ್ಟಿಕೆಯನ್ನು ಬ್ಯಾಂಕಿಗೆ ಕಳುಹಿಸತಕ್ಕುದು.

(3) ಯಾವುದೇ ಪಾಕ್ಷಿಕದಲ್ಲಿ ಅನುಸೂಚಿತ ಬ್ಯಾಂಕು, ಬ್ಯಾಂಕಿನಲ್ಲಿ ಧಾರಣಮಾಡಿರುವ ಸರಾಸರಿ ದೈನಂದಿನ ಶಿಲ್ಕು (1)ನೇ ಉಪಪ್ರಕರಣದ ಅಥವಾ (1ಎ) ಉಪಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಿದ ಕನಿಷ್ಠಕ್ಕಿಂತ ಕಡಿಮೆ ಇದ್ದರೆ, ಅಂಥ ಅನುಸೂಚಿತ ಬ್ಯಾಂಕು ಆ ಪಾಕ್ಷಿಕಕ್ಕೆ ಸಂಬಂಧಿಸಿದಂತೆ, ಬ್ಯಾಂಕಿಗೆ ಯಾವ ಮೊಬಲಗಿಗಿಂತ ಬ್ಯಾಂಕಿನಲ್ಲಿನ ಅಂಥ ಶಿಲ್ಕು ನಿಯಮಿಸಿದ ಕನಿಷ್ಠಕ್ಕಿಂತ ಕಡಿಮೆಯಾಗುವುದೋ ಆ ಮೊಬಲಗಿನ ಮೇಲೆ ಬ್ಯಾಂಕಿನ ದರಕ್ಕಿಂತ ಶೇಕಡ ಮೂರರಷ್ಟು ಹೆಚ್ಚಿನ ದರದಲ್ಲಿ ದಂಡರೂಪದ ಬಡ್ಡಿಯನ್ನು ಆ ಪಾಕ್ಷಿಕಕ್ಕೆ ಸಂಬಂಧಿಸಿದಂತೆ ಬ್ಯಾಂಕಿಗೆ ಸಂದಾಯಮಾಡಲು ಹೊಣೆಯಾಗಿರತಕ್ಕುದು ಮತ್ತು ನಿಕಟೋತ್ತರದ ಪಾಕ್ಷಿಕದಲ್ಲಿ, ಅಂಥ ಸರಾಸರಿ ದೈನಂದಿನ ಶಿಲ್ಕು ನಿಯಮಿಸಿದ ಕನಿಷ್ಠಕ್ಕಿಂತ ಇನ್ನೂ ಕಡಿಮೆ ಇದ್ದರೆ, ದಂಡರೂಪದ ಬಡ್ಡಿಯ ದರಗಳನ್ನು ಪಾಕ್ಷಿಕಕ್ಕೆ ಮತ್ತು ಯಾವ ಮೊಬಲಗು ಬ್ಯಾಂಕಿನಲ್ಲಿನ ಅಂಥ ಶಿಲ್ಕು ನಿಯಮಿಸಿದ ಕನಿಷ್ಠಕ್ಕಿಂತ ಕಡಿಮೆ ಬೀಳುವುದೋ ಆ ಮೊಬಲಗಿನ ಮೇಲೆ ಆ ತಪ್ಪಿತವು ಮುಂದುವರೆಯುತ್ತಿರುವಂಥ ಕಾಲದಲ್ಲಿನ ಪ್ರತಿಯೊಂದು ತರುವಾಯದ ಪಾಕ್ಷಿಕಕ್ಕೆ ಸಂಬಂಧಿಸಿದಂತೆ ಬ್ಯಾಂಕು ದರಕ್ಕಿಂತ ಶೇಕಡಾ ಐದರಷ್ಟಿನ ಹೆಚ್ಚಿನ ದರಕ್ಕೆ ಹೆಚ್ಚಿಸತಕ್ಕುದು. ಬ್ಯಾಂಕುದರಕ್ಕಿಂತ ಶೇಕಡಾ ಐದರ ಹೆಚ್ಚಿನ ದರಕ್ಕೆ ಹೆಚ್ಚಿಸತಕ್ಕುದು, ಮತ್ತು

(3ಎ) (3)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ, ಅನುಸೂಚಿತ ಬ್ಯಾಂಕು, ಬ್ಯಾಂಕಿನ ದರಕ್ಕಿಂತ ಶೇಕಡ ಐದರಷ್ಟು ಹೆಚ್ಚಿಸಿದ ದರದಲ್ಲಿ ದಂಡ ರೂಪದ ಬಡ್ಡಿಯನ್ನು ಅನುಸೂಚಿತ ಬ್ಯಾಂಕು ಸಂದಾಯಮಾಡಬೇಕಾಗಿರುವಾಗ, ಆ ತರುವಾಯ ನಿಕಟೋತ್ತರದ ಪಾಕ್ಷಿಕದಲ್ಲಿ ಬ್ಯಾಂಕಿನಲ್ಲಿ ಧಾರಣಮಾಡಿರುವ ಸರಾಸರಿ ದೈನಂದಿನ ಶಿಲ್ಕು ನಿಯಮಿಸಿದ ಕನಿಷ್ಠಕ್ಕಿಂತ ಇನ್ನೂ ಕಡಿಮೆ ಇದ್ದರೆ-

(ಎ) ಆ ತಪ್ಪಿತಕ್ಕೆ ತಿಳಿದೂ ತಿಳಿದೂ ಮತ್ತು ಬುದ್ಧಿಪೂರ್ವಕವಾಗಿ ಪಕ್ಷಕಾರನಾಗಿರುವ ಅನುಸೂಚಿತ ಬ್ಯಾಂಕಿನ ಪ್ರತಿಯೊಬ್ಬ ನಿರ್ದೇಶಕ, ವ್ಯವಸ್ಥಾಪಕ ಅಥವಾ ಕಾರ್ಯದರ್ಶಿಯು, ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಆ ತಪ್ಪಿತವು

ಮುಂದುವರೆಯುತ್ತಿರುವಂಥ ಪ್ರತಿ ತರುವಾಯದ ವಾರಕ್ಕಾಗಿ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕುದು, ಮತ್ತು

(ಬಿ) ಸದರಿ ಪಾಕ್ಷಿಕದ ತರುವಾಯ ಅನುಸೂಚಿತ ಬ್ಯಾಂಕು, ಯಾವುದೇ ಹೊಸ ಠೇವಣಿಯನ್ನು ಸ್ವೀಕರಿಸುವುದನ್ನು ಬ್ಯಾಂಕು ನಿಷೇಧಿಸಬಹುದು;

ಮತ್ತು, (ಬಿ) ಖಂಡದಲ್ಲಿ ಉಲ್ಲೇಖಿಸಿದ ನಿಷೇಧವನ್ನು ಪಾಲಿಸುವಲ್ಲಿ ಅನುಸೂಚಿತ ಬ್ಯಾಂಕು ತಪ್ಪಿತವನ್ನು ಮಾಡಿದರೆ ಅಂಥ ತಪ್ಪಿತಕ್ಕೆ ತಿಳಿದೂ ತಿಳಿದೂ ಮತ್ತು ಬುದ್ಧಿಪೂರ್ವಕವಾಗಿ ಪಕ್ಷಕಾರನಾಗಿರುವ ಅಥವಾ ಉಪೇಕ್ಷೆಯ ಮೂಲಕ ಅಥವಾ ಅನ್ಯಥಾ ಅಂಥ ತಪ್ಪಿತಕ್ಕೆ ಕಾರಣವಾಗಿರುವ ಅನುಸೂಚಿತ ಬ್ಯಾಂಕಿನ ಪ್ರತಿಯೊಬ್ಬ ನಿರ್ದೇಶಕ ಮತ್ತು ಅಧಿಕಾರಿಯು, ಅಂಥ ಪ್ರತಿಯೊಂದು ತಪ್ಪಿತಕ್ಕೆ ಸಂಬಂಧಿಸಿದಂತೆ, ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅಂಥ ನಿಷೇಧವನ್ನು ಉಲ್ಲಂಘಿಸಿ ಠೇವಣಿಯನ್ನು ಸ್ವೀಕರಿಸಿದಂಥ ಮೊದಲನೇ ದಿವಸದ ತರುವಾಯ ಅನುಸೂಚಿತ ಬ್ಯಾಂಕು ಅದನ್ನು ಉಳಿಸಿಕೊಂಡ ಪ್ರತಿದಿವಸಕ್ಕಾಗಿ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**ವಿವರಣೆ:-** ಈ ಉಪಪ್ರಕರಣದಲ್ಲಿ " ಅಧಿಕಾರಿ" ಎಂಬುದು, ವ್ಯವಸ್ಥಾಪಕ, ಕಾರ್ಯದರ್ಶಿ, ಶಾಖಾ ವ್ಯವಸ್ಥಾಪಕ ಮತ್ತು ಶಾಖಾ ಕಾರ್ಯದರ್ಶಿ - ಇವರನ್ನು ಒಳಗೊಳ್ಳುತ್ತದೆ.

(4) (2)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪುವ ಯಾವುದೇ ಅನುಸೂಚಿತ ಬ್ಯಾಂಕು ಆ ತಪ್ಪುವಿಕೆಯು ಮುಂದುವರೆಯುವಂಥ ಕಾಲದಲ್ಲಿ ಪ್ರತಿ ದಿವಸಕ್ಕಾಗಿ ಒಂದು ನೂರು ರೂಪಾಯಿಗಳ ದಂಡವನ್ನು ಬ್ಯಾಂಕಿಗೆ ಸಂದಾಯ ಮಾಡಲು ಹೊಣೆಯಾಗಿರತಕ್ಕುದು.

(5) (ಎ) (3) ಮತ್ತು (4)ನೇ ಉಪಪ್ರಕರಣಗಳ ಮೂಲಕ ವಿಧಿಸಿದ ದಂಡಗಳನ್ನು ಅನುಸೂಚಿತ ಬ್ಯಾಂಕಿಗೆ ಸಂದಾಯವನ್ನು ತಗಾದೆ ಮಾಡಿ ಬ್ಯಾಂಕು ಹೊರಡಿಸಿದ ನೋಟೀಸನ್ನು ಜಾರಿ ಮಾಡಿದಂಥ ದಿನಾಂಕದಿಂದ ಹದಿನಾಲ್ಕು ದಿವಸಗಳ ಅವಧಿಯೊಳಗೆ ಸಂದಾಯ ಮಾಡತಕ್ಕುದು ಮತ್ತು ಅಂಥ ಅವಧಿಯೊಳಗೆ ಅದನ್ನು ಸಂದಾಯ ಮಾಡಲು ಅನುಸೂಚಿತ ಬ್ಯಾಂಕು ತಪ್ಪಿದ ಸಂದರ್ಭದಲ್ಲಿ, ಆ ತಪ್ಪಿತವನ್ನು ಮಾಡುವ ಬ್ಯಾಂಕಿನ ಕಛೇರಿಯು ಇರುವ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪ್ರಧಾನ ಸಿವಿಲ್ ನ್ಯಾಯಾಲಯದ ನಿರ್ದೇಶನದ ಮೂಲಕ ಅದನ್ನು ಸಂಗ್ರಹಿಸಬಹುದು; ಅಂಥ ನಿರ್ದೇಶನವನ್ನು ಬ್ಯಾಂಕು ನ್ಯಾಯಾಲಯಕ್ಕೆ ಈ ಬಗ್ಗೆ ಮಾಡಿಕೊಂಡ ಅರ್ಜಿಯ ಮೇಲೆ ಮಾತ್ರ ಮಾಡತಕ್ಕುದು;

(ಬಿ) (ಎ) ಖಂಡದ ಮೇರೆಗೆ ನ್ಯಾಯಾಲಯವು ನಿರ್ದೇಶನವನ್ನು ನೀಡಿದಾಗ, ಅದು, ಅನುಸೂಚಿತ ಬ್ಯಾಂಕು ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ದಿಷ್ಟಪಡಿಸಿ ಪ್ರಮಾಣ ಪತ್ರವನ್ನು ಕೊಡತಕ್ಕುದು ಮತ್ತು ಪ್ರತಿಯೊಂದು ಅಂಥ ಪ್ರಮಾಣ ಪತ್ರವನ್ನು, ಅದು, ದಾವೆಯಲ್ಲಿ ಆ ನ್ಯಾಯಾಲಯವು ಮಾಡಿದ ಡಿಕ್ರಿಯಾಗಿದ್ದಿದ್ದರೆ ಹೇಗೋ ಹಾಗೆ ಮತ್ತು ಅದೇ ರೀತಿಯಲ್ಲಿ ಜಾರಿಗೊಳಿಸತಕ್ಕುದು;

(ಸಿ) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆ ತಪ್ಪಿತವನ್ನು ಮಾಡಿದ ಬ್ಯಾಂಕಿಗೆ (1), (1ಎ) ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಲು ಅದು ತಪ್ಪಿದ್ದಕ್ಕಾಗಿ ಸಾಕಷ್ಟು ಕಾರಣಗಳಿದ್ದವೆಂದು ಬ್ಯಾಂಕಿಗೆ ಮನದಟ್ಟಾದರೆ, ಅದು ಸಂದರ್ಭಾನುಸಾರ ದಂಡರೂಪದ ಬಡ್ಡಿ ಅಥವಾ ದಂಡದ ಸಂದಾಯವನ್ನು ತಗಾದೆ ಮಾಡದೆ ಇರಬಹುದು.

(6) ಬ್ಯಾಂಕು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ ಹೊರತು, ಭಾರತ ರಾಜ ಪತ್ರದಲ್ಲಿ ಅಧಿಸೂಚನೆಯ ಮೂಲಕ,-

(ಎ) ಭಾರತದಲ್ಲಿ ಬ್ಯಾಂಕಿನ ವ್ಯವಹಾರವನ್ನು ನಡೆಸುತ್ತಿರುವಂಥ, ಮತ್ತು-

(i) ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಒಟ್ಟು ಮೌಲ್ಯದ ಸಂದಾಯ ಮಾಡಿದ ಬಂಡವಾಳ ಮತ್ತು ಮೀಸಲುಗಳನ್ನು ಹೊಂದಿರುವಂಥ, ಮತ್ತು

(ii) ತನ್ನ ವ್ಯವಹಾರಗಳನ್ನು ಅದರ ಠೇವಣಿದಾರರ ಹಿತಾಸಕ್ತಿಗೆ ಬಾಧಕವಾಗುವಂಥ ರೀತಿಯಲ್ಲಿ ನಡೆಸುತ್ತಿಲ್ಲವೆಂದು ಬ್ಯಾಂಕಿಗೆ ಮನದಟ್ಟು ಮಾಡಿಕೊಡುವಂಥ, ಮತ್ತು

(iii) ರಾಜ್ಯ ಸಹಕಾರಿ ಬ್ಯಾಂಕು ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ 3ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಕಂಪನಿ ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಿದ ಸಂಸ್ಥೆ ಅಥವಾ ಭಾರತದ ಹೊರಗಡೆ ಇರುವ ಯಾವುದೇ ಸ್ಥಳದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಗಮನಗೊಂಡ ನಿಗಮ ಅಥವಾ ಕಂಪನಿಯಾಗಿರುವಂಥ

- ಈಗಾಗಲೇ ಎರಡನೇ ಅನುಸೂಚಿಯಲ್ಲಿ ಸೇರಿಸಿಲ್ಲದ ಯಾವುದೇ ಬ್ಯಾಂಕನ್ನು ಎರಡನೇ ಅನುಸೂಚಿಯಲ್ಲಿ ಸೇರಿಸಲು ನಿರ್ದೇಶಿಸತಕ್ಕುದು;

(ಬಿ) (i) ಯಾವುದರ ಸಂದಾಯ ಮಾಡಿದ ಬಂಡವಾಳ ಮತ್ತು ಮೀಸಲುಗಳ ಒಟ್ಟು ಮೌಲ್ಯವು ಯಾವುದೇ ಕಾಲದಲ್ಲಿ ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಾಗುವುದೋ, ಅಥವಾ

(ii) ಯಾವುದು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ 10)ರ 35ನೇ ಪ್ರಕರಣದ ಮೇರೆಗೆ ಪರಿಶೀಲನೆಯನ್ನು ಮಾಡಿದ ತರುವಾಯ, ಬ್ಯಾಂಕಿನ ಅಭಿಪ್ರಾಯದಲ್ಲಿ ಅದರ ಠೇವಣಿದಾರರ ಹಿತಾಸಕ್ತಿಗೆ ಹಾನಿಕರವಾಗುವಂತೆ ಅದರ ವ್ಯವಹಾರಗಳನ್ನು ನಡೆಸುತ್ತಿರುವುದೋ, ಅಥವಾ

(iii) ಯಾವುದು ಸಮಾಪನಗೊಳ್ಳಲಿದೆಯೋ ಅಥವಾ ಅನ್ಯಥಾ ಬ್ಯಾಂಕು ವ್ಯವಹಾರವನ್ನು ನಡೆಸುವುದನ್ನು ನಿಲ್ಲಿಸುವುದೋ

- ಆ ಯಾವುದೇ ಅನುಸೂಚಿತ ಬ್ಯಾಂಕನ್ನು ಆ ಅನುಸೂಚಿಯಿಂದ ಹೊರತುಪಡಿಸಲು ನಿರ್ದೇಶಿಸತಕ್ಕುದು:

ಪರಂತು, ಬ್ಯಾಂಕು, ಸಂಬಂಧಪಟ್ಟ ಅನುಸೂಚಿತ ಬ್ಯಾಂಕಿನ ಅರ್ಜಿಯ ಮೇಲೆ ಮತ್ತು ತಾನು ವಿಧಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಅನುಸೂಚಿತ ಬ್ಯಾಂಕಿಗೆ ಅದರ ಸಂದಾಯ ಮಾಡಿದ ಬಂಡವಾಳ ಮತ್ತು ಮೀಸಲುಗಳ ಒಟ್ಟು ಮೌಲ್ಯವನ್ನು, ಐದು ಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಂತೆ ಹೆಚ್ಚಿಸಲು ಅಥವಾ ಸಂದರ್ಭಾನುಸಾರ ಅದರ ವ್ಯವಹಾರಗಳನ್ನು ನಡೆಸುವುದರಲ್ಲಿನ ದೋಷಗಳನ್ನು ನಿವಾರಿಸಲು ಅವಕಾಶವನ್ನು ಅನುಸೂಚಿತ ಬ್ಯಾಂಕಿಗೆ ಮಾಡಿಕೊಡಲು, ಬ್ಯಾಂಕು, ಯುಕ್ತವೆಂದು ಪರ್ಯಾಲೋಚಿಸುವಂಥ ಅವಧಿಯವರೆಗೆ (ಬಿ) ಖಂಡದ (i)ನೇ ಉಪಖಂಡ ಅಥವಾ (ii)ನೇ ಉಪಖಂಡದ ಮೇರೆಗೆ ನಿರ್ದೇಶನವನ್ನು ಮಾಡುವುದನ್ನು ಮುಂದೂಡಬಹುದು;

(ಸಿ) ಯಾವುದೇ ಅನುಸೂಚಿತ ಬ್ಯಾಂಕು ಅದರ ಹೆಸರನ್ನು ಚಲಾಯಿಸಿದಾಗಲೆಲ್ಲ ಆ ಅನುಸೂಚಿಯಲ್ಲಿನ ವಿವರಣೆಯನ್ನು ವ್ಯತ್ಯಾಸಗೊಳಿಸತಕ್ಕುದು.

**ವಿವರಣೆ:-** ಈ ಉಪಪ್ರಕರಣದಲ್ಲಿ "ಮೌಲ್ಯ" ಎಂದರೆ, ಸಂಬಂಧಪಟ್ಟ ಬ್ಯಾಂಕಿನ ಪುಸ್ತಕಗಳಲ್ಲಿ ತೋರಿಸಬಹುದಾದಂಥ ವಾಸ್ತವಿಕ ಅಥವಾ ವಿನಿಮಯ ಸಾಧ್ಯ ಮೌಲ್ಯ, ಆದರೆ ನಾಮಮಾತ್ರ ಮೌಲ್ಯವಲ್ಲ ಮತ್ತು ಬ್ಯಾಂಕಿನ ಸಂದಾಯ ಮಾಡಿದ ಬಂಡವಾಳ ಮತ್ತು ಮೀಸಲುಗಳ ಒಟ್ಟು ಮೌಲ್ಯವನ್ನು ಗಣನೆ ಮಾಡುವಲ್ಲಿ ಯಾವುದೇ ವಿವಾದವು ಉದ್ಭವಿಸಿದರೆ, ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಅದರ ಬಗ್ಗೆ ಬ್ಯಾಂಕು ಮಾಡಿದ ನಿರ್ಧರಣೆಯು ಅಂತಿಮವಾಗಿರತಕ್ಕುದು.

(6ಎ) ಒಂದು ರಾಜ್ಯ ಸಹಕಾರಿ ಬ್ಯಾಂಕು ಅಥವಾ ಒಂದು ಪ್ರಾದೇಶಿಕ ಬ್ಯಾಂಕನ್ನು ಎರಡನೇ ಅನುಸೂಚಿಯಲ್ಲಿ ಸೇರಿಸಬೇಕೋ ಅಥವಾ ಅದರಿಂದ ಹೊರತುಪಡಿಸಬೇಕೋ ಹೇಗೆ ಎಂಬುದನ್ನು ಪರ್ಯಾಲೋಚಿಸುವಲ್ಲಿ, ಬ್ಯಾಂಕಿಗೆ ಸಂದರ್ಭಾನುಸಾರ ರಾಜ್ಯ ಸಹಕಾರಿ ಬ್ಯಾಂಕು ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಸಂದಾಯಮಾಡಿದ ಬಂಡವಾಳ ಮತ್ತು ಮೀಸಲುಗಳ ಬಗೆಗಿನ ಅಗತ್ಯತೆಗಳನ್ನು ಪೂರೈಸುತ್ತವೆಯೋ ಅಥವಾ ಇಲ್ಲವೋ ಹೇಗೆ ಅಥವಾ ಅದರ ವ್ಯವಹಾರಗಳನ್ನು ಠೇವಣಿದಾರರ ಹಿತಾಸಕ್ತಿಗಳಿಗೆ ಹಾನಿಕರವಾಗುವ ರೀತಿಯಲ್ಲಿ ನಡೆಸಲಾಗುತ್ತಿಲ್ಲವೋ ಹೇಗೆ ಎಂಬ ಪ್ರಶ್ನೆಯ ಬಗ್ಗೆ ರಾಷ್ಟ್ರೀಯ ಬ್ಯಾಂಕು ಕೊಟ್ಟ ಪ್ರಮಾಣಪತ್ರದ ಮೇಲೆ ಕಾರ್ಯ ನಿರ್ವಹಿಸುವುದು ಸಕ್ಷಮವಾಗಿರತಕ್ಕುದು.

(7) ಬ್ಯಾಂಕು, ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಯಾವುದೇ ಅನುಸೂಚಿತ ಬ್ಯಾಂಕಿಗೆ ಅದರ ಎಲ್ಲಾ ಅಥವಾ ಯಾವುದೇ ಕಛೇರಿಗೆ ಸಂಬಂಧಿಸಿದಂತೆ ಅಥವಾ ಅದರ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಇಡೀ ಅಥವಾ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಅದು ಯೋಗ್ಯವೆಂದು ಯೋಚಿಸುವಂತೆ ಈ ಪ್ರಕರಣದ ಉಪಬಂಧಗಳಿಂದ, ಅಂಥ ವಿನಾಯತಿಗಳನ್ನು ಕೊಡಬಹುದು.

**43. ಬ್ಯಾಂಕಿನಿಂದ ಕ್ರೋಡೀಕೃತ ವಿವರಪತ್ರದ ಪ್ರಕಟಣೆ.-** ಬ್ಯಾಂಕು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಸ್ವೀಕರಿಸಿದ ವಿವರಪಟ್ಟಿಕೆಗಳು ಮತ್ತು ಮಾಹಿತಿಯ ಮೇಲೆ ಆಧಾರಿತವಾದ, ಒಟ್ಟಿಗೆ ಎಲ್ಲಾ ಅನುಸೂಚಿತ ಬ್ಯಾಂಕುಗಳ ಹೊಣೆಗಾರಿಕೆಗಳು ಮತ್ತು ಆಸ್ತಿಗಳನ್ನು ತೋರಿಸುವ ಕ್ರೋಡೀಕೃತ ವಿವರಪತ್ರವನ್ನು ಪ್ರತಿ ಪಾಕ್ಷಿಕವಾಗಿ ಪ್ರಕಟಿಸುವಂತೆ ಮಾಡತಕ್ಕುದು.

**43ಎ. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ.-** (1) 42ನೇ ಪ್ರಕರಣ ಅಥವಾ 43ನೇ ಪ್ರಕರಣದ ಅನುಸರಣೆಯಲ್ಲಿ ಅಥವಾ IIIಎ ಅಧ್ಯಾಯದ ಉಪಬಂಧಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯದ ಬಗ್ಗೆ ಬ್ಯಾಂಕು ಅಥವಾ ಅದರ ಯಾರೇ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ ಅಥವಾ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

(2) 42ನೇ ಪ್ರಕರಣದ ಅಥವಾ 43ನೇ ಪ್ರಕರಣದ ಅನುಸರಣೆಯಲ್ಲಿ ಅಥವಾ IIIಎ ಅಧ್ಯಾಯದ ಉಪಬಂಧಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಯ ಬಗ್ಗೆ ಬ್ಯಾಂಕು ಅಥವಾ ಅದರ ಯಾವನೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

**44.** [***ಸಹಕಾರಿ ಬ್ಯಾಂಕುಗಳಿಂದ ವಿವರಪಟ್ಟಿಕೆಗಳನ್ನು ಅಗತ್ಯಪಡಿಸುವ ಅಧಿಕಾರ***] ಬ್ಯಾಂಕಿಂಗ್ ಕಾನೂನುಗಳ (ಸಹಕಾರಿ ಸಂಘಗಳಿಗೆ ಅನ್ವಯಿಸುವ) ಅಧಿನಿಯಮ, 1965 (1965ರ 23)ರ 7ನೇ ಪ್ರಕರಣದ ಮೂಲಕ 1.3.66 ರಿಂದ ಜಾರಿಗೆ ಬರುವಂತೆ ನಿರಸನಗೊಂಡಿದೆ.

**45. ಏಜೆಂಟರ ನೇಮಕಾತಿ.-** (1) ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು, ಅನ್ಯಥಾ ನಿರ್ದೇಶಿಸಿದ ಹೊರತು, ಬ್ಯಾಂಕು, ಸಾರ್ವಜನಿಕ ಹಿತಾಸಕ್ತಿ, ಬ್ಯಾಂಕು ವ್ಯವಹಾರದ ಅನುಕೂಲಕ್ಕೆ, ಬ್ಯಾಂಕು ವ್ಯವಹಾರದ ಅಭಿವೃದ್ಧಿ ಮತ್ತು ಈ ಬಗ್ಗೆ ಅದರ ಅಭಿಪ್ರಾಯದಲ್ಲಿ ಸುಸಂಗತವಾದಂಥ ಇತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬ್ಯಾಂಕು ನಿರ್ದಿಷ್ಟಪಡಿಸ ಬಹುದಾದಂಥ ಉದ್ದೇಶಗಳಿಗಾಗಿ ಭಾರತದಲ್ಲಿನ ಎಲ್ಲಾ ಸ್ಥಳಗಳಲ್ಲಿ ಅಥವಾ ಯಾವುದೇ ಸ್ಥಳದಲ್ಲಿ ಅದರ ಏಜೆಂಟನೆಂದು ರಾಷ್ಟ್ರೀಯ ಬ್ಯಾಂಕು, ಸ್ಟೇಟ್ ಬ್ಯಾಂಕು, ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ ಮೇರೆಗೆ ರಚಿಸಲಾದ ಸಂವಾದಿ ಹೊಸ ಬ್ಯಾಂಕು ಅಥವಾ ಭಾರತ ಸ್ಟೇಟ್ ಬ್ಯಾಂಕು (ಸಹಾಯಕ ಬ್ಯಾಂಕುಗಳ) ಅಧಿನಿಯಮ, 1959ರಲ್ಲಿ ಪರಿಭಾಷಿಸಿದಂತೆ ಯಾವುದೇ ಸಹಾಯಕ ಬ್ಯಾಂಕನ್ನು ನೇಮಕಮಾಡಬಹುದು.

(2) ಬ್ಯಾಂಕಿಗೆ ಮಾಡಬೇಕೆಂದು ಅಗತ್ಯಪಡಿಸಿದ ಯಾವುದೇ ಸಂದಾಯ ಅಥವಾ ಯಾವುದೇ ಬಿಲ್ಲು, ಹುಂಡಿಗಳು ಅಥವಾ ಯಾವುದೇ ಕಾನೂನು, ನಿಯಮ, ವಿನಿಯಮಗಳು ಅಥವಾ ಕಾನೂನಿನ ಬಲವನ್ನು ಹೊಂದಿರುವ ಇತರ ಅನುದೇಶಗಳ ಮೇರೆಗೆ ವಶಾವಣೆ ಮಾಡಬೇಕೆಂದು ಅಗತ್ಯಪಡಿಸಿದ ಇತರ ಭದ್ರತಾ ಪತ್ರಗಳನ್ನು ಬ್ಯಾಂಕಿನ ಪರವಾಗಿ ಸ್ವೀಕರಿಸಲು (1)ನೇ ಉಪಪ್ರಕರಣದ ಮೇರೆಗೆ ಅದರ ಏಜೆಂಟನೆಂದು ಯಾವುದೇ ಬ್ಯಾಂಕನ್ನು ಬ್ಯಾಂಕು ನೇಮಕ ಮಾಡಿದಾಗ ಅದನ್ನು, ಬ್ಯಾಂಕಿನ ಏಜೆಂಟನೆಂದು ಹಾಗೆ ನೇಮಕಗೊಂಡ ಬ್ಯಾಂಕಿಗೆ ಸಂದಾಯಮಾಡಬಹುದು ಅಥವಾ ವಶಾವಣೆ ಮಾಡಬಹುದು.

## ಅಧ್ಯಾಯ-III ಎ

## ಸಾಲದ ಬಗ್ಗೆ ಮಾಹಿತಿಯ ಸಂಗ್ರಹಣೆ ಮತ್ತು ಅದನ್ನು ಒದಗಿಸುವುದು

**45ಎ. ಪರಿಭಾಷೆಗಳು.-** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಬ್ಯಾಂಕಿಂಗ್ ಕಂಪನಿ" ಎಂದರೆ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949(1949ರ 10)ರ 5ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಒಂದು ಬ್ಯಾಂಕಿಂಗ್ ಕಂಪನಿ ಮತ್ತು ಅದು ಭಾರತ ಸ್ಟೇಟ್ ಬ್ಯಾಂಕು, ಭಾರತ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕುಗಳ) ಅಧಿನಿಯಮ, 1959 (1959ರ 38)ರಲ್ಲಿ ಪರಿಭಾಷಿಸಿದಂತೆ ಯಾವುದೇ ಸಹಾಯಕ ಬ್ಯಾಂಕು, ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5)ರ 3ನೇ ಪ್ರಕರಣದ ಮೂಲಕ ರಚಿಸಲಾದ ಯಾವುದೇ ಸಂವಾದಿ ಹೊಸ ಬ್ಯಾಂಕು ಮತ್ತು ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಿದ ಯಾವುದೇ ಇತರ ಹಣಕಾಸು ಸಂಸ್ಥೆಯನ್ನು ಒಳಗೊಳುತ್ತದೆ;

(ಬಿ) "ಸಾಲ ತೆಗೆದುಕೊಳ್ಳುವವನು" ಎಂದರೆ ಯಾವುದೇ ಬ್ಯಾಂಕಿಂಗ್ ಕಂಪನಿಯು ಯಾರಿಗೆ ಯಾವುದೇ ಸಾಲದ ಪರಿಮಿತಿಯನ್ನು ಮಂಜೂರು ಮಾಡಿದೆಯೋ, ಅದನ್ನು ಉಪಯೋಗಿಸಿಕೊಂಡಿರಲಿ ಅಥವಾ ಇಲ್ಲದೆ ಇರಲಿ, ಆ ಯಾವನೇ ವ್ಯಕ್ತಿ; ಮತ್ತು ಅದು-

(i) ಒಂದು ಕಂಪನಿ ಅಥವಾ ನಿಗಮದ ಸಂದರ್ಭದಲ್ಲಿ, ಅದಕ್ಕೆ ಸಹಾಯಕವಾದವುಗಳು;

(ii) ಹಿಂದೂ ಅವಿಭಕ್ತ ಕುಟುಂಬದ ಸಂದರ್ಭದಲ್ಲಿ, ಅದರ ಯಾವನೇ ಸದಸ್ಯ ಅಥವಾ ಯಾವುದರಲ್ಲಿ ಅಂಥ ಸದಸ್ಯನು ಪಾಲುದಾರನಾಗಿರುವನೋ ಆ ಯಾವುದೇ ಫರ್ಮು;

(iii) ಫರ್ಮಿನ ಸಂದರ್ಭದಲ್ಲಿ, ಅದರ ಯಾವನೇ ಪಾಲುದಾರ ಅಥವಾ ಯಾವುದರಲ್ಲಿ ಅಂಥ ಪಾಲುದಾರನು ಪಾಲುದಾರನಾಗಿರುವನೋ ಆ ಯಾವುದೇ ಇತರ ಫರ್ಮು; ಮತ್ತು

(iv) ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ, ಯಾವುದರಲ್ಲಿ ಅಂಥ ವ್ಯಕ್ತಿಯ ಪಾಲುದಾರನಾಗಿರುವನೋ ಆ ಯಾವುದೇ ಫರ್ಮು

-ಇವುಗಳನ್ನು ಒಳಗೊಳ್ಳುತ್ತದೆ.

(ಸಿ) " ಸಾಲದ ಬಗ್ಗೆ ಮಾಹಿತಿ" ಎಂದರೆ-

(i) ಬ್ಯಾಂಕಿಂಗ್ ಕಂಪನಿಯು ಯಾವನೇ ಸಾಲ ಪಡೆಯುವವನು ಅಥವಾ ಸಾಲ ಪಡೆಯುವವರ ವರ್ಗಕ್ಕೆ ಕೊಟ್ಟ ಮೊಬಲಗುಗಳು ಮತ್ತು ಸಾಲಗಳು ಅಥವಾ ಮುಂಗಡಗಳು ಅಥವಾ ಇತರ ಸೌಲಭ್ಯಗಳ ಸ್ವರೂಪ;

(ii) ಅವನಿಗೆ ಅಥವಾ ಅಂಥ ವರ್ಗಕ್ಕೆ ಕೊಟ್ಟ ಸಾಲದ ಸೌಲಭ್ಯಗಳಿಗಾಗಿ, ಯಾವನೇ ಸಾಲಪಡೆಯುವವನು ಅಥವಾ ಸಾಲಪಡೆಯುವವರ ವರ್ಗದಿಂದ ತೆಗೆದುಕೊಂಡ ಭದ್ರತೆಯ ಸ್ವರೂಪ;

(iii) ಬ್ಯಾಂಕಿಂಗ್ ಕಂಪನಿಯು ಅದರ ಯಾವನೇ ಗ್ರಾಹಕ ಅಥವಾ ಅದರ ಗ್ರಾಹಕರ ಯಾವುದೇ ವರ್ಗಕ್ಕಾಗಿ ಒದಗಿಸಿದ ಖಾತ್ರಿ;

(iv) ಯಾವನೇ ಸಾಲ ಪಡೆಯುವವನು ಅಥವಾ ಸಾಲ ಪಡೆಯುವವರ ವರ್ಗದ ಸಾಧನ ಮೂಲ, ಪೂರ್ವ ವೃತ್ತಾಂತ, ಹಣಕಾಸು ವ್ಯವಹಾರಗಳ ಚರಿತ್ರೆ ಮತ್ತು ವಿಶ್ವಾಸಾರ್ಹತೆ;

(v) ಸಾಲ ಅಥವಾ ಸಾಲದ ನೀತಿಯನ್ನು ಹೆಚ್ಚು ಕ್ರಮಬದ್ಧ ನಿಯಂತ್ರಣಕ್ಕಾಗಿ ಬ್ಯಾಂಕು ಸುಸಂಬದ್ಧವೆಂದು ಪರ್ಯಾಲೋಚಿಸಬಹುದಾದಂಥ ಯಾವುದೇ ಇತರ ಮಾಹಿತಿ

-ಇವುಗಳಿಗೆ ಸಂಬಂಧಪಟ್ಟ ಯಾವುದೇ ಮಾಹಿತಿ.

**45ಬಿ. ಸಾಲದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಬ್ಯಾಂಕಿನ ಅಧಿಕಾರ.**- ಬ್ಯಾಂಕು,-

(ಎ) ಬ್ಯಾಂಕಿಂಗ್ ಕಂಪನಿಗಳಿಂದ ಸಾಲದ ಬಗ್ಗೆ ಮಾಹಿತಿಯನ್ನು, ಅದು ಯೋಗ್ಯವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಸಂಗ್ರಹಿಸಬಹುದು; ಮತ್ತು

(ಬಿ) 45ಡಿ ಪ್ರಕರಣದ ಉಪಬಂಧಗಳಿಗನುಸಾರವಾಗಿ ಯಾವುದೇ ಬ್ಯಾಂಕಿಂಗ್ ಕಂಪನಿಗೆ ಅಂಥ ಮಾಹಿತಿಯನ್ನು ಒದಗಿಸಬಹುದು.

**45ಸಿ. ಸಾಲದ ಬಗ್ಗೆ ಮಾಹಿತಿಯನ್ನು ಒಳಗೊಂಡಿರುವ ವಿವರ ಪಟ್ಟಿಕೆಗಳಿಗಾಗಿ ಕೋರುವ ಅಧಿಕಾರ.**- (1)ಈ ಅಧ್ಯಾಯದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ರಿಸರ್ವ್ ಬ್ಯಾಂಕನ್ನು ಸಾಧ್ಯಗೊಳಿಸುವ ಉದ್ದೇಶಕ್ಕಾಗಿ, ಅದು ಯಾವುದೇ ಕಾಲದಲ್ಲಿ, ಕಾಲಕಾಲಕ್ಕೆ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ಸಾಲದ ಬಗ್ಗೆ ಮಾಹಿತಿಗೆ ಸಂಬಂಧಪಟ್ಟಂಥ ವಿವರಪತ್ರಗಳನ್ನು ಮತ್ತು ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದೊಳಗೆ ಅದಕ್ಕೆ ಒಪ್ಪಿಸಲು ಯಾವುದೇ ಬ್ಯಾಂಕಿಂಗ್ ಕಂಪನಿಗೆ ನಿರ್ದೇಶಿಸಬಹುದು.

(2) ಬ್ಯಾಂಕಿಂಗ್ ಕಂಪನಿಯು, ಅದರ ಗ್ರಾಹಕರೊಂದಿಗಿನ ಅದರ ವ್ಯವಹಾರಗಳ ಗೋಪ್ಯತೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಅದರ ರಚನೆಯನ್ನು ನಿಯಂತ್ರಿಸುವ ಯಾವುದೇ ಲಿಖಿತದಲ್ಲಿ ಅಥವಾ ಅದು ಬರೆದುಕೊಟ್ಟ ಯಾವುದೇ

ಒಪ್ಪಂದದಲ್ಲಿ ತದ್ವಿರುದ್ಧವಾದುದು ಏನೇ ಅಡಕವಾಗಿದ್ದಾಗ್ಯೂ, (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ನಿರ್ದೇಶನವನ್ನು ಪಾಲಿಸಲು ಬದ್ಧವಾಗಿರತಕ್ಕುದು.

**45ಡಿ. ಬ್ಯಾಂಕಿಂಗ್ ಕಂಪನಿಗಳಿಗೆ ಸಾಲದ ಬಗ್ಗೆ ಮಾಹಿತಿಯನ್ನು ಒದಗಿಸುವುದಕ್ಕಾಗಿನ ಪ್ರಕ್ರಿಯೆ.–** (1) ಬ್ಯಾಂಕಿಂಗ್ ಕಂಪನಿಯು, ಯಾವನೇ ವ್ಯಕ್ತಿಯೊಂದಿಗೆ ಅದು ಮಾಡಿಕೊಂಡ ಅಥವಾ ಮಾಡಿಕೊಳ್ಳಲು ಉದ್ದೇಶಿಸಿರುವ ಯಾವುದೇ ಹಣಕಾಸಿನ ವ್ಯವಸ್ಥೆಗೆ ಸಂಬಂಧಪಟ್ಟಂತೆ ಅರ್ಜಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಾಲದ ಬಗ್ಗೆ ಮಾಹಿತಿಯೊಂದಿಗೆ ಅರ್ಜಿದಾರನಿಗೆ ಒದಗಿಸುವಂತೆ ಕೋರಿ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಬ್ಯಾಂಕಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಬ್ಯಾಂಕು, ಆದಷ್ಟು ಬೇಗನೆ ಅರ್ಜಿದಾರನಿಗೆ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ಅದರ ಸ್ವಾಧೀನದಲ್ಲಿರಬಹುದಾದಂಥ ಸಾಲದ ಬಗ್ಗೆ ಮಾಹಿತಿಯನ್ನು ಒದಗಿಸತಕ್ಕುದು:

ಪರಂತು, ಹಾಗೆ ಒದಗಿಸಿದ ಮಾಹಿತಿಯು, ಅಂಥ ಮಾಹಿತಿಯನ್ನು ಬ್ಯಾಂಕಿಗೆ ಒಪ್ಪಿಸಿದ ಬ್ಯಾಂಕಿಂಗ್ ಕಂಪನಿಗಳ ಹೆಸರುಗಳನ್ನು ಬಹಿರಂಗಪಡಿಸತಕ್ಕುದಲ್ಲ.

(3) ಬ್ಯಾಂಕು, ಪ್ರತಿಯೊಂದು ಅರ್ಜಿಗೆ ಸಂಬಂಧಿಸಿ, ಸಾಲದ ಬಗ್ಗೆ ಮಾಹಿತಿಯನ್ನು ಒದಗಿಸಲು ಅದು ಸೂಕ್ತವೆಂದು ಭಾವಿಸಬಹುದಾದಂಥ, ಇಪ್ಪತ್ತೈದು ರೂಪಾಯಿಗಳಿಗೆ ಮೀರದ ಫೀಜನ್ನು ವಿಧಿಸಬಹುದು.

**45ಇ. ನಿಷೇಧಿಸಲಾದ ಮಾಹಿತಿಯನ್ನು ಬಹಿರಂಗಪಡಿಸುವುದು.–** (1) 45ಸಿ ಪ್ರಕರಣದ ಮೇರೆಗೆ ಬ್ಯಾಂಕಿಂಗ್ ಕಂಪನಿಯು ಒಪ್ಪಿಸಿದ ಅಥವಾ 45ಡಿ ಪ್ರಕರಣದ ಮೇರೆಗೆ ಯಾವುದೇ ಬ್ಯಾಂಕಿಂಗ್ ಕಂಪನಿಗೆ ಬ್ಯಾಂಕು ಒದಗಿಸಿದ ಯಾವುದೇ ವಿವರಪತ್ರದಲ್ಲಿ ಒಳಗೊಂಡ ಯಾವುದೇ ಸಾಲದ ಬಗೆಗಿನ ಮಾಹಿತಿಯನ್ನು ರಹಸ್ಯವೆಂದು ಪರಿಗಣಿಸತಕ್ಕುದು ಮತ್ತು ಈ ಅಧ್ಯಾಯದ ಉದ್ದೇಶಗಳಿಗಾಗಿ ಹೊರತು ಅದನ್ನು ಪ್ರಕಟಿಸತಕ್ಕುದಲ್ಲ ಅಥವಾ ಅನ್ಯಥಾ ಬಹಿರಂಗಪಡಿಸತಕ್ಕುದಲ್ಲ.

(2) ಈ ಪ್ರಕರಣದಲ್ಲಿರುವುದು ಯಾವುದೂ–

(ಎ) ಬ್ಯಾಂಕಿನ ಪೂರ್ವಾನುಮತಿಯೊಂದಿಗೆ ಯಾವುದೇ ಕಂಪನಿಯು 45ಸಿ ಪ್ರಕರಣದ ಮೇರೆಗೆ ಬ್ಯಾಂಕಿಗೆ ಒದಗಿಸಿದ ಯಾವುದೇ ಮಾಹಿತಿಯ ಬಹಿರಂಗಪಡಿಸುವಿಕೆಗೆ;

(ಬಿ) 45ಸಿ ಪ್ರಕರಣದ ಮೇರೆಗೆ ಅದು ಸಂಗ್ರಹಿಸಿದ ಯಾವುದೇ ಮಾಹಿತಿಯನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯವೆಂದು ಅದು ಪರ್ಯಾಲೋಚಿಸಿದರೆ ಯಾವುದೇ ಬ್ಯಾಂಕಿಂಗ್ ಕಂಪನಿಯ ಅಥವಾ ಅದರ ಸಾಲಗಾರರ ಹೆಸರನ್ನು ಬಹಿರಂಗಪಡಿಸದೆಯೇ ಅದು ಸೂಕ್ತವೆಂದು ಯೋಚಿಸುವಂಥ ಕ್ರೋಢೀಕೃತ ನಮೂನೆಯಲ್ಲಿ, ಬ್ಯಾಂಕು ಪ್ರಕಟಿಸುವುದಕ್ಕೆ;

(ಸಿ) ಬ್ಯಾಂಕಿಂಗ್ ಕಂಪನಿಯು ಅಥವಾ ಬ್ಯಾಂಕು, ಯಾವುದೇ ಸಾಲದ ಬಗೆಗಿನ ಮಾಹಿತಿಯನ್ನು ಯಾವುದೇ ಇತರ ಬ್ಯಾಂಕಿಂಗ್ ಕಂಪನಿಗೆ, ಅಥವಾ ಬ್ಯಾಂಕರುಗಳಲ್ಲಿ ರೂಢಿಗತವಾಗಿರುವ ಪದ್ಧತಿ ಮತ್ತು ಆಚರಣೆಗೆ ಅನುಸಾರವಾಗಿ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅನುಮತಿಸಲಾದಂತೆ ಅಥವಾ ಅಗತ್ಯವಿರುವಂತೆ ಬಹಿರಂಗಪಡಿಸುವುದಕ್ಕೆ ಅಥವಾ ಪ್ರಕಟಿಸುವುದಕ್ಕೆ

–ಅನ್ವಯವಾಗತಕ್ಕುದಲ್ಲ:

ಪರಂತು, ಈ ಖಂಡದ ಮೇರೆಗೆ ಬ್ಯಾಂಕಿಂಗ್ ಕಂಪನಿಯು ಸ್ವೀಕರಿಸಿದ ಯಾವುದೇ ಸಾಲದ ಬಗೆಗಿನ ಮಾಹಿತಿಯನ್ನು, ಬ್ಯಾಂಕರುಗಳಲ್ಲಿ ರೂಢಿಗತವಾಗಿರುವ ಪದ್ಧತಿ ಮತ್ತು ಆಚರಣೆಗೆ ಅನುಸಾರವಾಗಿ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅನುಮತಿಸಲಾದಂತೆ ಅಥವಾ ಅಗತ್ಯವಿರುವಂತೆ ಹೊರತು, ಪ್ರಕಟಿಸತಕ್ಕುದಲ್ಲ.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು, 45ಸಿ ಪ್ರಕರಣದ ಮೇರೆಗೆ ಆ ಬ್ಯಾಂಕಿಂಗ್ ಕಂಪನಿಯು ಒಪ್ಪಿಸಿದ ಯಾವುದೇ ವಿವರಪತ್ರವನ್ನು ಹಾಜರುಪಡಿಸಲು ಅಥವಾ ಪರಿಶೀಲನೆಗೆ ಕೊಡಲು ಅಥವಾ 45ಡಿ ಪ್ರಕರಣದ ಮೇರೆಗೆ ಆ ಬ್ಯಾಂಕಿಂಗ್ ಕಂಪನಿಗೆ ಬ್ಯಾಂಕು ಒದಗಿಸಿದ ಯಾವುದೇ ಸಾಲದ ಬಗೆಗಿನ ಮಾಹಿತಿಯನ್ನು ಬಹಿರಂಗಪಡಿಸಲು ಆ ಬ್ಯಾಂಕನ್ನು ಅಥವಾ ಯಾವುದೇ ಬ್ಯಾಂಕಿಂಗ್ ಕಂಪನಿಯನ್ನು ಒತ್ತಾಯಪಡಿಸತಕ್ಕುದಲ್ಲ.

**45ಎಫ್. ನಷ್ಟ ಪರಿಹಾರಕ್ಕಾಗಿನ ಕೆಲವು ಕ್ಲೇಮುಗಳ ಪ್ರತಿಷೇಧ.–** ಯಾವನೇ ವ್ಯಕ್ತಿಯು, ಈ ಅಧ್ಯಾಯದ ಯಾವುದೇ ಉಪಬಂಧದ ಪ್ರವರ್ತನೆಯ ಕಾರಣದಿಂದಾಗಿ ಉಂಟಾದ ಯಾವುದೇ ನಷ್ಟಕ್ಕಾಗಿ ಕರಾರಿನಲ್ಲಿಯೇ ಆಗಲಿ ಅಥವಾ ಅನ್ಯಥಾ ಆಗಲಿ ಯಾವುದೇ ನಷ್ಟಪರಿಹಾರಕ್ಕೆ ಯಾವುದೇ ಹಕ್ಕನ್ನು ಹೊಂದಿರತಕ್ಕುದಲ್ಲ.

**45ಜಿ.** [***ದಂಡನೆಗಳು***] ಭಾರತ ರಿಸರ್ವ್ ಬ್ಯಾಂಕ್ (ತಿದ್ದುಪಡಿ) ಅಧಿನಿಯಮ, 1974 (1974ರ 51)ರ 15ನೇ ಪ್ರಕರಣದ ಮೂಲಕ ನಿರಸನಗೊಂಡಿದೆ.

## ಅಧ್ಯಾಯ–III ಬಿ

## ಠೇವಣಿಗಳನ್ನು ಸ್ವೀಕರಿಸುವ ಬ್ಯಾಂಕೇತರ ಸಂಸ್ಥೆಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ ಉಪಬಂಧಗಳು

**45ಎಚ್. IIIಬಿ ಅಧ್ಯಾಯವು ಕೆಲವು ಸಂದರ್ಭಗಳಲ್ಲಿ ಅನ್ವಯಿಸತಕ್ಕುದಲ್ಲ.–** ಈ ಅಧ್ಯಾಯದ ಉಪಬಂಧಗಳು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ 5ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಸ್ಟೇಟ್ ಬ್ಯಾಂಕಿಗೆ ಅಥವಾ ಬ್ಯಾಂಕಿಂಗ್ ಕಂಪನಿಗೆ ಅಥವಾ ಆ ಅಧಿನಿಯಮದ 5ನೇ ಪ್ರಕರಣದ (ಡಿಎ) ಖಂಡದಲ್ಲಿ ಪರಿಭಾಷಿಸಿದಂತೆ ಸಂವಾದಿ ಹೊಸ ಬ್ಯಾಂಕಿಗೆ ಅಥವಾ ಭಾರತ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕುಗಳು) ಅಧಿನಿಯಮ, 1959ರಲ್ಲಿ ಪರಿಭಾಷಿಸಿದಂತೆ ಸಹಾಯಕ ಬ್ಯಾಂಕಿಗೆ ಅಥವಾ ಪ್ರಾದೇಶಿಕ ಗ್ರಾಮಾಂತರ ಬ್ಯಾಂಕು ಅಥವಾ ಸಹಕಾರಿ ಬ್ಯಾಂಕು ಅಥವಾ ಪ್ರಾಥಮಿಕ ಕೃಷಿ ಸಾಲ ಸಂಘ ಅಥವಾ ಪ್ರಾಥಮಿಕ ಸಾಲ ಸಂಘ ಇವುಗಳಿಗೆ ಅನ್ವಯವಾಗತಕ್ಕುದಲ್ಲ:

ಪರಂತು, ಈ ಅಧ್ಯಾಯದ ಉದ್ದೇಶಗಳಿಗಾಗಿ, ತಮಿಳುನಾಡು ಕೈಗಾರಿಕಾ ಬಂಡವಾಳ ಹೂಡಿಕೆ ನಿಗಮ ಪರಿಮಿತವನ್ನು, ಬ್ಯಾಂಕಿಂಗ್ ಕಂಪನಿ ಎಂಬುದಾಗಿ ಭಾವಿಸತಕ್ಕುದಲ್ಲ.

**45ಐ. ಪರಿಭಾಷೆಗಳು.–** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಬ್ಯಾಂಕೇತರ ಹಣಕಾಸು ಸಂಸ್ಥೆಯ ವ್ಯವಹಾರ" ಎಂದರೆ, (ಸಿ) ಖಂಡದಲ್ಲಿ ಉಲ್ಲೇಖಿಸಲಾಗಿರುವ ಹಣಕಾಸು ಸಂಸ್ಥೆಯು ವ್ಯವಹಾರವನ್ನು ನಡೆಸುತ್ತಿರುವುದು ಮತ್ತು ಇದರಲ್ಲಿ (ಎಫ್) ಖಂಡದಲ್ಲಿ ಉಲ್ಲೇಖಿಸಲಾಗಿರುವ ಬ್ಯಾಂಕೇತರ ಹಣಕಾಸು ಕಂಪನಿಯ ವ್ಯವಹಾರವನ್ನೂ ಒಳಗೊಳ್ಳುತ್ತದೆ.

(ಎಎ) "ಕಂಪನಿ" ಎಂದರೆ, ಕಂಪನಿಗಳ ಅಧಿನಿಯಮ, 1956ರ 3ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ಒಂದು ಕಂಪನಿ ಮತ್ತು ಅದರಲ್ಲಿ ಆ ಅಧಿನಿಯಮದ 59ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ವಿದೇಶಿ ಕಂಪನಿಯನ್ನು ಒಳಗೊಳ್ಳುತ್ತದೆ;

(ಬಿ) "ನಿಗಮ" ಎಂದರೆ, ಯಾವುದೇ ವಿಧಾನಮಂಡಲದ ಅಧಿನಿಯಮದ ಮೂಲಕ ನಿಗಮಿತಗೊಂಡ ನಿಗಮ;

(ಬಿಬಿ) "ಠೇವಣಿ" ಎಂಬುದು ಠೇವಣಿ ಅಥವಾ ಸಾಲದ ಮೂಲಕ ಅಥವಾ ಯಾವುದೇ ಇತರ ರೂಪದಲ್ಲಿ ಯಾವುದೇ ಹಣವನ್ನು ಸ್ವೀಕರಿಸುವುದನ್ನು ಒಳಗೊಳ್ಳುತ್ತದೆ ಮತ್ತು ಅದು ಸದಾ ಒಳಗೊಂಡಿದೆ ಎಂದು ಭಾವಿಸತಕ್ಕುದು, ಆದರೆ ಅದರಲ್ಲಿ –

(i) ಷೇರು ಬಂಡವಾಳದ ಮೂಲಕ ಪಡೆದ ಮೊಬಲಗುಗಳು;

(ii) ಫರ್ಮಿನ ಪಾಲುದಾರರು ಬಂಡವಾಳವಾಗಿ ವಂತಿಗೆಕೊಟ್ಟ ಮೊಬಲಗು;

(iii) ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ 5ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿದಂತೆ ಸಹಕಾರಿ ಬ್ಯಾಂಕು, ಅಥವಾ ಯಾವುದೇ ಇತರ ಬ್ಯಾಂಕಿಂಗ್ ಕಂಪನಿ ಅಥವಾ ಅನುಸೂಚಿತ ಬ್ಯಾಂಕಿನಿಂದ ಸ್ವೀಕರಿಸಿದ ಮೊಬಲಗು;

(iv) (ಎ) ಅಭಿವೃದ್ಧಿ ಬ್ಯಾಂಕು,

(ಬಿ) ರಾಜ್ಯ ಹಣಕಾಸು ನಿಗಮ,

(ಸಿ) ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1964ರ 6ಸಿ ಪ್ರಕರಣದಲ್ಲಿ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಹಣಕಾಸು ಸಂಸ್ಥೆ,

(ಡಿ) ಈ ಬಗ್ಗೆ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಸಂಸ್ಥೆ

– ಇವುಗಳಿಂದ ಸ್ವೀಕರಿಸಲಾದ ಯಾವುದೇ ಮೊಬಲಗು;

(v) ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಈ ಕೆಳಕಂಡ ರೂಪದಲ್ಲಿ ಸ್ವೀಕರಿಸಿದ ಮೊಬಲಗುಗಳು, ಎಂದರೆ –

(ಎ) ಭದ್ರತಾ ಠೇವಣಿ,

(ಬಿ) ವ್ಯವಹಾರ ಸಂಬಂಧವಾದ ಠೇವಣಿ,

(ಸಿ) ಮುಂಗಡ ಹಣ, ಅಥವಾ

(ಡಿ) ಸರಕುಗಳು, ಸ್ವತ್ತುಗಳು ಅಥವಾ ಸೇವೆಗಳಿಗಾಗಿ ಮಾಡಿದ ಕೋರಿಕೆಗಳ ಮುಂಗಡ;

(vi) ತತ್ಕಾಲದಲ್ಲಿ ಯಾವುದೇ ರಾಜ್ಯದಲ್ಲಿ ಹಣವನ್ನು ಸಾಲವಾಗಿ ನೀಡುವುದಕ್ಕೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೇರೆಗೆ ನೋಂದಾಯಿಸಲಾದ ನಿಗಮಿತ ನಿಕಾಯವಲ್ಲದ ವ್ಯಕ್ತಿಗಳ ಸಂಘ ಅಥವಾ ಫರ್ಮು ಅಥವಾ ವ್ಯಕ್ತಿಯಿಂದ ಸ್ವೀಕರಿಸಿದ ಯಾವುದೇ ಮೊಬಲಗು;ಮತ್ತು

(vii) ಚೀಟಿಯ ಸಂಬಂಧದಲ್ಲಿ ಚಂದಾ ಹಣಗಳ ರೂಪದಲ್ಲಿ ಸ್ವೀಕರಿಸಿದ ಯಾವುದೇ ಮೊಬಲಗು

– ಇವುಗಳನ್ನು ಒಳಗೊಳ್ಳುವುದಿಲ್ಲ.

**ವಿವರಣೆ-I:-** ಚೀಟಿ ಎಂಬುದು ಚಿಟ್‌ಫಂಡ್ ಅಧಿನಿಯಮ, 1982ರ 2ನೇ ಪ್ರಕರಣದ (ಬಿ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ.

**ವಿವರಣೆ-II:-** ಯಾವುದೇ ಸ್ವತ್ತಿನ (ಚರಸ್ವತ್ತೇ ಆಗಿರಲಿ ಅಥವಾ ಸ್ಥಿರಸ್ವತ್ತೇ ಆಗಿರಲಿ) ಮಾರಾಟದ ಮೇಲೆ ಕೊಳ್ಳುವವನಿಗೆ ಮಾರುವವನು ಕೊಟ್ಟ ಯಾವುದೇ ಸಾಲವನ್ನು ಈ ಖಂಡದ ಉದ್ದೇಶಗಳಿಗಾಗಿ ಠೇವಣಿ ಎಂಬುದಾಗಿ ಭಾವಿಸತಕ್ಕುದಲ್ಲ.

(ಸಿ) "ಹಣಕಾಸು ಸಂಸ್ಥೆ" ಎಂದರೆ ಈ ಕೆಳಕಂಡ ಯಾವುದೇ ಚಟುವಟಿಕೆಯ ಬಗ್ಗೆ ಅದರ ವ್ಯವಹಾರವೆಂದು ಅಥವಾ ಅದರ ವ್ಯವಹಾರದ ಭಾಗವೆಂದು ನಡೆಸುತ್ತಿರುವಂಥ ಯಾವುದೇ ಬ್ಯಾಂಕೇತರ ಸಂಸ್ಥೆ, ಎಂದರೆ:-

(i) ಸಾಲಗಳನ್ನು ಅಥವಾ ಮುಂಗಡಗಳನ್ನು ಕೊಡುವ ಮೂಲಕ ಅಥವಾ ಅನ್ಯಥಾ, ತನ್ನದಲ್ಲದ ಯಾವುದೇ ಇತರ ಚಟುವಟಿಕೆಗೆ ಹಣಕಾಸನ್ನು ಒದಗಿಸುವುದು;

(ii) ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಹೊರಡಿಸಿದ ಷೇರುಗಳು, ಸ್ಟಾಕುಗಳು, ಬಂಧಪತ್ರಗಳು, ಡಿಬೆಂಚರುಗಳು ಅಥವಾ ಭದ್ರತಾಪತ್ರಗಳು ಅಥವಾ ಅಂಥದೇ ಸ್ವರೂಪದ ಇತರ ಕ್ರಯ ವಿಕ್ರಯ ಮಾಡಬಹುದಾದ ಭದ್ರತಾಪತ್ರಗಳ ಆರ್ಜನೆ;

(iii) ಕಂತು ಖರೀದಿ ಅಧಿನಿಯಮ,1972 (1972ರ 26)ರ 2ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿದಂತೆ ಕಂತು ಖರೀದಿ ಒಪ್ಪಂದದ ಮೇರೆಗೆ ಬಾಡಿಗೆದಾರನಿಗೆ ಯಾವುವೇ ಸರಕುಗಳನ್ನು ಬಾಡಿಗೆಗೆ ಕೊಡುವುದು ಅಥವಾ ವಶಾವಣೆ ಮಾಡುವುದು;

(iv) ಯಾವುದೇ ವರ್ಗದ ವಿಮಾ ವ್ಯವಹಾರವನ್ನು ನಡೆಸುವುದು;

(v) ಯಾವುದೇ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಪರಿಭಾಷಿಸಿದಂತೆ ಚೀಟಿಗಳು ಅಥವಾ "ಕುರಿಗಳು" ಅಥವಾ ಅದರಂಥದೇ ಆಗಿರುವಂಥ ಯಾವುದೇ ವ್ಯವಹಾರದಲ್ಲಿ, ಫೋರ್‌ಮನ್, ಏಜೆಂಟನೆಂದು ಅಥವಾ ಯಾವುದೇ ಇತರ ನಾತೆಯಲ್ಲಿ ಅದರ ವ್ಯವಸ್ಥಾಪನೆಯನ್ನು ನಡೆಸುವುದು, ನಿರ್ವಹಿಸುವುದು ಅಥವಾ ಅದರ ಮೇಲ್ವಿಚಾರಣೆ ಮಾಡುವುದು;

(vi) ಚಂದಾಗಳ ರೂಪದಲ್ಲಿ ಅಥವಾ ಘಟಕಗಳ ಮಾರಾಟ ಅಥವಾ ಯಾವುದೇ ಲಿಖಿತಗಳ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ಯಾವುವೇ ಉದ್ದೇಶಗಳಿಗಾಗಿ ಯಾವುದೇ ಯೋಜನೆ ಅಥವಾ ಯಾವುದೇ ಹೆಸರಿನಲ್ಲಿ ಕರೆಯಲಾಗಿರಲಿ ವ್ಯವಸ್ಥೆಯ ಮೇರೆಗೆ ಹಣವನ್ನು ಒಂದೇ ಮೊತ್ತದಲ್ಲಿ ಅಥವಾ ಅನ್ಯಥಾ ಸಂಗ್ರಹಿಸುವುದು ಮತ್ತು ಹಣಗಳನ್ನು ಯಾರಿಂದ ಸಂಗ್ರಹಿಸಲಾಗಿದೆಯೋ ಆ ವ್ಯಕ್ತಿಗಳಿಗೆ ಅಥವಾ ಯಾವನೇ ಇತರ ವ್ಯಕ್ತಿಗೆ ನಗದು ರೂಪದಲ್ಲೇ ಆಗಲಿ ಅಥವಾ ವಸ್ತುರೂಪದಲ್ಲೇ ಆಗಲಿ ಬಹುಮಾನಗಳು ಅಥವಾ ಕೊಡುಗೆಗಳನ್ನು ಕೊಡುವುದು;

ಆದರೆ, ಅದರ ಪ್ರಧಾನ ವ್ಯವಹಾರಗಳೆಂಬುದಾಗಿ ಇವುಗಳನ್ನು ನಡೆಸುತ್ತಿರುವ ಯಾವುದೇ ಸಂಸ್ಥೆಯನ್ನು ಒಳಗೊಳ್ಳುವುದಿಲ್ಲ,-

(ಎ) ಕೃಷಿ ಕಾರ್ಯಾಚರಣೆಗಳು; ಅಥವಾ

(ಎಎ) ಕೈಗಾರಿಕಾ ಚಟುವಟಿಕೆ; ಅಥವಾ

(ಬಿ) ಯಾವುದೇ ಸರಕುಗಳ (ಭದ್ರತಾಪತ್ರಗಳನ್ನು ಹೊರತುಪಡಿಸಿ) ಖರೀದಿ ಅಥವಾ ಮಾರಾಟ ಅಥವಾ ಯಾವುದೇ ಸೇವೆಗಳನ್ನು ಒದಗಿಸುವುದು; ಅಥವಾ

(ಸಿ) ಸ್ಥಿರ ಸ್ವತ್ತಿನ ಖರೀದಿ, ಅದರ ನಿರ್ಮಾಣ ಅಥವಾ ಮಾರಾಟ

– ಇವುಗಳನ್ನು ನಡೆಸುತ್ತಿರುವ ಸಂಸ್ಥೆಯನ್ನು ಒಳಗೊಳ್ಳುವುದಿಲ್ಲ. ಆದರೆ ಆ ಸಂಸ್ಥೆಯ ಆದಾಯದ ಯಾವುದೇ ಭಾಗವನ್ನು ಇತರ ವ್ಯಕ್ತಿಗಳು ಚರಸ್ವತ್ತಿನ ಖರೀದಿಗಳು, ನಿರ್ಮಾಣಗಳು ಅಥವಾ ಮಾರಾಟಗಳಿಗೆ ಹಣಕಾಸು ಒದಗಿಸುವುದರಿಂದ ಪಡೆದಿರಕೂಡದು.

**ವಿವರಣೆ:–** ಈ ಖಂಡದ ಉದ್ದೇಶಗಳಿಗಾಗಿ, "ಕೈಗಾರಿಕಾ ಚಟುವಟಿಕೆ" ಎಂದರೆ, ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು ಅಧಿನಿಯಮ, 1964ರ (1964ರ 18) 2ನೇ ಪ್ರಕರಣದ (ಸಿ) ಖಂಡದ (i) ರಿಂದ (xviii)ರ ವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಚಟುವಟಿಕೆ;

(ಡಿ) "ಫರ್ಮು" ಎಂದರೆ ಭಾರತ ಪಾಲುಗಾರಿಕೆ ಅಧಿನಿಯಮ, 1932 (1932ರ 8)ರಲ್ಲಿ ಪರಿಭಾಷಿಸಿದಂಥ ಫರ್ಮು;

(ಇ) "ಬ್ಯಾಂಕೇತರ ಸಂಸ್ಥೆ" ಎಂದರೆ ಒಂದು ಕಂಪನಿ, ನಿಗಮ ಅಥವಾ ಸಹಕಾರಿ ಸಂಸ್ಥೆ;

(ಎಫ್) "ಬ್ಯಾಂಕೇತರ ಹಣಕಾಸು ಕಂಪನಿ" ಎಂದರೆ,–

(i) ಕಂಪನಿಯಾಗಿರುವ ಒಂದು ಹಣಕಾಸು ಸಂಸ್ಥೆ;

(ii) ಕಂಪನಿಯಾಗಿದ್ದು, ಯಾವುದೇ ಯೋಜನೆ ಅಥವಾ ವ್ಯವಸ್ಥೆಯ ಮೇರೆಗೆ ಅಥವಾ ಇತರ ಯಾವುದೇ ರೀತಿಯಲ್ಲಿ ಠೇವಣಿ ಸ್ವೀಕರಿಸುವುದು ಅಥವಾ ಯಾವುದೇ ರೀತಿಯಲ್ಲಿ ಸಾಲ ಕೊಡುವುದು ಅದರ ಪ್ರಧಾನ ವ್ಯವಹಾರವಾಗಿರುವ ಒಂದು ಬ್ಯಾಂಕೇತರ ಸಂಸ್ಥೆ,

(iii) ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಮತ್ತು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಬ್ಯಾಂಕು ನಿರ್ದಿಷ್ಟಪಡಿಸಬಹುದಾದ ಇತರೆ ಬ್ಯಾಂಕೇತರ ಸಂಸ್ಥೆ ಅಥವಾ ಅಂಥ ಸಂಸ್ಥೆಗಳ ವರ್ಗ.

**45–ಐಎ ನೋಂದಣಿಯ ಮತ್ತು ನಿವ್ವಳ ಸ್ವಂತ ನಿಧಿಯ ಅಗತ್ಯತೆ.–** (1) ಈ ಅಧ್ಯಾಯದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಯು, ಬ್ಯಾಂಕೇತರ ಹಣಕಾಸು ಸಂಸ್ಥೆಯು–

(ಎ) ಈ ಅಧ್ಯಾಯದ ಮೇರೆಗೆ ನೀಡಲಾದ ನೋಂದಣಿಯ ಪ್ರಮಾಣಪತ್ರವನ್ನು ಪಡೆದ ಹೊರತು; ಮತ್ತು

(ಬಿ) ಇಪ್ಪತ್ತೈದು ಲಕ್ಷ ರೂಪಾಯಿಗಳ ಅಥವಾ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂತೆ ಎರಡು ನೂರು ಲಕ್ಷ ರೂಪಾಯಿಗಳನ್ನು ಮೀರದಂಥ ಇತರ ಮೊಬಲಗನ್ನು ನಿವ್ವಳ ಸ್ವಂತ ನಿಧಿಯನ್ನಾಗಿ ಹೊಂದಿರದ ಹೊರತು,

– ವ್ಯವಹಾರವನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

(2) ಪ್ರತಿಯೊಂದು ಬ್ಯಾಂಕೇತರ ಹಣಕಾಸು ಕಂಪನಿಯು, ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ನೋಂದಣಿಗಾಗಿ ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ಭಾರತ ರಿಸರ್ವ್ ಬ್ಯಾಂಕ್ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭದಂದು ಅಸ್ತಿತ್ವದಲ್ಲಿರುವ ಬ್ಯಾಂಕೇತರ ಹಣಕಾಸು ಕಂಪನಿಯು ಹಾಗೆ ಪ್ರಾರಂಭಗೊಂಡಂದಿನಿಂದ ಆರು ತಿಂಗಳು ಮುಕ್ತಾಯವಾಗುವುದಕ್ಕೆ ಮುಂಚೆ ನೋಂದಣಿಗಾಗಿ

ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಅದಕ್ಕೆ ನೋಂದಣಿ ಪ್ರಮಾಣ ಪತ್ರ ನೀಡುವವರೆಗೆ ಅಥವಾ ನೋಂದಣಿಯ ಅರ್ಜಿಯನ್ನು ತಿರಸ್ಕರಿಸಿದ್ದರ ಬಗ್ಗೆ ಅದಕ್ಕೆ ತಿಳಿಸುವವರೆಗೆ ಬ್ಯಾಂಕೇತರ ಹಣಕಾಸು ಸಂಸ್ಥೆಯ ವ್ಯವಹಾರವನ್ನು ಮುಂದುವರೆಸಬಹುದು.

(3) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಭಾರತ ರಿಸರ್ವ್ ಬ್ಯಾಂಕ್ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭದಂದು ಅಸ್ತಿತ್ವದಲ್ಲಿರುವ ಮತ್ತು ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ನಿವ್ವಳ ಸ್ವಂತ ನಿಧಿಯನ್ನು ಹೊಂದಿರುವ ಬ್ಯಾಂಕೇತರ ಹಣಕಾಸು ಕಂಪನಿಯು, ಅದು ನಿವ್ವಳ ಸ್ವಂತ ನಿಧಿಯ ಅಗತ್ಯತೆಗಳನ್ನು ಪೂರೈಸುವುದಕ್ಕೆ ಅಂಥ ಕಂಪನಿಯನ್ನು ಶಕ್ತಗೊಳಿಸುವ ಉದ್ದೇಶಕ್ಕಾಗಿ ಬ್ಯಾಂಕೇತರ ಹಣಕಾಸು ಸಂಸ್ಥೆಯು ವ್ಯವಹಾರವನ್ನು-

(i) ಹಾಗೆ ಪ್ರಾರಂಭಗೊಂಡಂದಿನಿಂದ ಮೂರು ವರ್ಷಗಳ ಅವಧಿಗಾಗಿ; ಅಥವಾ

(ii) ಹಾಗೆ ಮಾಡುವುದಕ್ಕೆ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ನಂತರ ಬ್ಯಾಂಕು ವಿಸ್ತರಿಸಬಹುದಾದ ಅಂಥ ಮತ್ತಷ್ಟು ಅವಧಿಗಾಗಿ

- ಅಂಥ ಕಂಪನಿಯು, ನಿವ್ವಳ ಸ್ವಂತ ನಿಧಿಯ ಅಗತ್ಯತೆಯನ್ನು ಪೂರೈಸಿದ ಮೂರು ತಿಂಗಳೊಳಗೆ, ಅಂಥ ಪೂರೈಕೆಯ ಬಗ್ಗೆ ಬ್ಯಾಂಕಿಗೆ ತಿಳಿಸತಕ್ಕದ್ದು ಎಂಬ ಷರತ್ತಿಗೆ ಒಳಪಟ್ಟು, ಮುಂದುವರೆಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ವ್ಯವಹಾರವನ್ನು ಮುಂದುವರೆಸುವುದಕ್ಕೆ ನೀಡಲಾದ ಅವಧಿಯು, ಯಾವುದೇ ಸಂದರ್ಭದಲ್ಲಿಯೂ ಒಟ್ಟು ಆರು ವರ್ಷಗಳನ್ನು ಮೀರತಕ್ಕದ್ದಲ್ಲ.

(4) ಬ್ಯಾಂಕು, ನೋಂದಣಿಗಾಗಿ ಅರ್ಜಿಯನ್ನು ಪರಿಗಣಿಸುವ ಉದ್ದೇಶಕ್ಕಾಗಿ, ಬ್ಯಾಂಕೇತರ ಹಣಕಾಸು ಕಂಪನಿಯ ಪುಸ್ತಕಗಳನ್ನು ಪರಿಶೀಲಿಸುವ ಮೂಲಕ ಅಥವಾ ಅನ್ಯಥಾ ಈ ಮುಂದಿನ ಷರತ್ತುಗಳನ್ನು ಪೂರೈಸಲಾಗಿದೆಯೇ ಇಲ್ಲವೇ ಎಂಬುದನ್ನು ಮನದಟ್ಟು ಮಾಡಿಕೊಡುವಂತೆ ಅಗತ್ಯಪಡಿಸಬಹುದು:-

(ಎ) ಬ್ಯಾಂಕೇತರ ಹಣಕಾಸು ಕಂಪನಿಯು ತನ್ನ ಪ್ರಸ್ತುತ ಅಥವಾ ಭವಿಷ್ಯದ ಠೇವಣಿದಾರರಿಗೆ ಅವರ ಕ್ಲೇಮುಗಳು ಕೂಡಿಬಂದಾಗಲೆಲ್ಲ ಪೂರ್ತಿಯಾಗಿ ಸಂದಾಯ ಮಾಡುವ ಸ್ಥಿತಿಯಲ್ಲಿದೆ ಅಥವಾ ಇರುತ್ತದೆ;

(ಬಿ) ಬ್ಯಾಂಕೇತರ ಹಣಕಾಸು ಕಂಪನಿಯ ವ್ಯವಹಾರಗಳು ಅದರ ಪ್ರಸ್ತುತ ಅಥವಾ ಭವಿಷ್ಯದ ಠೇವಣಿದಾರರ ಹಿತಾಸಕ್ತಿಗೆ ಹಾನಿಕರವಾಗುವ ರೀತಿಯಲ್ಲಿ ನಿರ್ವಹಣೆಯಾಗುತ್ತಿಲ್ಲ ಅಥವಾ ಆಗುವ ಸಂಭವವಿಲ್ಲ;

(ಸಿ) ಬ್ಯಾಂಕೇತರ ಹಣಕಾಸು ಕಂಪನಿಯ ಆಡಳಿತ ವರ್ಗದ ಅಥವಾ ಉದ್ದೇಶಿತ ಆಡಳಿತ ವರ್ಗದ ಸಾಮಾನ್ಯ ಲಕ್ಷಣವು ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಅದರ ಠೇವಣಿದಾರರ ಹಿತಾಸಕ್ತಿಗೆ ಪ್ರತಿಕೂಲವಾಗಿರುವುದಿಲ್ಲ;

(ಡಿ) ಬ್ಯಾಂಕೇತರ ಹಣಕಾಸು ಕಂಪನಿಯು ಸಾಕಷ್ಟು ಬಂಡವಾಳ ರಚನೆಯನ್ನು ಮತ್ತು ಗಳಿಕೆಯ ಸಂಭಾವ್ಯತೆಯನ್ನು ಹೊಂದಿದೆ;

(ಇ) ಬ್ಯಾಂಕೇತರ ಹಣಕಾಸು ಕಂಪನಿಗೆ ಭಾರತದಲ್ಲಿ ವ್ಯವಹಾರವನ್ನು ಪ್ರಾರಂಭಿಸುವುದಕ್ಕೆ ಅಥವಾ ನಡೆಸುವುದಕ್ಕೆ ನೋಂದಣಿ ಪ್ರಮಾಣ ಪತ್ರವನ್ನು ನೀಡುವುದರಿಂದ ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆಯಾಗುತ್ತದೆ;

(ಎಫ್) ನೋಂದಣಿಯ ಪ್ರಮಾಣ ಪತ್ರದ ನೀಡಿಕೆಯು, ಹಣಕಾಸಿನ ಸ್ಥಿರತೆ, ಆರ್ಥಿಕ ಬೆಳವಣಿಗೆಯೊಂದಿಗೆ ಸುಸಂಗತವಾಗುವ ಹಾಗೆ ಮತ್ತು ಬ್ಯಾಂಕು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸುಸಂಗತ ಅಂಶಗಳನ್ನು ಪರಿಗಣಿಸಿ ಆರ್ಥಿಕ ವಲಯದ ಕಾರ್ಯಾಚರಣೆ ಮತ್ತು ಕ್ರೋಢೀಕರಣಕ್ಕೆ ಬಾಧಕವಾಗುವುದಿಲ್ಲ; ಮತ್ತು

(ಜಿ) ಬ್ಯಾಂಕಿನ ಅಭಿಪ್ರಾಯದಲ್ಲಿ ಯಾವುದೇ ಇತರ ಷರತ್ತುಗಳ ಪೂರೈಕೆಯಿಂದ ಬ್ಯಾಂಕೇತರ ಹಣಕಾಸು ಕಂಪನಿಗೆ ಭಾರತದಲ್ಲಿ ವ್ಯವಹಾರವನ್ನು ಪ್ರಾರಂಭಿಸಲು ಅಥವಾ ನಡೆಸಲು ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಠೇವಣಿದಾರರ ಹಿತಾಸಕ್ತಿಗೆ ಹಾನಿಕರವಾಗಿರತಕ್ಕದ್ದಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕೆ ಅಗತ್ಯವಾಗುತ್ತದೆ;

(5) ಬ್ಯಾಂಕು, (4)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಲಾಗಿದೆ ಎಂದು ಬ್ಯಾಂಕಿಗೆ ಮನದಟ್ಟಾದ ತರುವಾಯ, ತಾನು ವಿಧಿಸುವುದು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ನೋಂದಣಿಯ ಪ್ರಮಾಣಪತ್ರವನ್ನು ನೀಡಬಹುದು.

(6) ಬ್ಯಾಂಕೇತರ ಹಣಕಾಸು ಕಂಪನಿಯು ಈ ಮುಂದಿನ ಷರತ್ತುಗಳನ್ನು ಪೂರೈಸದಿದ್ದಲ್ಲಿ ಅಂಥ ಕಂಪನಿಗೆ ಈ ಪ್ರಕರಣದ ಮೇರೆಗೆ ನೀಡಲಾದ ನೋಂದಣಿ ಪ್ರಮಾಣಪತ್ರವನ್ನು ಬ್ಯಾಂಕು ರದ್ದುಗೊಳಿಸಬಹುದು; ಅಂದರೆ, ಅಂಥ ಕಂಪನಿಯು–

(i) ಭಾರತದಲ್ಲಿ ಬ್ಯಾಂಕೇತರ ಹಣಕಾಸು ಸಂಸ್ಥೆಯು ವ್ಯವಹಾರ ನಡೆಸುವುದನ್ನು ನಿಲ್ಲಿಸಿದರೆ; ಅಥವಾ

(ii) ನೋಂದಣಿಯ ಪ್ರಮಾಣಪತ್ರವನ್ನು ಯಾವ ಷರತ್ತಿಗೆ ಒಳಪಟ್ಟು ನೀಡಲಾಗಿದೆಯೋ ಅದನ್ನು ಪಾಲಿಸಲು ವಿಫಲವಾದರೆ; ಅಥವಾ

(iii) (4)ನೇ ಉಪಪ್ರಕರಣದ (ಎ) ದಿಂದ (ಜಿ) ಖಂಡಗಳ ಪೈಕಿ ಉಲ್ಲೇಖಿಸಿದ ಯಾವುದೇ ಷರತ್ತನ್ನು ಪೂರೈಸಲು, ಯಾವುದೇ ಸಮಯದಲ್ಲಿ ವಿಫಲನಾದರೆ; ಅಥವಾ

(iv) (ಎ) ಈ ಅಧ್ಯಾಯದ ಉಪಬಂಧಗಳ ಮೇರೆಗೆ ಬ್ಯಾಂಕಿನಿಂದ ನೀಡಲಾದ ಯಾವುದೇ ನಿರ್ದೇಶನವನ್ನು ಪಾಲಿಸಲು; ಅಥವಾ

(ಬಿ) ಈ ಅಧ್ಯಾಯದ ಉಪಬಂಧಗಳ ಮೇರೆಗೆ ಯಾವುದೇ ಕಾನೂನು ಅಥವಾ ಬ್ಯಾಂಕಿನಿಂದ ನೀಡಲಾದ ಯಾವುದೇ ನಿರ್ದೇಶನ ಅಥವಾ ಆದೇಶದ ಅಗತ್ಯತೆಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳನ್ನು ನಿರ್ವಹಿಸಲು; ಅಥವಾ

(ಸಿ) ಬ್ಯಾಂಕಿನ ಪರಿಶೀಲನಾ ಪ್ರಾಧಿಕಾರವು, ಕಂಪನಿಯ ಲೆಕ್ಕಪತ್ರಗಳ ಅಥವಾ ಇತರೆ ಸಂಬಂಧಪಟ್ಟ ದಸ್ತಾವೇಜುಗಳ ಪುಸ್ತಕಗಳನ್ನು ಪರಿಶೀಲಿಸುವುದಕ್ಕಾಗಿ ಸಲ್ಲಿಸುವಂತೆ ಅಥವಾ ನೀಡುವಂತೆ ಕೇಳಿದಾಗ ಅದು ಹಾಗೆ ಸಲ್ಲಿಸಲು ಅಥವಾ ನೀಡಲು

– ವಿಫಲವಾದಲ್ಲಿ; ಅಥವಾ

(v) ಈ ಅಧ್ಯಾಯದ ಉಪಬಂಧಗಳ ಮೇರೆಗೆ, ಬ್ಯಾಂಕಿನಿಂದ ಮಾಡಲಾದ ಆದೇಶದ ಮೂಲಕ ಠೇವಣಿ ಸ್ವೀಕರಿಸುವುದನ್ನು ನಿಷೇಧಿಸಲಾಗಿದ್ದು ಮತ್ತು ಅಂಥ ಆದೇಶವು, ಮೂರು ತಿಂಗಳಿಗಿಂತ ಕಡಿಮೆ ಇಲ್ಲದ ಅವಧಿಗಾಗಿ ಜಾರಿಯಲ್ಲಿದ್ದರೆ:

ಪರಂತು, (ii)ನೇ ಖಂಡದಲ್ಲಿನ ಉಪಬಂಧಗಳನ್ನು ಪಾಲಿಸುವಲ್ಲಿ ಅಥವಾ (iii)ನೇ ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಷರತ್ತುಗಳನ್ನು ಪೂರೈಸಲು ಬ್ಯಾಂಕೇತರ ಹಣಕಾಸು ಕಂಪನಿಯು ವಿಫಲವಾಗಿದೆ ಎಂಬ ಕಾರಣಕ್ಕಾಗಿ ಅದರ ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸುವುದಕ್ಕೆ ಮುಂಚೆ, ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸುವಲ್ಲಿನ ವಿಳಂಬವು ಸಾರ್ವಜನಿಕರ ಹಿತಾಸಕ್ತಿಗೆ ಅಥವಾ ಠೇವಣಿದಾರರ ಹಿತಾಸಕ್ತಿಗೆ ಅಥವಾ ಬ್ಯಾಂಕೇತರ ಹಣಕಾಸು ಕಂಪನಿಗೆ ಪ್ರತಿಕೂಲವಾಗುತ್ತದೆ ಎಂದು ಅದು ಅಭಿಪ್ರಾಯಪಟ್ಟ ಹೊರತು, ಅಂಥ ಉಪಬಂಧವನ್ನು ಪಾಲಿಸಲು ಅಥವಾ ಅಂಥ ಷರತ್ತನ್ನು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳುವುದಕ್ಕಾಗಿ ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳ ಮೇಲೆ, ಅಂಥ ಕಂಪನಿಗೆ ಅವಕಾಶವನ್ನು ನೀಡತಕ್ಕದ್ದು:

ಮತ್ತೂ ಪರಂತು, ನೋಂದಣಿಯ ಪ್ರಮಾಣಪತ್ರವನ್ನು ರದ್ದುಗೊಳಿಸುವ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಮೊದಲು, ಅಂಥ ಕಂಪನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(7) ನೋಂದಣಿ ಪ್ರಮಾಣಪತ್ರದ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯ ತಿರಸ್ಕರಣೆ ಅಥವಾ ನೋಂದಣಿ ಪ್ರಮಾಣಪತ್ರದ ರದ್ದಿಯಾತಿಯ ಆದೇಶದಿಂದ ಬಾಧಿತವಾದ ಒಂದು ಕಂಪನಿಯು ಅಂಥ ತಿರಸ್ಕರಣೆಯ ಅಥವಾ ರದ್ದಿಯಾತಿಯ ಅಂಥ ಆದೇಶವು ತನಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಕೇಂದ್ರ ಸರ್ಕಾರಕ್ಕೆ ಒಂದು ಅಪೀಲನ್ನು ಸಲ್ಲಿಸಬಹುದು ಮತ್ತು ಅಪೀಲನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದಲ್ಲಿ ಕೇಂದ್ರ ಸರ್ಕಾರದ ತೀರ್ಮಾನವು ಅಥವಾ ಅಪೀಲನ್ನು ಸಲ್ಲಿಸದಿದ್ದರೆ, ಬ್ಯಾಂಕಿನ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಅಪೀಲಿನ ತಿರಸ್ಕರಣೆಯ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಮೊದಲು, ಅಂಥ ಕಂಪನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ,-

(I) "ನಿವ್ವಳ ಸ್ವಯಂ ನಿಧಿ" ಎಂದರೆ,-

(ಎ) ಕಂಪನಿಯ ಇತ್ತೀಚಿನ ಆಯವ್ಯಯ ಪಟ್ಟಿಯಲ್ಲಿ ಮುಂದಿನವುಗಳನ್ನು ಕಳೆದ ತರುವಾಯ ಬಹಿರಂಗಪಡಿಸಿದ ಮತ್ತು ಸಂದಾಯಿತ ಸಾಮಾನ್ಯ ಬಂಡವಾಳದ ಮತ್ತು ಮುಕ್ತ ಮೀಸಲು ಹಣದ ಒಟ್ಟು ಮೊತ್ತ, ಎಂದರೆ,-

(i) ನಷ್ಟದ ಸಂಚಿತ ಬಾಕಿ;

(ii) ಮುಂದೂಡಿದ ರಾಜಸ್ವ ವೆಚ್ಚ; ಮತ್ತು

(iii) ಇತರ ಅಮೂರ್ತ ಆಸ್ತಿಗಳು; ಮತ್ತು

(ಬಿ) ಈ ರೂಪದಲ್ಲಿ, ಮತ್ತಷ್ಟು ಕಡಿತಗೊಳ್ಳುವ ಮೊಬಲಗು-

(I) ಅಂಥ ಕಂಪನಿಯ ಬಂಡವಾಳ ಹೂಡಿಕೆಗಳು ಈ ಮುಂದಿನ ಷೇರುಗಳಲ್ಲಿ, ಎಂದರೆ:-

(i) ಅದರ ಪೂರಕಗಳು;

(ii) ಒಂದೇ ಗುಂಪಿನ ಕಂಪನಿಗಳು;

(iii) ಇತರ ಎಲ್ಲ ಬ್ಯಾಂಕೇತರ ಹಣಕಾಸು ಕಂಪನಿಗಳು; ಮತ್ತು

(2) ಡಿಬೆಂಚರು ಪತ್ರಗಳು, ಬಾಂಡುಗಳು, ಬಾಕಿ ನಿಂತಿರುವ ಸಾಲಗಳು ಮತ್ತು ಮುಂಗಡಗಳ (ಕಂತು - ಖರೀದಿ ಮತ್ತು ಗುತ್ತಿಗೆ ಹಣಕಾಸು ಒಳಗೊಂಡು) ಪುಸ್ತಕ ಮೌಲ್ಯವು,-

(i) ಅಂಥ ಕಂಪನಿಯ ಪೂರಕಗಳು; ಮತ್ತು

(ii) ಒಂದೇ ಗುಂಪಿನ ಕಂಪನಿಗಳೊಂದಿಗೆ ಮಾಡಲಾದ ಮತ್ತು ಅದರಲ್ಲಿ ಇಡಲಾದ ಠೇವಣಿಗಳು;

ಮೇಲ್ಕಂಡ (ಎ) ದ ಶೇ. ಹತ್ತರಷ್ಟು ಮೀರುವ ಅಂಥ ಮೊಬಲಗಿನ ವ್ಯಾಪ್ತಿಯವರೆಗೆ.

(II) "ಸಹಾಯಕ ಕಂಪನಿಗಳು ಮತ್ತು ಒಂದೇ ಗುಂಪಿನ ಕಂಪನಿಗಳು" ಎಂಬುದರ ಪದಾವಳಿಗಳು, ಕಂಪನಿಗಳ ಅಧಿನಿಯಮ, 1956 (1956ರ 1) ರಲ್ಲಿ ಅವುಗಳಿಗೆ ಗೊತ್ತುಪಡಿಸಿದ ಅದೇ ಅರ್ಥವನ್ನೇ ಹೊಂದಿರತಕ್ಕದ್ದು.

**45-ಐಬಿ. ಆಸ್ತಿಗಳ ಶೇಕಡಾವಾರು ನಿರ್ವಹಣೆ.-** (1) ಪ್ರತಿಯೊಂದು ಬ್ಯಾಂಕೇತರ ಹಣಕಾಸು ಕಂಪನಿಯು, ಎರಡನೇ ಹಿಂದಿನ ತ್ರೈಮಾಸಿಕದ ಕೊನೆಯ ಕೆಲಸದ ದಿನದಂದು ವ್ಯವಹಾರವು ಮುಕ್ತಾಯವಾಗುವಾಗ ಬಾಕಿ ನಿಂತಿರುವ ಠೇವಣಿಗಳ ಪೈಕಿ ಯಾವುದೇ ದಿನದ ವ್ಯವಹಾರವು ಮುಕ್ತಾಯವಾಗುವಾಗ ಶೇಕಡಾ 5ಕ್ಕಿಂತ ಕಡಿಮೆ ಇಲ್ಲದಷ್ಟು ಅಥವಾ ಬ್ಯಾಂಕು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಶೇಕಡಾ ಇಪ್ಪತ್ತೈದನ್ನು ಮೀರದಂಥ ಹೆಚ್ಚಿನ ಶೇಕಡಾವಾರಲ್ಲಿ ಆಭಾದಿತ ಅನುಮೋದಿತ ಭದ್ರತೆಗಳಲ್ಲಿ, ಅಂಥ ಭದ್ರತೆಗಳು ಪ್ರಸಕ್ತ ಮಾರುಕಟ್ಟೆ ದರವನ್ನು ಮೀರದ ಮೌಲ್ಯದಲ್ಲಿ ಭಾರತದಲ್ಲಿ ಹೂಡತಕ್ಕದ್ದು ಮತ್ತು ಹಾಗೆ ಹೂಡುವುದನ್ನು ಮುಂದುವರೆಸತಕ್ಕದ್ದು:

ಪರಂತು, ಬ್ಯಾಂಕು, ಬ್ಯಾಂಕೇತರ ಹಣಕಾಸು ಕಂಪನಿಗಳ ವಿವಿಧ ವರ್ಗಗಳಿಗೆ ಸಂಬಂಧಪಟ್ಟಂತೆ ಬಂಡವಾಳ ಹೂಡಿಕೆಯ ವಿವಿಧ ಶೇಕಡಾವಾರನ್ನು ನಿರ್ದಿಷ್ಟಪಡಿಸಬಹುದು.

(2) ಈ ಪ್ರಕರಣದ ಉಪಬಂಧಗಳ ಪರಿಪಾಲನೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ಬ್ಯಾಂಕು, ತಾನು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ, ಅಂಥ ರೀತಿಯಲ್ಲಿ ಮತ್ತು ಅಂಥ ಕಾಲಾವಧಿಗಾಗಿ ತನಗೆ ವಿವರಪಟ್ಟಿಕೆಯನ್ನು ಒದಗಿಸುವಂತೆ ಪ್ರತಿಯೊಂದು ಬ್ಯಾಂಕೇತರ ಹಣಕಾಸು ಕಂಪನಿಯನ್ನು ಅಗತ್ಯಪಡಿಸಬಹುದು.

(3) ಯಾವುದೇ ದಿನದಂದು ವ್ಯವಹಾರವು ಮುಕ್ತಾಯವಾದಾಗ, ಬ್ಯಾಂಕೇತರ ಹಣಕಾಸು ಸಂಸ್ಥೆಯು ಹೂಡಿದ ಮೊಬಲಗು (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ದರಕ್ಕಿಂತ ಕಡಿಮೆ ಇದ್ದರೆ, ಅಂಥ ಕಂಪನಿಯು, ಅಂಥ ಕೊರತೆಗೆ ಸಂಬಂಧಪಟ್ಟಂತೆ, ನಿರ್ದಿಷ್ಟಪಡಿಸಲಾದ ಶೇಕಡಾವಾರಿಗಿಂತ ವಾಸ್ತವವಾಗಿ ಹೂಡಲಾದ ಮೊಬಲಗಿನಲ್ಲಿ ಎಷ್ಟು ಕೊರತೆ ಉಂಟಾಗಿದೆಯೋ ಅಂಥ ಮೊಬಲಗಿನ ಮೇಲೆ ಬ್ಯಾಂಕ್ ದರಕ್ಕಿಂತ ವಾರ್ಷಿಕ ಶೇಕಡಾ ಮೂರರಷ್ಟು ದಂಡ ರೂಪದ ಬಡ್ಡಿಯನ್ನು ಮತ್ತು ಕೊರತೆಯು ಮುಂದಿನ ತ್ರೈಮಾಸಿಕಗಳಲ್ಲಿಯೂ ಮುಂದುವರೆದರೆ ಅಂಥ ತರುವಾಯದ ಪ್ರತಿಯೊಂದು ತ್ರೈಮಾಸಿಕಕ್ಕಾಗಿ ಅಂಥ ಕೊರತೆಯ ಮೇಲೆ, ಬ್ಯಾಂಕ್ ದರಕ್ಕೆ ಮಿಗಿಲಾಗಿ ವಾರ್ಷಿಕ ಶೇಕಡಾ ಐದರಷ್ಟು ದಂಡ ರೂಪದ ಬಡ್ಡಿಯನ್ನು ಬ್ಯಾಂಕಿಗೆ ಸಂದಾಯ ಮಾಡುವುದಕ್ಕೆ ಹೊಣೆಯಾಗಿರತಕ್ಕದ್ದು.

(4) (ಎ) (3)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡತಕ್ಕ ದಂಡ ರೂಪದ ಬಡ್ಡಿಯನ್ನು, ಬ್ಯಾಂಕು ಅದನ್ನು ಸಂದಾಯ ಮಾಡಬೇಕೆಂದು ಬ್ಯಾಂಕೇತರ ಹಣಕಾಸು ಕಂಪನಿಗೆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಹದಿನಾಲ್ಕು ದಿನಗಳ ಅವಧಿಯೊಳಗೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಅವಧಿಯೊಳಗೆ ಅದನ್ನು ಸಂದಾಯ ಮಾಡಲು ಬ್ಯಾಂಕೇತರ ಹಣಕಾಸು ಕಂಪನಿಯು ತಪ್ಪಿದ ಸಂದರ್ಭದಲ್ಲಿ, ತಪ್ಪಿತಸ್ಥ ಬ್ಯಾಂಕೇತರ ಹಣಕಾಸು ಕಂಪನಿಯ ಕಛೇರಿಯು ಇರುವ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ಪ್ರಧಾನ ಸಿವಿಲ್ ನ್ಯಾಯಾಲಯದ ನಿರ್ದೇಶನದಂತೆ ದಂಡವನ್ನು ಅಂಥ ಅವಧಿಯೊಳಗೆ ವಿಧಿಸಬಹುದು ಮತ್ತು ಅಂಥ ನಿರ್ದೇಶನವನ್ನು, ಬ್ಯಾಂಕು, ನ್ಯಾಯಾಲಯಕ್ಕೆ ಈ ಸಂಬಂಧವಾಗಿ ಅರ್ಜಿ ಸಲ್ಲಿಸಿದರೆ ಮಾತ್ರ ನೀಡತಕ್ಕದ್ದು; ಮತ್ತು

(ಬಿ) (ಎ) ಖಂಡದ ಮೇರೆಗೆ ನ್ಯಾಯಾಲಯವು ನಿರ್ದೇಶನವನ್ನು ನೀಡಿದಾಗ, ಅದು ಬ್ಯಾಂಕೇತರ ಹಣಕಾಸು ಕಂಪನಿಯು ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ದಿಷ್ಟಪಡಿಸಿ ಒಂದು ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪ್ರಮಾಣಪತ್ರವನ್ನು, ಅದು ಒಂದು ದಾವೆಯ ಸಂದರ್ಭದಲ್ಲಿ ನ್ಯಾಯಾಲಯವು ಮಾಡಿದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಜಾರಿಯಾಗತಕ್ಕದ್ದು.

(5) ಈ ಪ್ರಕರಣದಲ್ಲಿ ಏನೇ ಇದ್ದರೂ, ತಪ್ಪಿತಸ್ಥ ಬ್ಯಾಂಕೇತರ ಹಣಕಾಸು ಕಂಪನಿಯು (1)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದ್ದಕ್ಕೆ ಸಾಕಷ್ಟು ಕಾರಣಗಳಿದ್ದವೆಂದು ಬ್ಯಾಂಕಿಗೆ ಮನದಟ್ಟಾದರೆ, ಅದು ದಂಡರೂಪ ಬಡ್ಡಿಯನ್ನು ಸಂದಾಯ ಮಾಡುವಂತೆ ತಗಾದೆ ಮಾಡದಿರಬಹುದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(i) "ಅನುಮೋದಿತ ಭದ್ರತೆಗಳು" ಎಂದರೆ, ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಭದ್ರತೆಗಳು ಮತ್ತು ಯಾವ ಬಾಂಡುಗಳ ಅಸಲು ಮತ್ತು ಅದರ ಮೇಲಿನ ಬಡ್ಡಿ ಇವೆರಡಕ್ಕೂ ಅಂಥ ಯಾವುದೇ ಸರ್ಕಾರವು ಪೂರ್ಣವಾಗಿ ಮತ್ತು ಷರತ್ತು ರಹಿತವಾಗಿ ಖಾತರಿ ನೀಡುವುದೋ ಅಂಥ ಬಾಂಡುಗಳು;

(ii) "ಪೂರ್ವಾಧಿಯಿಲ್ಲದ ಅನುಮೋದಿತ ಭದ್ರತೆಗಳು" ಎಂಬುದರಲ್ಲಿ ಮುಂಗಡವಾಗಿ ಒಂದು ಬ್ಯಾಂಕೇತರ ಹಣಕಾಸು ಕಂಪನಿಯು, ಯಾವ ಅನುಮೋದಿತ ಭದ್ರತೆಗಳಿಗೆ ಪ್ರತಿಯಾಗಿ ಹಣ ಪಡೆಯದಿರುವಷ್ಟು ಮಟ್ಟಿಗೆ ಅಥವಾ ಉಪಯೋಗಿಸದಿರುವಷ್ಟು ಮಟ್ಟಿಗೆ ಅಥವಾ ಯಾವುದೇ ರೀತಿಯಲ್ಲಿ ಪೂರ್ವಾಧಿಗೆ ಒಳಪಡದಿರುವಷ್ಟರಮಟ್ಟಿಗೆ ಅವುಗಳನ್ನು ಬೇರೊಂದು ಸಂಸ್ಥೆಯಲ್ಲಿ ಮುಂಗಡಕ್ಕಾಗಿ ಅಥವಾ ಬೇರೆ ಯಾವುದೇ ವ್ಯವಸ್ಥೆಗಾಗಿ ಇಡುವುದೋ ಅಂಥ ಯಾವುದೇ ಅನುಮೋದಿತ ಭದ್ರತೆಗಳನ್ನು ಒಳಗೊಳ್ಳುತ್ತದೆ.

(iii) "ತ್ರೈಮಾಸಿಕ" ಎಂದರೆ, ಮಾರ್ಚ್, ಜೂನ್, ಸೆಪ್ಟೆಂಬರ್ ಅಥವಾ ಡಿಸೆಂಬರ್ ತಿಂಗಳ ಕೊನೆಯ ದಿನದಂದು ಮುಕ್ತಾಯಗೊಳ್ಳುವ ಮೂರು ತಿಂಗಳ ಅವಧಿ.

**45–ಐಸಿ ಮೀಸಲು ನಿಧಿ.–** (1) ಪ್ರತಿಯೊಂದು ಬ್ಯಾಂಕೇತರ ಹಣಕಾಸು ಕಂಪನಿಯು ಮೀಸಲು ನಿಧಿಯೊಂದನ್ನು ಸ್ಥಾಪಿಸತಕ್ಕದ್ದು ಮತ್ತು ಯಾವುದೇ ಲಾಭಾಂಶವನ್ನು ಘೋಷಿಸುವುದಕ್ಕೆ ಮೊದಲು ಯಾವುದೇ ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಪ್ರಕಟವಾಗುವ ಪ್ರತಿವರ್ಷದ ತನ್ನ ನಿವ್ವಳ ಲಾಭದ ಶೇ. ಇಪ್ಪತ್ತಕ್ಕಿಂತ ಕಡಿಮೆ ಇಲ್ಲದಷ್ಟು ಮೊತ್ತವನ್ನು ಆ ನಿಧಿಗೆ ವರ್ಗಾಯಿಸತಕ್ಕದ್ದು.

(2) ಬ್ಯಾಂಕು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಉದ್ದೇಶಗಳಿಗಾಗಿ ಹೊರತು, ಮೀಸಲು ನಿಧಿಯಿಂದ ಯಾವುದೇ ಮೊತ್ತವನ್ನು ಬ್ಯಾಂಕೇತರ ಹಣಕಾಸು ಕಂಪನಿಯು ವಿನಿಯೋಗಿಸತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಂದು ವಿನಿಯೋಗದ ಬಗ್ಗೆ, ಹಣವನ್ನು ತೆಗೆದುಕೊಂಡ ದಿನಾಂಕದಿಂದ ಇಪ್ಪತ್ತೊಂದು ದಿವಸಗಳೊಳಗಾಗಿ ಬ್ಯಾಂಕಿಗೆ ಆ ಕುರಿತು ವರದಿ ಮಾಡತಕ್ಕದ್ದು:

ಪರಂತು, ಯಾವುದೇ ವಿಶೇಷ ಸಂದರ್ಭದಲ್ಲಿ ಬ್ಯಾಂಕು ಸಾಕಷ್ಟು ಕಾರಣಗಳನ್ನು ತೋರಿಸಿ, ಇಪ್ಪತ್ತೊಂದು ದಿನಗಳ ಅವಧಿಯನ್ನು ತಾನು (ಬ್ಯಾಂಕು) ಸೂಕ್ತವೆಂದು ಆಲೋಚಿಸುವಂಥ ಇನ್ನಷ್ಟು ಅವಧಿಯವರೆಗೆ ವಿಸ್ತರಿಸಬಹುದು ಅಥವಾ ಅಂಥ ವರದಿಯನ್ನು ಮಾಡುವಲ್ಲಿ ಉಂಟಾಗುವ ಯಾವುದೇ ವಿಳಂಬವನ್ನು ಮಾಫಿ ಮಾಡಬಹುದು.

(3) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು, ಬ್ಯಾಂಕಿನ ಶಿಫಾರಸಿನ ಮೇಲೆ ಮತ್ತು ಬ್ಯಾಂಕೇತರ ಹಣಕಾಸು ಕಂಪನಿಯ ತೇವಣಿ ಬಾಧ್ಯತೆಗಳಿಗೆ ಸಂಬಂಧಿಸಿದಂತೆ ಅದರ ಸಂದಾಯಿತ ಬಂಡವಾಳ ಮತ್ತು ಮೀಸಲು ನಿಧಿಯ ಪರ್ಯಾಪ್ತತೆಯನ್ನು ಗಮನದಲ್ಲಿಟ್ಟುಕೊಂಡು, ಲಿಖಿತ ಆದೇಶದ ಮೂಲಕ, (1)ನೇ ಉಪಪ್ರಕರಣದ ಉಪಬಂಧಗಳು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಬ್ಯಾಂಕೇತರ ಹಣಕಾಸು ಕಂಪನಿಗೆ ಅನ್ವಯವಾಗತಕ್ಕದ್ದಲ್ಲ ಎಂದು ಘೋಷಿಸಬಹುದು:

ಪರಂತು, (1)ನೇ ಉಪಪ್ರಕರಣದ ಮೇರೆಗಿನ ಮೀಸಲು ನಿಧಿಯ ಮೊಬಲಗು, ಷೇರು ಪ್ರೀಮಿಯಂ ಲೆಕ್ಕದಲ್ಲಿನ ಮೊಬಲಗಿನೊಂದಿಗೆ ಬ್ಯಾಂಕೇತರ ಹಣಕಾಸು ಕಂಪನಿಯ ಸಂದಾಯಿತ ಬಂಡವಾಳಕ್ಕಿಂತ ಕಡಿಮೆ ಇಲ್ಲದ ಹೊರತು ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**45ಜೆ. ಬ್ಯಾಂಕು, ಹಣದ ತೇವಣಿಗಳನ್ನು ಕೋರುವ ವಿವರಣ ಪತ್ರಿಕೆ ಅಥವಾ ಜಾಹೀರಾತನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದು.**- ಬ್ಯಾಂಕು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ತಾನು ಅವಶ್ಯವೆಂದು ಪರ್ಯಾಲೋಚಿಸಿದರೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ,-

(ಎ) ಸಾರ್ವಜನಿಕರಿಂದ ಹಣದ ತೇವಣಿಗಳನ್ನು ಕೋರುವ ಯಾವುದೇ ಪರಿಚಯ ಪತ್ರಿಕೆ ಅಥವಾ ಜಾಹೀರಾತನ್ನು ಬ್ಯಾಂಕೇತರ ಸಂಸ್ಥೆಯು ಹೊರಡಿಸುವುದನ್ನು ನಿಯಂತ್ರಿಸಬಹುದು ಮತ್ತು ನಿಷೇಧಿಸಬಹುದು; ಮತ್ತು

(ಬಿ) ನಿಷೇಧಿಸಿಲ್ಲದಿದ್ದರೆ, ಯಾವುದೇ ಅಂಥ ಪರಿಚಯ ಪತ್ರಿಕೆ ಅಥವಾ ಜಾಹೀರಾತು ಯಾವ ಷರತ್ತಿಗೊಳಪಟ್ಟಿರತಕ್ಕುದೋ ಆ ಷರತ್ತುಗಳನ್ನು ನಿರ್ದಿಷ್ಟಪಡಿಸಬಹುದು.

**45ಜೆಎ. ಕಾರ್ಯನೀತಿಯನ್ನು ನಿರ್ಧರಿಸಲು ಮತ್ತು ನಿರ್ದೇಶನಗಳನ್ನು ನೀಡಲು ಬ್ಯಾಂಕಿನ ಅಧಿಕಾರ.**- (1) ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಥವಾ ದೇಶದ ಹಣಕಾಸಿನ ವ್ಯವಸ್ಥೆಯನ್ನು ತನ್ನ ಅನುಕೂಲಕ್ಕಾಗಿ ನಿಯಂತ್ರಿಸಲು ಅಥವಾ ತೇವಣಿದಾರರ ಹಿತಾಸಕ್ತಿಗೆ ಹಾನಿಯಾಗುವ ರೀತಿಯಲ್ಲಿ ಅಥವಾ ಬ್ಯಾಂಕೇತರ ಹಣಕಾಸು ಕಂಪನಿಯ ಹಿತಾಸಕ್ತಿಗೆ ಪ್ರತಿಕೂಲವಾಗುವ ರೀತಿಯಲ್ಲಿ ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಯ ವ್ಯವಹಾರಗಳನ್ನು ನಡೆಸುತ್ತಿರುವುದನ್ನು ಪ್ರತಿಬಂಧಿಸಲು, ಹಾಗೆ ಮಾಡುವುದು ಅವಶ್ಯಕ ಅಥವಾ ವಿಹಿತವೆಂದು ಬ್ಯಾಂಕಿಗೆ ಮನದಟ್ಟಾದರೆ, ಅದು ಆದಾಯದ ಮನ್ನಣೆ, ಲೆಕ್ಕದ ಗುಣಮಟ್ಟಗಳು, ವಸೂಲಾಗದ ಮತ್ತು ಸಂದೇಹಾಸ್ಪದ ಸಾಲಗಳಿಗಾಗಿ ಯುಕ್ತ ವ್ಯವಸ್ಥೆಗಳನ್ನು ಮಾಡುವುದು, ಆಸ್ತಿಗಳ ಹಾನಿ ಮತ್ತು ಜಮಾ ಖರ್ಚಿನ ಬಾಬುಗಳಿಗಾಗಿ ಸಾಲ ಪರಿವರ್ತನೆ ಸೌಲಭ್ಯಗಳ ಮಹತ್ವದ ಆಧಾರದ ಮೇಲೆ ಬಂಡವಾಳ ಪರ್ಯಾಪ್ತತೆ - ಇವುಗಳಿಗೆ ಸಂಬಂಧಿಸಿದಂತೆ ಮತ್ತು ಸಂದರ್ಭಾನುಸಾರ ಬ್ಯಾಂಕೇತರ ಹಣಕಾಸು ಕಂಪನಿಯಿಂದ ಅಥವಾ

ಬ್ಯಾಂಕೇತರ ಹಣಕಾಸು ಕಂಪನಿಗಳ ವರ್ಗಗಳಿಂದ ಅಥವಾ ಸಾಮಾನ್ಯವಾಗಿ ಬ್ಯಾಂಕೇತರ ಹಣಕಾಸು ಕಂಪನಿಗಳಿಂದ ನಿಧಿಯ ನಿಯೋಜನೆಗೆ ಸಂಬಂಧಿಸಿದಂತೆ ಸಹ, ಅದು ಎಲ್ಲಾ ಅಥವಾ ಯಾವುದೇ ಹಣಕಾಸು ಕಂಪನಿಗೆ ಕಾರ್ಯನೀತಿಯನ್ನು ನಿರ್ಧರಿಸಬಹುದು ಮತ್ತು ನಿರ್ದೇಶನಗಳನ್ನು ನೀಡಬಹುದು ಮತ್ತು ಹಾಗೆ ನಿರ್ಧರಿಸಿದ ಕಾರ್ಯನೀತಿಯನ್ನು ಮತ್ತು ನೀಡಲಾದ ನಿರ್ದೇಶನಗಳನ್ನು ಅಂಥ ಬ್ಯಾಂಕೇತರ ಹಣಕಾಸು ಕಂಪನಿಗಳು ಅನುಸರಿಸಲು ಬದ್ಧವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನಿಹಿತವಾದ ಅಧಿಕಾರಿಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಬ್ಯಾಂಕು, ಸಾಮಾನ್ಯವಾಗಿ ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ ಅಥವಾ ವಿಶೇಷವಾಗಿ ಬ್ಯಾಂಕೇತರ ಹಣಕಾಸು ಕಂಪನಿಗಳ ಒಂದು ವರ್ಗಕ್ಕೆ ಅಥವಾ ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಗೆ ಈ ಮುಂದಿನವುಗಳ ಬಗ್ಗೆ ನಿರ್ದೇಶನಗಳನ್ನು ನೀಡಬಹುದು.

(ಎ) ಯಾವ ಉದ್ದೇಶಗಳಿಗಾಗಿ ಮುಂಗಡಗಳು ಅಥವಾ ಇತರ ನಿಧಿ ಆಧಾರಿತ ಅಥವಾ ನಿಧಿಯೇತರ ಆಧಾರಿತ ಸೌಲಭ್ಯಗಳನ್ನು ಒದಗಿಸಬಹುದಾಗಿಲ್ಲವೋ ಆ ಉದ್ದೇಶಗಳು; ಮತ್ತು

(ಬಿ) ಬ್ಯಾಂಕೇತರ ಹಣಕಾಸು ಕಂಪನಿಯ ಸಂದಾಯಿತ ಬಂಡವಾಳ, ಬ್ಯಾಂಕೇತರ ಹಣಕಾಸು ಕಂಪನಿಯ ಮೀಸಲು ನಿಧಿ ಮತ್ತು ಠೇವಣಿ ಹಾಗೂ ಇತರೆ ಸುಸಂಗತ ಪರಿಗಣನೆಗಳನ್ನು ಗಮನದಲ್ಲಿರಿಸಿಕೊಂಡು ಆ ಬ್ಯಾಂಕೇತರ ಹಣಕಾಸು ಕಂಪನಿಯು, ಯಾರೇ ವ್ಯಕ್ತಿಗೆ ಅಥವಾ ಒಂದು ಕಂಪನಿಗೆ ಅಥವಾ ಕಂಪನಿಗಳ ಒಂದು ಸಮೂಹಕ್ಕೆ ಕೊಡಬಹುದಾದ ಮುಂಗಡಗಳ ಅಥವಾ ಇತರ ಹಣಕಾಸು ಸೌಲಭ್ಯಗಳ ಅಥವಾ ಷೇರುಗಳಲ್ಲಿ ಅಥವಾ ಇತರೆ ಭದ್ರತೆಗಳಲ್ಲಿ ಹೂಡಬಹುದಾದ ಗರಿಷ್ಠ ಮೊಬಲಗು.

**45ಕೆ. ಠೇವಣಿಗಳ ಬಗ್ಗೆ ಬ್ಯಾಂಕೇತರ ಸಂಸ್ಥೆಗಳಿಂದ ಮಾಹಿತಿಯನ್ನು ಸಂಗ್ರಹಿಸಲು ಮತ್ತು ನಿರ್ದೇಶನಗಳನ್ನು ಕೊಡಲು ಬ್ಯಾಂಕಿನ ಅಧಿಕಾರ.**- (1) ಬ್ಯಾಂಕು, ಯಾವುದೇ ಕಾಲದಲ್ಲಿ ಬ್ಯಾಂಕೇತರ ಪ್ರತಿಯೊಂದು ಸಂಸ್ಥೆಯು ಬ್ಯಾಂಕಿಗೆ, ಬ್ಯಾಂಕು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಬ್ಯಾಂಕೇತರ ಸಂಸ್ಥೆಗಳು ಸ್ವೀಕರಿಸಿದ ಠೇವಣಿಗಳಿಗೆ ಸಂಬಂಧಪಟ್ಟಂತೆ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಅಂಥ ವಿವರಪತ್ರಗಳು, ಮಾಹಿತಿ ಅಥವಾ ವಿವರಗಳನ್ನು, ಅಂಥ ನಮೂನೆಯಲ್ಲಿ, ಅಂಥ ಮಧ್ಯಂತರಗಳಲ್ಲಿ ಮತ್ತು ಅಂಥ ಕಾಲದೊಳಗೆ ಒದಗಿಸತಕ್ಕುದೆಂದು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಬ್ಯಾಂಕಿನಲ್ಲಿ ನಿಹಿತವಾಗಿರುವ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, (1)ನೇ ಉಪಪ್ರಕರಣದ ಮೇರೆಗೆ ಒದಗಿಸಬೇಕಾದ ವಿವರಪತ್ರಗಳು ಮಾಹಿತಿ ಅಥವಾ ವಿವರಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಸಂಬಂಧಪಡಬಹುದು, ಎಂದರೆ, ಆ ಠೇವಣಿಗಳ ಮೊಬಲಗು, ಅವುಗಳನ್ನು ಯಾವ ಉದ್ದೇಶಗಳಿಗಾಗಿ ಮತ್ತು ಅವಧಿಗಳಿಗಾಗಿ ಸ್ವೀಕರಿಸಲಾಗಿದೆಯೋ ಮತ್ತು ಯಾವ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅವುಗಳನ್ನು ಸ್ವೀಕರಿಸಲಾಗಿದೆಯೋ ಆ ಉದ್ದೇಶಗಳು ಮತ್ತು ಅವಧಿಗಳು ಮತ್ತು ನಿಬಂಧನೆಗಳು ಮತ್ತು ಷರತ್ತುಗಳು.

(3) ಬ್ಯಾಂಕು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯವೆಂದು ಅದು ಪರ್ಯಾಲೋಚಿಸಿದರೆ, ಬ್ಯಾಂಕೇತರ ಸಂಸ್ಥೆಗಳಿಗೆ ಸಾಮಾನ್ಯವಾಗಿಯೇ ಆಗಲಿ ಅಥವಾ ಯಾವುದೇ ಬ್ಯಾಂಕೇತರ ಸಂಸ್ಥೆ ಅಥವಾ ಬ್ಯಾಂಕೇತರ ಸಂಸ್ಥೆಗಳ ಗುಂಪಿಗೆ, ವಿಶೇಷವಾಗಿ ಠೇವಣಿಗಳ ಮೇಲೆ ಸಂದಾಯ ಮಾಡಬೇಕಾದ ಬಡ್ಡಿಯ ದರಗಳು ಮತ್ತು ಠೇವಣಿಗಳನ್ನು ಸ್ವೀಕರಿಸಬಹುದಾದಂಥ

ಅವಧಿಗಳನ್ನು ಒಳಗೊಂಡು ಅಂಥ ಠೇವಣಿಗಳನ್ನು ಸ್ವೀಕರಿಸುವುದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ದೇಶನಗಳನ್ನು ಕೊಡಬಹುದು.

(4) ಯಾವುದೇ ಬ್ಯಾಂಕೇತರ ಸಂಸ್ಥೆಯು (3)ನೇ ಉಪಪ್ರಕರಣದ ಮೇರೆಗೆ ಬ್ಯಾಂಕು ಕೊಟ್ಟ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ, ಬ್ಯಾಂಕು ಆ ಬ್ಯಾಂಕೇತರ ಸಂಸ್ಥೆಯು ಠೇವಣಿಗಳನ್ನು ಅಂಗೀಕರಿಸುವುದನ್ನು ನಿಷೇಧಿಸಬಹುದು.

(5) * * * *

(6) ಠೇವಣಿಗಳನ್ನು ಸ್ವೀಕರಿಸುವ ಪ್ರತಿಯೊಂದು ಬ್ಯಾಂಕೇತರ ಸಂಸ್ಥೆಯು, ಬ್ಯಾಂಕು ಹಾಗೆ ಅಗತ್ಯಪಡಿಸಿದರೆ ಮತ್ತು ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ, ಬ್ಯಾಂಕೇತರ ಸಂಸ್ಥೆಯ ಖರ್ಚಿನಲ್ಲಿ ಅದರ ವಾರ್ಷಿಕ ಜಮಾ ಖರ್ಚು ಪಟ್ಟಿಯನ್ನು ಮತ್ತು ಲಾಭ ಮತ್ತು ನಷ್ಟದ ಲೆಕ್ಕ ಅಥವಾ ಇತರ ವಾರ್ಷಿಕ ಲೆಕ್ಕಪತ್ರಗಳ ಪ್ರತಿಯನ್ನು ಯಾರಿಂದ ಆ ಬ್ಯಾಂಕೇತರ ಸಂಸ್ಥೆಯು ಆ ಲೆಕ್ಕಪತ್ರಗಳು ಸಂಬಂಧಪಡುವಂಥ ವರ್ಷದ ಕೊನೆಯ ದಿವಸದಂದು ಬ್ಯಾಂಕು ನಿರ್ದಿಷ್ಟಪಡಿಸಬಹುದಾದಂಥ ಮೊತ್ತಕ್ಕಿಂತ ಹೆಚ್ಚಿಗೆಯಾಗಿ ಠೇವಣಿಗಳನ್ನು ಧಾರಣ ಮಾಡಿರುತ್ತದೋ ಆ ಪ್ರತಿಯೊಬ್ಬ ವ್ಯಕ್ತಿಗೆ ಕಳುಹಿಸುವಂತೆ ಮಾಡತಕ್ಕದು.

**45ಎಲ್. ಹಣಕಾಸು ಸಂಸ್ಥೆಗಳಿಂದ ಮಾಹಿತಿಯನ್ನು ತರಿಸಿಕೊಳ್ಳಲು ಮತ್ತು ಅವುಗಳಿಗೆ ನಿರ್ದೇಶನಗಳನ್ನು ಕೊಡಲು ಬ್ಯಾಂಕಿನ ಅಧಿಕಾರ.**– (1) ಬ್ಯಾಂಕಿಗೆ, ದೇಶದ ಸಾಲದ ವ್ಯವಸ್ಥೆಯನ್ನು ಅದರ ಅನುಕೂಲಕ್ಕಾಗಿ ಹಾಗೆ ನಿಯಂತ್ರಿಸುವುದನ್ನು ಅದಕ್ಕೆ ಸಾಧ್ಯವಾಗಿಸುವ ಉದ್ದೇಶಕ್ಕಾಗಿ ಹಾಗೆ ಮಾಡುವುದು ಅವಶ್ಯವೆಂದು ಮನದಟ್ಟಾದರೆ, ಅದು –

(ಎ) ಸಾಮಾನ್ಯವಾಗಿ, ಹಣಕಾಸು ಸಂಸ್ಥೆಗಳನ್ನು ಅಥವಾ ವಿಶೇಷವಾಗಿ ಹಣಕಾಸು ಸಂಸ್ಥೆಗಳ ಯಾವುದೇ ಸಮೂಹ ಅಥವಾ ಹಣಕಾಸು ಸಂಸ್ಥೆಯನ್ನು, ಬ್ಯಾಂಕು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಹಣಕಾಸು ಸಂಸ್ಥೆಗಳ ಅಥವಾ ಸಂಸ್ಥೆಯ ವ್ಯವಹಾರಕ್ಕೆ ಸಂಬಂಧಪಟ್ಟಂಥ ವಿವರಪತ್ರಗಳು,ಮಾಹಿತಿ ಅಥವಾ ವಿವರಗಳನ್ನು, ಅಂಥ ನಮೂನೆಯಲ್ಲಿ, ಅಂಥ ಮಧ್ಯಂತರಗಳಲ್ಲಿ ಮತ್ತು ಅಂಥ ಕಾಲದೊಳಗೆ ಬ್ಯಾಂಕಿಗೆ ಒದಗಿಸಲು ಅಗತ್ಯಪಡಿಸಬಹುದು;

(ಬಿ) ಸಾಮಾನ್ಯವಾಗಿ, ಅಂಥ ಸಂಸ್ಥೆಗಳಿಗೆ ಅಥವಾ ವಿಶೇಷವಾಗಿ, ಯಾವುದೇ ಅಂಥ ಸಂಸ್ಥೆಗೆ ಹಣಕಾಸು ಸಂಸ್ಥೆಗಳಾಗಿ ಅಥವಾ ಸಂಸ್ಥೆಯಾಗಿ ಅವು ಅಥವಾ ಅದು ವ್ಯವಹಾರವನ್ನು ನಡೆಸುವುದಕ್ಕೆ ಸಂಬಂಧಪಟ್ಟ ನಿರ್ದೇಶನಗಳನ್ನು ಕೊಡಬಹುದು.

(2) (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಬ್ಯಾಂಕಿನಲ್ಲಿ ನಿಹಿತವಾಗಿರುವ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಒಂದು ಹಣಕಾಸು ಸಂಸ್ಥೆಯು ಒದಗಿಸಬೇಕಾದ ವಿವರಪತ್ರಗಳು, ಮಾಹಿತಿ ಅಥವಾ ವಿವರಗಳು, ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಸಂಬಂಧಪಡಬಹುದು, ಎಂದರೆ, ಸಂದಾಯ ಮಾಡಿದ ಬಂಡವಾಳ, ಮೀಸಲುಗಳು ಅಥವಾ ಇತರ ಹೊಣೆಗಾರಿಕೆಗಳು, ಸರ್ಕಾರಿ ಭದ್ರತಾಪತ್ರಗಳಲ್ಲಿ ಅಥವಾ ಅನ್ಯಥಾ ಹೂಡಿಕೆಗಳು, ಯಾವ ವ್ಯಕ್ತಿಗಳಿಗೆ ಮತ್ತು ಯಾವ ಉದ್ದೇಶಗಳಿಗಾಗಿ ಮತ್ತು ಅವಧಿಗಳಿಗಾಗಿ ಹಣಕಾಸನ್ನು ಒದಗಿಸಲಾಗಿದೆಯೋ ಆ ವ್ಯಕ್ತಿಗಳು ಮತ್ತು ಉದ್ದೇಶಗಳು ಮತ್ತು ಅವಧಿಗಳು ಮತ್ತು ಬಡ್ಡಿಯ ದರಗಳನ್ನು ಒಳಗೊಂಡು ಅದನ್ನು ಒದಗಿಸಿರುವಂಥ ನಿಬಂಧನೆಗಳು ಮತ್ತು ಷರತ್ತುಗಳು.

(3) (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಹಣಕಾಸು ಸಂಸ್ಥೆಗೆ ನಿರ್ದೇಶನಗಳನ್ನು ಕೊಡುವಲ್ಲಿ, ಬ್ಯಾಂಕು, ಯಾವ ಷರತ್ತುಗಳ ಮೇಲೆ ಮತ್ತು ಯಾವ

ಉದ್ದೇಶಗಳಿಗಾಗಿ ಆ ಸಂಸ್ಥೆಯನ್ನು ಸ್ಥಾಪಿಸಲಾಗಿದೆಯೋ ಆ ಷರತ್ತುಗಳು ಮತ್ತು ಉದ್ದೇಶಗಳು, ಅದರ ಶಾಸನಬದ್ಧ ಜವಾಬ್ದಾರಿಗಳು, ಯಾವುವಾದರೂ ಇದ್ದರೆ ಅವು ಮತ್ತು ಅಂಥ ಹಣಕಾಸು ಸಂಸ್ಥೆಯು ವ್ಯವಹಾರವು ಹಣ ಮತ್ತು ಬಂಡವಾಳ ಮಾರುಕಟ್ಟೆಗಳಲ್ಲಿನ ಪ್ರವೃತ್ತಿಯ ಮೇಲೆ ಬೀರುವ ಪರಿಣಾಮ ಇವುಗಳಿಗೆ ಯುಕ್ತ ಗಮನ ಕೊಡತಕ್ಕುದು.

**45ಎಂ. ಬ್ಯಾಂಕಿಗೆ ಅಗತ್ಯವಾದ ವಿವರಪತ್ರಗಳು ಮುಂತಾದವುಗಳನ್ನು ಒದಗಿಸಲು ಬ್ಯಾಂಕೇತರ ಸಂಸ್ಥೆಗಳ ಕರ್ತವ್ಯ.–** ಈ ಅಧ್ಯಾಯದ ಉಪಬಂಧಗಳ ಮೇರೆಗೆ ಕೋರಲಾದ ವಿವರಪತ್ರಗಳು, ಮಾಹಿತಿ, ಅಥವಾ ವಿವರಗಳನ್ನು ಒದಗಿಸುವುದು ಮತ್ತು ಅದಕ್ಕೆ ಕೊಟ್ಟ ಯಾವುದೇ ನಿರ್ದೇಶನಗಳನ್ನು ಪಾಲಿಸುವುದು ಪ್ರತಿಯೊಂದು ಬ್ಯಾಂಕೇತರ ಸಂಸ್ಥೆಯ ಕರ್ತವ್ಯವಾಗಿರತಕ್ಕುದು.

**45ಎಂಎ. ಲೆಕ್ಕ ಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಈ ಅಧ್ಯಾಯದ ಮೇರೆಗೆ ಒದಗಿಸಬೇಕೆಂದು ಅಗತ್ಯಪಡಿಸಿದಂತೆ, ಅದು ಸ್ವೀಕರಿಸಿದ ಠೇವಣಿಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಸಂಬಂಧಿಸಿದ ಅಂಥ ವಿವರಪತ್ರಗಳು, ಮಾಹಿತಿ ಅಥವಾ ವಿವರಗಳನ್ನು ಬ್ಯಾಂಕಿಗೆ ಬ್ಯಾಂಕೇತರ ಸಂಸ್ಥೆಯು ಒದಗಿಸಿದೆಯೋ ಅಥವಾ ಒದಗಿಸಿಲ್ಲವೋ ಹೇಗೆ ಎಂಬುದನ್ನು ವಿಚಾರಣೆ ಮಾಡುವುದು ಬ್ಯಾಂಕೇತರ ಸಂಸ್ಥೆಯ ಲೆಕ್ಕಪರಿಶೋಧಕನ ಕರ್ತವ್ಯವಾಗಿರತಕ್ಕುದು ಮತ್ತು ಲೆಕ್ಕ ಪರಿಶೋಧಕನು, ಅಂಥ ವಿಚಾರಣೆಯನ್ನು ಮಾಡಿದ ಮೇಲೆ ಆ ಬ್ಯಾಂಕೇತರ ಸಂಸ್ಥೆಯು ಅಂಥ ವಿವರಪತ್ರಗಳು, ಮಾಹಿತಿ ಅಥವಾ ವಿವರಗಳನ್ನು ಒಪ್ಪಿಸಿದೆ ಎಂದು ಅವನಿಗೆ ಮನದಟ್ಟಾಗಿರುವಲ್ಲಿ ಹೊರತು, ಆ ಬ್ಯಾಂಕೇತರ ಸಂಸ್ಥೆಯು ಧಾರಣಮಾಡಿರುವಂಥ ಠೇವಣಿಗಳ ಒಟ್ಟು ಮೊಬಲಗನ್ನು ಕೊಟ್ಟು ಬ್ಯಾಂಕಿಗೆ ವರದಿ ಮಾಡತಕ್ಕುದು.

(1ಎ) ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಥವಾ ಠೇವಣಿದಾರರ ಹಿತಾಸಕ್ತಿಯಲ್ಲಿ ಅಥವಾ ಲೆಕ್ಕ ಪುಸ್ತಕಗಳ ಸೂಕ್ತ ನಿರ್ಧರಣೆ ಉದ್ದೇಶಕ್ಕಾಗಿ ಜಮಾ ಖರ್ಚು ಪಟ್ಟಿ, ಲಾಭ ಮತ್ತು ನಷ್ಟದ ಲೆಕ್ಕ, ಲೆಕ್ಕ ಪುಸ್ತಕಗಳಲ್ಲಿ ಹೊಣೆಗಾರಿಕೆಗಳನ್ನು ಪ್ರಕಟಿಸುವುದು ಅಥವಾ ಇವುಗಳಿಗೆ ಸಂಬಂಧಿಸಿದಂಥ ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಗೆ ಅಥವಾ ಬ್ಯಾಂಕೇತರ ಹಣಕಾಸು ಕಂಪನಿಗಳ ಯಾವುದೇ ವರ್ಗಕ್ಕೆ ಅಥವಾ ಸಾಮಾನ್ಯವಾಗಿ ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ ಅಥವಾ ಅಂಥ ಬ್ಯಾಂಕೇತರ ಹಣಕಾಸು ಕಂಪನಿಯ ಅಥವಾ ಕಂಪನಿಗಳ ಲೆಕ್ಕಪರಿಶೋಧಕರಿಗೆ ನಿರ್ದೇಶನಗಳನ್ನು ನೀಡುವುದು ಅವಶ್ಯವೆಂದು ಬ್ಯಾಂಕಿಗೆ ಮನದಟ್ಟಾದರೆ ಬ್ಯಾಂಕು ಹಾಗೆ ಮಾಡಬಹುದು.

(2) ಬ್ಯಾಂಕೇತರ ಹಣಕಾಸು ಕಂಪನಿಯ ಸಂದರ್ಭದಲ್ಲಿ ಲೆಕ್ಕಪರಿಶೋಧಕನು (1)ನೇ ಉಪಪ್ರಕರಣದ ಮೇರೆಗೆ ಬ್ಯಾಂಕಿಗೆ ವರದಿಯನ್ನು ಮಾಡಿರುವಲ್ಲಿ, ಅಥವಾ ಮಾಡಲು ಉದ್ದೇಶಿಸಿರುವಲ್ಲಿ, ಅವನು ಕಂಪನಿಗಳ ಅಧಿನಿಯಮ, 1956 (1956ರ 1)ರ 227ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಅವನ ವರದಿಯಲ್ಲಿ ಬ್ಯಾಂಕಿಗೆ ಅವನು ಮಾಡಿರುವ ಅಥವಾ ಮಾಡಲು ಉದ್ದೇಶಿಸಿರುವಂಥ ವರದಿಯ ಒಳಾಂಶಗಳನ್ನು ಸೇರಿಸತಕ್ಕುದು.

(3) ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಥವಾ ಬ್ಯಾಂಕೇತರ ಹಣಕಾಸು ಕಂಪನಿಯ ಹಿತಾಸಕ್ತಿಯಲ್ಲಿ ಅಥವಾ ಅಂಥ ಕಂಪನಿಯ ಠೇವಣಿದಾರರ ಹಿತಾಸಕ್ತಿಯಲ್ಲಿ, ಅದು ಯಾವುದೇ ಸಮಯದಲ್ಲಿ, ಒಂದು ಆದೇಶದ ಮೂಲಕ, ಆ ಬ್ಯಾಂಕೇತರ ಹಣಕಾಸು ಕಂಪನಿಯ ಲೆಕ್ಕಗಳನ್ನು ಅಂಥ ಯಾವುದೇ ವಹಿವಾಟಿನ ಅಥವಾ ವಹಿವಾಟುಗಳ ವರ್ಗದ ಸಂಬಂಧದಲ್ಲಿ ಅಥವಾ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಅಥವಾ ಅವಧಿಗಳಿಗಾಗಿ ವಿಶೇಷ ಲೆಕ್ಕ ಪರಿಶೋಧನೆ ನಡೆಸುವುದು ಅವಶ್ಯವೆಂದು ಬ್ಯಾಂಕು ಅಭಿಪ್ರಾಯಪಟ್ಟಲ್ಲಿ, ಅದು ಹಾಗೆ ಮಾಡಬಹುದು ಮತ್ತು ಅಂಥ ವಿಶೇಷ ಲೆಕ್ಕಪರಿಶೋಧನೆಯನ್ನು ನಡೆಸುವುದಕ್ಕೆ ಬ್ಯಾಂಕು

ಲೆಕ್ಕಪರಿಶೋಧಕನನ್ನು ಅಥವಾ ಲೆಕ್ಕಪರಿಶೋಧಕರನ್ನು ನೇಮಿಸಬಹುದು ಮತ್ತು ವರದಿಯನ್ನು ತನಗೆ ಸಲ್ಲಿಸುವಂತೆ ಲೆಕ್ಕಪರಿಶೋಧಕನಿಗೆ ಅಥವಾ ಲೆಕ್ಕಪರಿಶೋಧಕರಿಗೆ ನಿರ್ದೇಶಿಸಬಹುದು.

(4) ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವ ಕೆಲಸದ ಸ್ವರೂಪ ಮತ್ತು ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು, ಬ್ಯಾಂಕು ಲೆಕ್ಕಪರಿಶೋಧಕರಿಗೆ ನಿಗದಿಪಡಿಸಬಹುದಾದ ಪರಿಶ್ರಮ ಧನವನ್ನು ಮತ್ತು ಲೆಕ್ಕಪರಿಶೋಧನೆ ಅಥವಾ ಅದಕ್ಕೆ ಪ್ರಾಸಂಗಿಕವಾದ ವೆಚ್ಚಗಳನ್ನು ಹಾಗೆ ಪರಿಶೋಧನೆಗೆ ಒಳಗಾದ ಬ್ಯಾಂಕೇತರ ಹಣಕಾಸು ಕಂಪನಿಯು ಭರಿಸತಕ್ಕದ್ದು.

**45ಎಂಬಿ. ಠೇವಣಿಗಳನ್ನು ಸ್ವೀಕರಿಸಲು ಮತ್ತು ಆಸ್ತಿಗಳ ಪರಭಾರೆಯನ್ನು ನಿಷೇಧಿಸಲು ಬ್ಯಾಂಕಿನ ಅಧಿಕಾರ.–** (1) ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಯು, ಯಾವುದೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ ಅಥವಾ ಬ್ಯಾಂಕು ಈ ಅಧ್ಯಾಯದ ಉಪಬಂಧಗಳ ಪೈಕಿ ಯಾವುದೇ ಉಪಬಂಧದ ಮೇರೆಗೆ ನೀಡಿದ ಯಾವುದೇ ನಿರ್ದೇಶನ ಅಥವಾ ಆದೇಶವನ್ನು ಪಾಲಿಸಲು ತಪ್ಪಿದರೆ, ಆ ಬ್ಯಾಂಕೇತರ ಹಣಕಾಸು ಕಂಪನಿಯು ಯಾವುದೇ ಠೇವಣಿ ಸ್ವೀಕರಿಸುವುದನ್ನು ಬ್ಯಾಂಕು ನಿಷೇಧಿಸಬಹುದು.

(2) ಯಾವುದೇ ಒಪ್ಪಂದ ಅಥವಾ ಲಿಖಿತ ಪತ್ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಬ್ಯಾಂಕು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಥವಾ ಠೇವಣಿದಾರರ ಹಿತಾಸಕ್ತಿಯಲ್ಲಿ, ಠೇವಣಿ ಸ್ವೀಕರಿಸುವುದನ್ನು ನಿಷೇಧಿಸಿ ಆದೇಶವನ್ನು ಯಾವ ಬ್ಯಾಂಕೇತರ ಹಣಕಾಸು ಕಂಪನಿಯ ವಿರುದ್ಧವಾಗಿ ಹೊರಡಿಸಲಾಗಿದೆಯೋ ಆ ಬ್ಯಾಂಕೇತರ ಹಣಕಾಸು ಕಂಪನಿಯು ತನ್ನ ಸ್ವತ್ತು ಮತ್ತು ಆಸ್ತಿಗಳನ್ನು ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ಆದೇಶದ ದಿನಾಂಕದಿಂದ ಆರು ತಿಂಗಳು ಮೀರದಂಥ ಅವಧಿಗೆ ಮಾರಾಟ, ವರ್ಗಾವಣೆ, ಋಣಭಾರ ಸೃಷ್ಟಿ ಅಥವಾ ಅಡಮಾನ ಅಥವಾ ಯಾವುದೇ ರೀತಿಯಲ್ಲಿ ವ್ಯವಹಾರ ಮಾಡದಂತೆ ನಿರ್ದೇಶಿಸುವುದು ಬ್ಯಾಂಕಿಗೆ ಮನದಟ್ಟಾದರೆ, ಅದು, ಹಾಗೆ ಮಾಡಬಹುದು.

**45ಎಂಸಿ. ಪರಿಸಮಾಪನ ಅರ್ಜಿ ಸಲ್ಲಿಸಲು ಬ್ಯಾಂಕಿನ ಅಧಿಕಾರ.–** (1) ಒಂದು ಬ್ಯಾಂಕೇತರ ಹಣಕಾಸು ಕಂಪನಿಯು,–

(ಎ) ತನ್ನ ಸಾಲಗಳನ್ನು ಸಂದಾಯ ಮಾಡಲು ಅಸಮರ್ಥವಾಗಿದೆ; ಅಥವಾ

(ಬಿ) 45-1ಎ ಪ್ರಕರಣದ ಉಪಬಂಧಗಳ ಕಾರಣದಿಂದಾಗಿ ಬ್ಯಾಂಕೇತರ ಹಣಕಾಸು ಕಂಪನಿಯ ವ್ಯವಹಾರವನ್ನು ನಡೆಸಲು ಅನರ್ಹಗೊಂಡಿದೆ; ಅಥವಾ

(ಸಿ) ಬ್ಯಾಂಕಿನ ಆದೇಶದ ಮೂಲಕ ಠೇವಣಿ ಸ್ವೀಕರಿಸುವುದನ್ನು ನಿಷೇಧಿಸಲಾಗಿದೆ ಮತ್ತು ಅಂಥ ಆದೇಶವು ಮೂರು ತಿಂಗಳಿಗೂ ಕಡಿಮೆ ಇಲ್ಲದ ಅವಧಿಯವರೆಗೆ ಜಾರಿಯಲ್ಲಿದೆ; ಅಥವಾ

(ಡಿ) ಬ್ಯಾಂಕೇತರ ಹಣಕಾಸು ಕಂಪನಿಯನ್ನು ಮುಂದುವರಿಸುವುದು ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಕಂಪನಿಯ ಠೇವಣಿದಾರರ ಹಿತಾಸಕ್ತಿಗೆ ಬಾಧಕವಾಗುತ್ತದೆ ಎಂಬುದಾಗಿ ಬ್ಯಾಂಕಿಗೆ ಮನದಟ್ಟಾದ ತರುವಾಯ

– ಅದು ಬ್ಯಾಂಕೇತರ ಹಣಕಾಸು ಕಂಪನಿಯನ್ನು ಕಂಪನಿಗಳ ಅಧಿನಿಯಮ, 1956ರ ಮೇರೆಗೆ ಪರಿಸಮಾಪನಕ್ಕಾಗಿ ಅರ್ಜಿ ಸಲ್ಲಿಸಬಹುದು.

(2) ಬ್ಯಾಂಕೇತರ ಹಣಕಾಸು ಕಂಪನಿಯು ತನ್ನ ಯಾವುದೇ ಕಛೇರಿ ಅಥವಾ ಶಾಖೆಯಲ್ಲಿ ಮಾಡಲಾದ ಯಾವುದೇ ಕಾನೂನುಸಮ್ಮತ ತಗಾದೆಯನ್ನು ಐದು ಕೆಲಸದ ದಿನಗಳೊಳಗೆ ಪೂರೈಸಲು ತಿರಸ್ಕರಿಸಿದರೆ ಅಥವಾ ತಪ್ಪಿದರೆ ಮತ್ತು ಅಂಥ ಕಂಪನಿಯು ತನ್ನ ಋಣಗಳನ್ನು ಸಂದಾಯ

ಮಾಡಲು ಅಸಮರ್ಥವಾಗಿದೆ ಎಂದು ಬ್ಯಾಂಕು ಲಿಖಿತದಲ್ಲಿ ಪ್ರಮಾಣೀಕರಿಸಿದರೆ, ಅದು ತನ್ನ ಋಣಗಳನ್ನು ಸಂದಾಯ ಮಾಡಲು ಅಸಮರ್ಥವಾಗಿದೆ ಎಂದು ಭಾವಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅರ್ಜಿಯ ಒಂದು ಪ್ರತಿಯನ್ನು ಬ್ಯಾಂಕು ಕಂಪನಿಗಳ ರಿಜಿಸ್ಟ್ರಾರರಿಗೆ ಕಳುಹಿಸತಕ್ಕದ್ದು.

(4) ಕಂಪನಿಯ ಪರಿಸಮಾಪನಕ್ಕೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 1956ರ ಎಲ್ಲ ಉಪಬಂಧಗಳು, ಬ್ಯಾಂಕು ಈ ಉಪಬಂಧದ ಮೇರೆಗೆ ಸಲ್ಲಿಸಿದ ಅರ್ಜಿಯ ಮೇಲೆ ಪ್ರಾರಂಭಿಸಲಾದ ಪರಿಸಮಾಪನ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು.

**45ಎನ್. ಪರಿಶೀಲನೆ.–** (1) ಬ್ಯಾಂಕು, ಯಾವುದೇ ಕಾಲದಲ್ಲಿ, ಅದರ ಒಬ್ಬ ಅಥವಾ ಅದಕ್ಕಿಂತ ಹೆಚ್ಚು ಅಧಿಕಾರಿಗಳು ಅಥವಾ ನೌಕರರು ಅಥವಾ ಇತರ ವ್ಯಕ್ತಿಗಳ ಮೂಲಕ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಪರಿಶೀಲನಾ ಪ್ರಾಧಿಕಾರಿ ಎಂದು ಉಲ್ಲೇಖಿಸಲಾಗಿದೆ) –

(i) ಬ್ಯಾಂಕಿಗೆ ಒದಗಿಸಿದ ಯಾವುದೇ ವಿವರಪತ್ರ, ಮಾಹಿತಿ ಅಥವಾ ವಿವರಗಳ ಸರಿತನ ಅಥವಾ ಪರಿಪೂರ್ಣತೆಯನ್ನು ಸರಿನೋಡುವ ಉದ್ದೇಶಗಳಿಗಾಗಿ ಅಥವಾ ಹಾಗೆ ಮಾಡಲು ಕೋರಿದ ಮೇಲೆ ಬ್ಯಾಂಕೇತರ ಸಂಸ್ಥೆಯು ಒದಗಿಸಲು ತಪ್ಪಿರುವಂಥ ಯಾವುದೇ ಮಾಹಿತಿ ಅಥವಾ ವಿವರಗಳನ್ನು ಪಡೆದುಕೊಳ್ಳುವ ಉದ್ದೇಶಕ್ಕಾಗಿ, ಹಣಕಾಸು ಸಂಸ್ಥೆಯನ್ನು ಒಳಗೊಂಡು ಯಾವುದೇ ಬ್ಯಾಂಕೇತರ ಸಂಸ್ಥೆಯ ಬಗ್ಗೆ; ಅಥವಾ

(ii) ಆ ಸಂಸ್ಥೆಯನ್ನು ಪರಿಶೀಲಿಸಲು ಬ್ಯಾಂಕು ಅವಶ್ಯ ಅಥವಾ ವಿಹಿತವೆಂದು ಪರ್ಯಾಲೋಚಿಸಿದರೆ, ಹಣಕಾಸು ಸಂಸ್ಥೆಯಾಗಿರುವ ಯಾವುದೇ ಬ್ಯಾಂಕೇತರ ಸಂಸ್ಥೆಯ ಬಗ್ಗೆ

– ಪರಿಶೀಲನೆಯನ್ನು ಮಾಡಿಸಬಹುದು.

(2) ತತ್ಕಾಲದಲ್ಲಿ ಬ್ಯಾಂಕೇತರ ಸಂಸ್ಥೆಯ ವ್ಯವಹಾರಗಳ ವ್ಯವಸ್ಥಾಪನೆಯನ್ನು ಹೊಂದಿರುವ ಯಾವುದೇ ಸಮಿತಿಯ ನಿರ್ದೇಶಕ ಅಥವಾ ಸದಸ್ಯ ಅಥವಾ ಅದರ ಇತರ ಅಧಿಕಾರಿ ಅಥವಾ ನೌಕರನು ಆ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಅವನ ಅಭಿರಕ್ಷೆ ಅಥವಾ ಅಧಿಕಾರದಲ್ಲಿ ಇರುವಂಥ ಎಲ್ಲಾ ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಆ ಪ್ರಾಧಿಕಾರಿಯು ಅವನನ್ನು ಅಗತ್ಯಪಡಿಸಬಹುದಾದಂತೆ ಆ ಸಂಸ್ಥೆಯು ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ವಿವರಪತ್ರಗಳು ಮತ್ತು ಮಾಹಿತಿಯನ್ನು ಒದಗಿಸುವುದು ಅವನ ಕರ್ತವ್ಯವಾಗಿರತಕ್ಕುದು.

(3) ಪರಿಶೀಲನಾ ಪ್ರಾಧಿಕಾರಿಯು, ಅದರ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಬ್ಯಾಂಕೇತರ ಸಂಸ್ಥೆಗಳ ವ್ಯವಹಾರಗಳ ವ್ಯವಸ್ಥಾಪನೆಯನ್ನು ತತ್ಕಾಲದಲ್ಲಿ ಹೊಂದಿರುವ ಯಾವುದೇ ಸಮಿತಿ ಅಥವಾ ನಿಕಾಯದ ಯಾವನೇ ನಿರ್ದೇಶಕ ಅಥವಾ ಇತರ ಅಧಿಕಾರಿ ಅಥವಾ ನೌಕರನನ್ನು ಪ್ರಮಾಣವಚನದ ಮೇಲೆ ಪರೀಕ್ಷಿಸಬಹುದು ಮತ್ತು ತದನುಸಾರವಾಗಿ ಪ್ರಮಾಣ ಮಾಡಿಸಬಹುದು.

**45ಎನ್ಎ. ಅಧಿಕೃತಗೊಳಿಸಿದ ವ್ಯಕ್ತಿಗಳು ಠೇವಣಿಗಳನ್ನು ಕೋರತಕ್ಕುದಲ್ಲ.–** ಯಾವನೇ ವ್ಯಕ್ತಿಯು ಯಾವುದೇ ಬ್ಯಾಂಕೇತರ ಸಂಸ್ಥೆಯ ಪರವಾಗಿ ಸಾರ್ವಜನಿಕರಿಂದ ಹಣದ ಠೇವಣಿಗಳನ್ನು ಯಾವುದೇ ವಿವರಪತ್ರ ಅಥವಾ ಜಾಹೀರಾತನ್ನು ಪ್ರಕಟಿಸುವ ಮೂಲಕವೇ ಆಗಲಿ ಅಥವಾ ಪ್ರಕಟಿಸುವಂತೆ ಮಾಡುವ ಮೂಲಕವಾಗಿಯೇ ಆಗಲಿ ಅಥವಾ ಯಾವುದೇ ಇತರ ರೀತಿಯಲ್ಲಿ –

(ಎ) ಹಾಗೆ ಮಾಡಲು ಸದರಿ ಬ್ಯಾಂಕೇತರ ಸಂಸ್ಥೆಯು ಬರಹದಲ್ಲಿ ಅವನನ್ನು ಅಧಿಕೃತಗೊಳಿಸಿದ್ದ ಮತ್ತು ಅವನನ್ನು ಹಾಗೆ ಅಧಿಕೃತಗೊಳಿಸಿರುವಂಥ ಸಂಸ್ಥೆಯ ಹೆಸರನ್ನು ನಿರ್ದಿಷ್ಟಪಡಿಸಿದ್ದ ಹೊರತು, ಮತ್ತು

(ಬಿ) 45ಜೆ ಪ್ರಕರಣದ ಮೇರೆಗೆ ಬ್ಯಾಂಕು ಮಾಡಿದ ಯಾವುದೇ ಆದೇಶವನ್ನು ಮತ್ತು ಪರಿಚಯಪತ್ರ ಮತ್ತು ಜಾಹೀರಾತಿನ ಪ್ರಕಟಣೆಗೆ ಅನ್ವಯವಾಗಬಹುದಾದ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಯಾವುದೇ ಇತರ ಉಪಬಂಧವನ್ನು ಅಂಥ ಪರಿಚಯಪತ್ರ ಅಥವಾ ಜಾಹಿರಾತು ಪಾಲಿಸಿದ್ದ ಹೊರತು

– ಕೋರತಕ್ಕುದಲ್ಲ.

**45ಎನ್‌ಬಿ. ಮಾಹಿತಿ ಬಹಿರಂಗಪಡಿಸುವುದು.**– (1) ಬ್ಯಾಂಕೇತರ ಹಣಕಾಸು ಕಂಪನಿಗೆ ಸಂಬಂಧಿಸಿದ ಯಾವುದೇ ಮಾಹಿತಿಯು,–

(i) ಅಂಥ ಕಂಪನಿಯು, ಈ ಅಧ್ಯಾಯದ ಉಪಬಂಧಗಳ ಮೇರೆಗೆ ಸಲ್ಲಿಸಿದ ಯಾವುದೇ ವಿವರಣೆ ಅಥವಾ ವಿವರಪಟ್ಟಿಕೆಯಲ್ಲಿ ಒಳಗೊಂಡಿದ್ದರೆ; ಅಥವಾ

(ii) ಅದನ್ನು ಬ್ಯಾಂಕು ಲೆಕ್ಕಪರಿಶೋಧನೆ ಅಥವಾ ತಪಾಸಣೆ ಅಥವಾ ಅನ್ಯಥಾ ಪಡೆದುಕೊಂಡಿದ್ದರೆ

– ಅದನ್ನು ಗೋಪ್ಯವೆಂದು ಪರಿಗಣಿಸತಕ್ಕದ್ದು ಮತ್ತು ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು ಅದನ್ನು ಬಹಿರಂಗಪಡಿಸತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವ ಯಾವುದೂ–

(ಎ) ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಯು (1)ನೇ ಉಪಪ್ರಕರಣದ ಮೇರೆಗೆ ಬ್ಯಾಂಕಿಗೆ ಒದಗಿಸಿದ ಯಾವುದೇ ಮಾಹಿತಿಯನ್ನು ಬ್ಯಾಂಕಿನ ಪೂರ್ವಾನುಮೋದನೆಯೊಂದಿಗೆ ಬಹಿರಂಗಪಡಿಸುವುದಕ್ಕೆ;

(ಬಿ) ಬ್ಯಾಂಕು, (1)ನೇ ಉಪಪ್ರಕರಣದ ಮೇರೆಗೆ ಸಂಗ್ರಹಿಸಿದ ಯಾವುದೇ ಮಾಹಿತಿಯನ್ನು ತಾನು ಸೂಕ್ತವೆಂದು ಆಲೋಚಿಸುವಂಥ ಕ್ರೋಡೀಕೃತ ನಮೂನೆಯಲ್ಲಿ, ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಯ ಅಥವಾ ಅದರಿಂದ ಸಾಲ ಪಡೆದವರ ಹೆಸರುಗಳನ್ನು ಪ್ರಕಟಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅವಶ್ಯವೆಂದು ಅದು ಪರಿಗಣಿಸಿದರೆ, ಹಾಗೆ ಪ್ರಕಟಿಸುವುದಕ್ಕೆ;

(ಸಿ) ಬ್ಯಾಂಕೇತರ ಹಣಕಾಸು ಕಂಪನಿಯು ಅಥವಾ ಬ್ಯಾಂಕು ಅಂಥ ಯಾವುದೇ ಮಾಹಿತಿಯನ್ನು ಬೇರೆ ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಗೆ ಅಥವಾ ಅಂಥ ಕಂಪನಿಗಳಲ್ಲಿ ರೂಢಿಯಲ್ಲಿರುವ ಯಾವುದೇ ಪದ್ಧತಿ ಅಥವಾ ವಾಡಿಕೆಗೆ ಅನುಸಾರವಾಗಿ ಅಥವಾ ಯಾವುದೇ ಇತರೆ ಕಾನೂನಿನ ಮೇರೆಗೆ ಅನುಮತಿಸಲಾದಂತೆ ಅಥವಾ ಅಗತ್ಯಪಡಿಸಲಾದಂತೆ ಬಹಿರಂಗಪಡಿಸುವುದಕ್ಕೆ ಅಥವಾ ಪ್ರಕಟಿಸುವುದಕ್ಕೆ

– ಅನ್ವಯವಾಗತಕ್ಕದ್ದಲ್ಲ:

ಪರಂತು, ಈ ಖಂಡದ ಮೇರೆಗೆ ಬ್ಯಾಂಕೇತರ ಹಣಕಾಸು ಕಂಪನಿಯು ಪಡೆದ ಯಾವುದೇ ಅಂಥ ಮಾಹಿತಿಯನ್ನು, ಅಂಥ ಕಂಪನಿಗಳಲ್ಲಿ ರೂಢಿಯಲ್ಲಿರುವ ಯಾವುದೇ ಪದ್ಧತಿ ಅಥವಾ ವಾಡಿಕೆಗೆ ಅನುಸಾರವಾಗಿ ಹೊರತು ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅನುಮತಿಸಲಾದಂತೆ ಅಥವಾ ಅಗತ್ಯಪಡಿಸಲಾದಂತೆ ಹೊರತು, ಮಾಹಿತಿಯನ್ನು ಪ್ರಕಟಿಸತಕ್ಕದ್ದಲ್ಲ.

(3) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಬ್ಯಾಂಕು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಥವಾ ಠೇವಣಿದಾರರ ಅಥವಾ ಬ್ಯಾಂಕೇತರ ಹಣಕಾಸು ಕಂಪನಿಯ ಹಿತಾಸಕ್ತಿಯಲ್ಲಿ ಅಥವಾ ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಯ ವ್ಯವಹಾರಗಳು ಠೇವಣಿದಾರರ ಹಿತಾಸಕ್ತಿಗೆ ಹಾನಿಯಾಗುವ ರೀತಿಯಲ್ಲಿ ನಡೆಸುತ್ತಿರುವುದನ್ನು ಪ್ರತಿಬಂಧಿಸುವುದು ವಿಹಿತವೆಂದು ಅದಕ್ಕೆ ಮನದಟ್ಟಾದರೆ, ಅದು ತಾನಾಗಿಯೇ ಅಥವಾ ಕೋರಿಕೆಯ ಮೇಲೆ ಬ್ಯಾಂಕೇತರ ಹಣಕಾಸು ಕಂಪನಿಯ ವ್ಯವಹಾರಗಳ ನಿರ್ವಹಣೆಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಯಾವುದೇ ಕಾನೂನಿನ ಮೇರೆಗೆ ರಚಿಸಲಾದ ಯಾವುದೇ ಪ್ರಾಧಿಕಾರಕ್ಕೆ ಒದಗಿಸಬಹುದು ಅಥವಾ ತಿಳಿಸಬಹುದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಈ ಅಧ್ಯಾಯದ ಯಾವುದೇ ಉಪಬಂಧಗಳ ಮೇರೆಗೆ ಬ್ಯಾಂಕು ಪಡೆದ ಯಾವುದೇ ವಿವರಣೆಯನ್ನು ಅಥವಾ ಇತರ ಸಾಮಗ್ರಿಗಳನ್ನು ಹಾಜರುಪಡಿಸುವಂತೆ ಅಥವಾ ಪರಿಶೀಲನೆಗೆ ಒಳಪಡಿಸುವಂತೆ ಬ್ಯಾಂಕನ್ನು ಒತ್ತಾಯಪಡಿಸತಕ್ಕದ್ದಲ್ಲ.

**45ಎನ್‌ಸಿ. ವಿನಾಯಿತಿ ನೀಡಲು ಬ್ಯಾಂಕಿನ ಅಧಿಕಾರ.–** ಬ್ಯಾಂಕು, ಈ ಅಧ್ಯಾಯದ ಯಾವುದೇ ಅಥವಾ ಎಲ್ಲ ಉಪಬಂಧಗಳು, ಬ್ಯಾಂಕೇತರ ಸಂಸ್ಥೆಗೆ ಅಥವಾ ಬ್ಯಾಂಕೇತರ ಸಂಸ್ಥೆಗಳ ವರ್ಗಕ್ಕೆ ಅಥವಾ ಬ್ಯಾಂಕೇತರ ಹಣಕಾಸು ಕಂಪನಿಗೆ ಅಥವಾ ಬ್ಯಾಂಕೇತರ ಹಣಕಾಸು ಕಂಪನಿಗಳ ವರ್ಗಕ್ಕೆ, ಸಾಮಾನ್ಯವಾಗಿ ಅಥವಾ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ವಿಧಿಸುವುದು ಮತ್ತು ತಾನು ಯೋಗ್ಯವೆಂದು ಆಲೋಚಿಸುವಂಥ ಷರತ್ತುಗಳಿಗೆ, ಪರಿಮಿತಿಗಳಿಗೆ ಅಥವಾ ನಿರ್ಬಂಧಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದಲ್ಲವೆಂದು ಘೋಷಿಸುವುದು ಅವಶ್ಯವೆಂದು ಮನಗಂಡ ತರುವಾಯ, ಅದು ಗೆಜೆಟ್‌ನಲ್ಲಿ ಅಧಿಸೂಚನೆ ಮೂಲಕ ಹಾಗೆ ಮಾಡಬಹುದು.

**45ಒ.** **(ದಂಡನೆಗಳು)** ಭಾರತ ರಿಸರ್ವ್ ಬ್ಯಾಂಕು (ತಿದ್ದುಪಡಿ) ಅಧಿನಿಯಮ, 1974 (1974ರ 51)ರ 22ನೇ ಪ್ರಕರಣದ ಮೂಲಕ ನಿರಸನಗೊಡಿದೆ.

**45ಪಿ.** [***ಅಪರಾಧಗಳ ಸಂಜ್ಞೇಯತೆ***] ಅದೇ ಅಧಿನಿಯಮದ 22ನೇ ಪ್ರಕರಣದ ಮೂಲಕ ನಿರಸನಗೊಂಡಿದೆ.

**45ಕ್ಯೂ. IIIಬಿ ಅಧ್ಯಾಯವು ಇತರ ಕಾನೂನುಗಳನ್ನು ಅಧ್ಯಾರೋಹಿಸತಕ್ಕುದು.–** ಈ ಅಧ್ಯಾಯದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಅಂಥ ಯಾವುದೇ ಕಾನೂನಿನ ಕಾರಣದಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾಗಿರುವುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮವನ್ನು ಹೊಂದಿರತಕ್ಕುದು.

**45ಕ್ಯೂಎ. ಠೇವಣಿ ಮರುಸಂದಾಯವನ್ನು ಆದೇಶಿಸಲು ಕಂಪನಿ ಕಾನೂನು ಮಂಡಲಿಯ ಅಧಿಕಾರ.–** (1) ಬ್ಯಾಂಕೇತರ ಹಣಕಾಸು ಕಂಪನಿಯು ಅಂಗೀಕರಿಸಿದ ಪ್ರತಿಯೊಂದು ಠೇವಣಿಯನ್ನು ನವೀಕರಿಸಿದ ಹೊರತು, ಅಂಥ ಠೇವಣಿಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ಅವುಗಳನ್ನು ಮರುಸಂದಾಯ ಮಾಡತಕ್ಕದ್ದು.

(2) ಬ್ಯಾಂಕೇತರ ಹಣಕಾಸು ಕಂಪನಿಯು ಯಾವುದೇ ಠೇವಣಿ ಅಥವಾ ಅದರ ಭಾಗವನ್ನು ಅಂಥ ಠೇವಣಿಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ಮರುಸಂದಾಯ ಮಾಡಲು ತಪ್ಪಿದರೆ, ಕಂಪನಿಗಳ ಅಧಿನಿಯಮ, 1956 (1956ರ 1)ರ 10–ಬಿ ಪ್ರಕರಣದ ಮೇರೆಗೆ ರಚಿತವಾದ ಕಂಪನಿ ಕಾನೂನು ಮಂಡಳಿಯು, ತಾನಾಗಿಯೇ ಅಥವಾ ಠೇವಣಿದಾರನ ಅರ್ಜಿಯ

ಮೇಲೆ ಕಂಪನಿಯ ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡುವುದು ಅಥವಾ ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಂಥ ಠೇವಣಿಯನ್ನು ಅಥವಾ ಅದರ ಭಾಗವನ್ನು ಕೂಡಲೇ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಬ್ಯಾಂಕೇತರ ಹಣಕಾಸು ಕಂಪನಿಗೆ ನಿರ್ದೇಶಿಸುವುದು ಅವಶ್ಯವೆಂದು ಮನಗಂಡರೆ, ಅದು ಆದೇಶದ ಮೂಲಕ ಹಾಗೆ ಮಾಡಬಹುದು:

ಪರಂತು, ಕಂಪನಿ ಕಾನೂನು ಮಂಡಳಿಯು, ಈ ಉಪಪ್ರಕರಣದ ಮೇರೆಗೆ ಯಾವುದೇ ಆದೇಶ ಮಾಡುವುದಕ್ಕೆ ಮುಂಚೆ, ಬ್ಯಾಂಕೇತರ ಹಣಕಾಸು ಕಂಪನಿಗೆ ಮತ್ತು ಆ ವಿಷಯದಲ್ಲಿ ಆಸಕ್ತಿ ಹೊಂದಿರುವ ಇತರ ವ್ಯಕ್ತಿಗಳಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಬಹುದು.

**45ಕ್ಯೂಬಿ. ಠೇವಣಿದಾರರಿಂದ ನಾಮನಿರ್ದೇಶನ.-** (1) ಬ್ಯಾಂಕೇತರ ಸಂಸ್ಥೆಯು ಒಬ್ಬ ಅಥವಾ ಹೆಚ್ಚು ಜನರ ಠೇವಣಿ ಖಾತೆಯನ್ನು ಹೊಂದಿರುವಲ್ಲಿ, ಠೇವಣಿದಾರ ಅಥವಾ ಸಂದರ್ಭಾನುಸಾರ ಎಲ್ಲ ಠೇವಣಿದಾರರು ಒಟ್ಟಾಗಿ, ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರ 45 ಜಡ್‌ಎ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಂದ ನಿಗದಿಪಡಿಸಿದ ರೀತಿಯಲ್ಲಿ ಏಕಮಾತ್ರ ಠೇವಣಿದಾರನು ಮರಣಹೊಂದಿದ ಸಂದರ್ಭದಲ್ಲಿ ಅಥವಾ ಎಲ್ಲ ಠೇವಣಿದಾರರು ಮರಣಹೊಂದಿದ ಸಂದರ್ಭದಲ್ಲಿ, ಬ್ಯಾಂಕೇತರ ಸಂಸ್ಥೆಯು ಠೇವಣಿ ಮೊಬಲಗನ್ನು ಯಾರಿಗೆ ಹಿಂತಿರುಗಿಸಬೇಕೆಂಬುದಕ್ಕೆ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನಲ್ಲಿ ಅಥವಾ ಅಂಥ ಠೇವಣಿಯ ಸಂಬಂಧದಲ್ಲಿ ಮರಣ ಶಾಸನ ಸಂಬಂಧವಾದ ಅಥವಾ ಅನ್ಯಥಾ ಯಾವುದೇ ವ್ಯವಸ್ಥೆಯಲ್ಲಿ ಏನೇ ಇದ್ದರೂ, ನಾಮನಿರ್ದೇಶನವು ಯಾರೇ ವ್ಯಕ್ತಿಗೆ ಬ್ಯಾಂಕೇತರ ಸಂಸ್ಥೆಯಿಂದ ಠೇವಣಿ ಮೊಬಲಗನ್ನು ಸ್ವೀಕರಿಸುವ ಹಕ್ಕನ್ನು ನೀಡುವುದೆಂದು ತಾತ್ಪರ್ಯವಾಗುವಲ್ಲಿ, ನಾಮನಿರ್ದೇಶಿತನು ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರ 45 ಜಡ್‌ಎ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಂದ ನಿಯಮಿಸಲಾದ ರೀತಿಯಲ್ಲಿ ನಾಮನಿರ್ದೇಶನವನ್ನು ಮಾರ್ಪಾಟುಗೊಳಿಸಿದ ಅಥವಾ ರದ್ದುಪಡಿಸಿದ ಹೊರತು, ಏಕಮಾತ್ರ ಠೇವಣಿದಾರನು ಮರಣ ಹೊಂದಿದ ಮೇಲೆ ಅಥವಾ ಸಂದರ್ಭಾನುಸಾರ ಎಲ್ಲ ಠೇವಣಿದಾರರು ಮರಣ ಹೊಂದಿದ ಮೇಲೆ ಅಂಥ ಠೇವಣಿಗೆ ಸಂಬಂಧಿಸಿದಂತೆ ಇತರ ಎಲ್ಲಾ ವ್ಯಕ್ತಿಗಳನ್ನು ಹೊರತುಪಡಿಸಿ ಏಕಮಾತ್ರ ಠೇವಣಿದಾರನ ಅಥವಾ ಸಂದರ್ಭಾನುಸಾರ ಎಲ್ಲ ಠೇವಣಿದಾರರ ಎಲ್ಲ ಹಕ್ಕುಗಳಿಗೆ ಹಕ್ಕುಳ್ಳವನಾಗತಕ್ಕದ್ದು.

(3) ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ, ನಾಮನಿರ್ದೇಶನ ಮಾಡುವ ಠೇವಣಿದಾರನು, ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949ರ 45ಜಡ್‌ಎ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಂದ ನಿಯಮಿಸಲಾದ ರೀತಿಯಲ್ಲಿ ನಾಮನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವಲ್ಲಿ, ತಾನು ಮರಣಹೊಂದಿದ ಸಂದರ್ಭದಲ್ಲಿ, ಠೇವಣಿ ಮೊಬಲಗನ್ನು ಸ್ವೀಕರಿಸಲು ಯಾರೇ ವ್ಯಕ್ತಿಯನ್ನು ನೇಮಕ ಮಾಡುವುದು ಕಾನೂನುಸಮ್ಮತವಾಗತಕ್ಕದ್ದು.

(4) ಬ್ಯಾಂಕೇತರ ಸಂಸ್ಥೆಯು ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮಾಡಿದ ಸಂದಾಯವು, ಆ ಠೇವಣಿಗೆ ಸಂಬಂಧಿಸಿದಂತೆ ಆ ಬ್ಯಾಂಕೇತರ ಸಂಸ್ಥೆಯ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ವಿಮೋಚನೆಗೊಳಿಸಿದಂತಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಈ ಪ್ರಕರಣದ ಮೇರೆಗೆ ಯಾರಿಗೆ ಸಂದಾಯ ಮಾಡಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಯಾರೇ ವ್ಯಕ್ತಿಗೆ ಇರಬಹುದಾದ ಹಕ್ಕು ಅಥವಾ ಕ್ಲೇಮಿಗೆ ಬಾಧಕವಾಗತಕ್ಕದ್ದಲ್ಲ.

(5) ಬ್ಯಾಂಕೇತರ ಸಂಸ್ಥೆಯು, ಯಾರ ಹೆಸರಿನಲ್ಲಿ ಠೇವಣಿ ಹೊಂದಿದೆಯೋ ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ಹೊರತು, ಬೇರೆ ಯಾರೇ ವ್ಯಕ್ತಿಯ ಕ್ಲೇಮಿನ ನೋಟೀಸನ್ನು ಅದು ಸ್ವೀಕರಿಸಬೇಕಾಗಿಲ್ಲ ಅಥವಾ ಅಂಥ ನೋಟೀಸನ್ನು ಅದಕ್ಕೆ ಸ್ಪಷ್ಟವಾಗಿ ನೀಡಿದ್ದರೂ ಸಹ ಬ್ಯಾಂಕೇತರ ಸಂಸ್ಥೆಯು ಅದಕ್ಕೆ ಬದ್ಧವಾಗಿರತಕ್ಕದ್ದಲ್ಲ:

ಪರಂತು, ಅಂಥ ಠೇವಣಿಗೆ ಸಂಬಂಧಿಸಿದಂತೆ, ಸಕ್ಷಮ ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯವು ಮಾಡಿದ ಯಾವುದೇ ಡಿಕ್ರಿ, ಆದೇಶ, ಪ್ರಮಾಣಪತ್ರ ಅಥವಾ ಇತರ ಅಧಿಕಾರ ಪತ್ರವನ್ನು ಬ್ಯಾಂಕೇತರ ಸಂಸ್ಥೆಯ ಮುಂದೆ ಹಾಜರುಪಡಿಸಿದಲ್ಲಿ, ಆ ಬ್ಯಾಂಕೇತರ ಸಂಸ್ಥೆಯು ಅಂಥ ಡಿಕ್ರಿ, ಆದೇಶ, ಪ್ರಮಾಣಪತ್ರ ಅಥವಾ ಇತರ ಅಧಿಕಾರ ಪತ್ರವನ್ನು ಸೂಕ್ತವಾಗಿ ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ–III ಸಿ

## ನಿಗಮಿತವಾಗಿಲ್ಲದ ನಿಕಾಯಗಳಿಂದ ಠೇವಣಿಗಳ ಅಂಗೀಕಾರದ ಬಗ್ಗೆ ನಿಷೇಧ

**45ಆರ್. ಅರ್ಥವಿವರಣೆ.–** ಈ ಅಧ್ಯಾಯದಲ್ಲಿ ಉಪಯೋಗಿಸಿದ ಮತ್ತು IIIಬಿ ಅಧ್ಯಾಯದಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಅದರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರತಕ್ಕುದು.

**45ಎಸ್. ಕೆಲವು ಸಂದರ್ಭಗಳಲ್ಲಿ ಠೇವಣಿಗಳನ್ನು ಸ್ವೀಕರಿಸದಿರುವುದು.–** (1) ವ್ಯಕ್ತಿ ಅಥವಾ ಫರ್ಮು ಅಥವಾ ನಿಗಮಿತವಲ್ಲದ ವ್ಯಕ್ತಿಗಳ ಸಂಘವಾಗಿರುವ ಯಾರೇ ವ್ಯಕ್ತಿಯು–

(i) ಅವನ ಅಥವಾ ಅದರ ವ್ಯವಹಾರವು 45ಐ ಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಚಟುವಟಿಕೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಒಳಗೊಂಡಿದ್ದರೆ; ಅಥವಾ

(ii) ಅವನ ಅಥವಾ ಅದರ ಪ್ರಧಾನ ವ್ಯವಹಾರವು ಯಾವುದೇ ಯೋಜನೆ ಅಥವಾ ವ್ಯವಸ್ಥೆಯ ಮೇರೆಗೆ ಅಥವಾ ಬೇರೆ ಯಾವುದೇ ರೀತಿಯಲ್ಲಿ ಠೇವಣಿಗಳನ್ನು ಸ್ವೀಕರಿಸುವುದು ಅಥವಾ ಯಾವುದೇ ರೀತಿಯಲ್ಲಿ ಸಾಲ ನೀಡುವುದು ಆಗಿದ್ದರೆ–

– ಯಾವುದೇ ಠೇವಣಿಯನ್ನು ಅಂಗೀಕರಿಸತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಯಾರೇ ವ್ಯಕ್ತಿಯು ಸಾಲದ ರೂಪವಾಗಿ ಅವನ ಯಾರೇ ಸಂಬಂಧಿಯಿಂದ ಸ್ವೀಕರಿಸಿದ ಹಣಕ್ಕೆ ಅಥವಾ ಒಂದು ಫರ್ಮು ಅದರ ಯಾರೇ ಪಾಲುದಾರರ ಸಂಬಂಧಿಯಿಂದ ಅಥವಾ ಸಂಬಂಧಿಗಳಿಂದ ಸಾಲರೂಪವಾಗಿ ಸ್ವೀಕರಿಸಿದ ಹಣಕ್ಕೆ ಅನ್ವಯವಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು, 1997ರ ಏಪ್ರಿಲ್ 1ನೇ ದಿನಾಂಕದಂದು, (1)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಇರದ ಯಾವುದೇ ಠೇವಣಿಯನ್ನು ಹೊಂದಿದ್ದರೆ, ಅಂಥ ಠೇವಣಿಯನ್ನು ಅಂಥ ವ್ಯಕ್ತಿಯು, ಅಂಥ ಠೇವಣಿಯು ಮರುಸಂದಾಯ

ಬಾಕಿಯಾದ ನಂತರ ತತ್‌ಕ್ಷಣವೇ ಅಥವಾ ಅಂಥ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಒಳಗಾಗಿ, ಇದರಲ್ಲಿ ಯಾವುದು ಮುಂಚಿತವೋ ಆ ಅವಧಿಯೊಳಗೆ ಮರುಸಂದಾಯ ಮಾಡತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು ಬ್ಯಾಂಕಿಗೆ ಸಲ್ಲಿಸಿದ ಅರ್ಜಿಯ ಮೇಲೆ, ಅಂಥ ವ್ಯಕ್ತಿಯು ಠೇವಣಿಗಳ ಒಂದು ಭಾಗವನ್ನು ತನ್ನ ನಿಯಂತ್ರಣ ಮೀರಿದ ಕಾರಣಗಳಿಂದಾಗಿ ಮರುಸಂದಾಯ ಮಾಡಲು ಅಸಮರ್ಥನಾಗಿದ್ದಾನೆಂದು ಅಥವಾ ಅಂಥ ಮರುಸಂದಾಯವು ಅವನಿಗೆ ಅತಿ ಕಷ್ಟವಾಗುತ್ತದೆ ಎಂದು ಬ್ಯಾಂಕಿಗೆ ಮನದಟ್ಟಾದರೆ, ಅದು ಲಿಖಿತ ಆದೇಶದ ಮೂಲಕ, ಅಂಥ ಅವಧಿಯನ್ನು ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ, ಆದೇಶದಲ್ಲಿ ನಿರ್ದಿಷ್ಟಪಡಿಸ ಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ವಿಸ್ತರಿಸಬಹುದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು 1997ರ ಏಪ್ರಿಲ್ 1ನೇ ದಿನದಂದು ಮತ್ತು ಆ ದಿನದಿಂದ ಠೇವಣಿಯನ್ನು ಕೋರಿ ಯಾವುದೇ ನಮೂನೆಯಲ್ಲಿ ಯಾವುದೇ ಜಾಹಿರಾತನ್ನು ಹೊರಡಿಸತಕ್ಕದ್ದಲ್ಲ ಅಥವಾ ಹೊರಡಿಸುವಂತೆ ಮಾಡತಕ್ಕದ್ದಲ್ಲ.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಸಂಬಂಧಿಕನೆಂದು,-

(i) ಅವರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದರೆ; ಅಥವಾ

(ii) ಅವರು ಪತಿ - ಪತ್ನಿಯರಾಗಿದ್ದರೆ; ಅಥವಾ

(iii) ಒಬ್ಬರು ಇನ್ನೊಬ್ಬರಿಗೆ ಈ ಕೆಳಕಂಡ ಪಟ್ಟಿಯಲ್ಲಿ ಸೂಚಿಸಿದ ರೀತಿಯಲ್ಲಿ ಸಂಬಂಧಿಯಾಗಿದ್ದರೆ

- ಮಾತ್ರ ಭಾವಿಸತಕ್ಕದ್ದು.

*ಸಂಬಂಧಿಕರ ಪಟ್ಟಿ :*

1. ತಂದೆ
2. ತಾಯಿ (ಮಲತಾಯಿಯೂ ಸೇರಿ)
3. ಮಗ (ಮಲಮಗನೂ ಸೇರಿ)
4. ಮಗನ ಹೆಂಡತಿ
5. ಮಗಳು (ಮಲಮಗಳೂ ಸೇರಿ)
6. ತಂದೆಯ ತಂದೆ
7. ತಂದೆಯ ತಾಯಿ
8. ತಾಯಿಯ ತಾಯಿ
9. ತಾಯಿಯ ತಂದೆ
10. ಮಗನ ಮಗ
11. ಮಗನ ಮಗನ ಹೆಂಡತಿ
12. ಮಗನ ಮಗಳು
13. ಮಗನ ಮಗಳ ಗಂಡ

14. ಮಗಳ ಗಂಡ

15. ಮಗಳ ಮಗ

16. ಮಗಳ ಮಗನ ಹೆಂಡತಿ

17. ಮಗಳ ಮಗಳು

18. ಮಗಳ ಮಗಳ ಗಂಡ

19. ಸಹೋದರ (ಮಲ ಸಹೋದರನೂ ಸೇರಿ)

20. ಸಹೋದರನ ಹೆಂಡತಿ

21. ಸಹೋದರಿ (ಮಲಸಹೋದರಿಯೂ ಸೇರಿ)

22. ಸಹೋದರಿಯ ಗಂಡ.

**45ಟಿ. ಶೋಧನಾ ವಾರಂಟುಗಳನ್ನು ಹೊರಡಿಸುವ ಅಧಿಕಾರ.–** (1) ದಂಡ ಪ್ರಕ್ರಿಯಾ ಸಂಹಿತೆ, 1973 ರ ಮೇರೆಗೆ ಶೋಧನಾ ವಾರಂಟನ್ನು ಹೊರಡಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಯಾವುದೇ ನ್ಯಾಯಾಲಯವು 45ಎಸ್ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಠೇವಣಿಗಳನ್ನು ಅಂಗೀಕರಿಸುವುದಕ್ಕೆ ಸಂಬಂಧಪಟ್ಟ ಕೆಲವು ದಸ್ತಾವೇಜುಗಳನ್ನು ಅಂಥ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಯಾವುದೇ ಸ್ಥಳದಲ್ಲಿ ಬಚ್ಚಿಡಲಾಗಿದೆ ಎಂಬ ಅವನ ನಂಬಿಕೆಯನ್ನು ತೋರಿಸುವ ಬ್ಯಾಂಕಿನ ಅಥವಾ ಈ ಬಗ್ಗೆ ಅಧಿಕೃತಗೊಳಿಸಿದ ರಾಜ್ಯ ಸರ್ಕಾರದ ಅಧಿಕಾರಿಯು ಮಾಡಿಕೊಂಡ ಅರ್ಜಿಯ ಮೇಲೆ, ಅಂಥ ದಸ್ತಾವೇಜುಗಳಿಗಾಗಿ ಶೋಧನೆಮಾಡಲು ವಾರಂಟನ್ನು ಹೊರಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ವಾರಂಟನ್ನು ದಂಡಪ್ರಕ್ರಿಯಾ ಸಂಹಿತೆ, 1973ರ ಮೇರೆಗೆ ಹೊರಡಿಸಿದ ಶೋಧನಾ ವಾರಂಟಿನಂತೆ ಅದೇ ರೀತಿಯಲ್ಲಿ ಜಾರಿಗೊಳಿಸತಕ್ಕುದು ಮತ್ತು ಅದರಂಥದೇ ಪರಿಣಾಮವನ್ನು ಹೊಂದಿರತಕ್ಕುದು.

## ಅಧ್ಯಾಯ–IV

## ಸಾಮಾನ್ಯ ಉಪಬಂಧಗಳು

**46. ಮೀಸಲು ನಿಧಿಗೆ ಕೇಂದ್ರ ಸರ್ಕಾರದಿಂದ ವಂತಿಗೆ.–** ಕೇಂದ್ರ ಸರ್ಕಾರವು ಮೀಸಲು ನಿಧಿಗೆ ಬ್ಯಾಂಕು ಹಂಚಬೇಕಾದ ಐದು ಕೋಟಿ ರೂಪಾಯಿಗಳ ಮೌಲ್ಯದ ರೂಪಾಯಿ ಭದ್ರತಾಪತ್ರಗಳನ್ನು ಬ್ಯಾಂಕಿಗೆ ವರ್ಗಾವಣೆ ಮಾಡತಕ್ಕುದು.

**46ಎ. ರಾಷ್ಟ್ರೀಯ ಗ್ರಾಮೀಣ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳ) ನಿಧಿ ಮತ್ತು ರಾಷ್ಟ್ರೀಯ ಗ್ರಾಮೀಣ ಸಾಲ (ಸ್ಥಿರೀಕರಣ ನಿಧಿಗೆ) ವಂತಿಗೆ.–** ಬ್ಯಾಂಕು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿನ ರಾಷ್ಟ್ರೀಯ ಬ್ಯಾಂಕ್ ಅಧಿನಿಯಮ, 1981ರ ಅನುಕ್ರಮವಾಗಿ 42 ಮತ್ತು 43ನೇ ಪ್ರಕರಣಗಳ ಮೇರೆಗೆ ರಾಷ್ಟ್ರೀಯ ಬ್ಯಾಂಕು ಸ್ಥಾಪಿಸಿದ ಮತ್ತು ಇಟ್ಟುಕೊಂಡು ಬಂದಿರುವ ರಾಷ್ಟ್ರೀಯ ಗ್ರಾಮೀಣ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿ ಮತ್ತು ರಾಷ್ಟ್ರೀಯ ಗ್ರಾಮೀಣ ಸಾಲ (ಸ್ಥಿರೀಕರಣ ನಿಧಿ) ಇವುಗಳಿಗೆ ಹಾಗೆ ಮಾಡಲು ಅದು ಅವಶ್ಯ ಮತ್ತು ಸಾಧ್ಯವೆಂದು ಪರ್ಯಾಲೋಚಿಸ ಬಹುದಾದಂಥ ಮೊತ್ತಗಳನ್ನು ಪ್ರತಿವರ್ಷ ವಂತಿಗೆಯಾಗಿ ಕೊಡತಕ್ಕುದು.

**46ಬಿ.** * * *

**46ಸಿ. ರಾಷ್ಟ್ರೀಯ ಕೈಗಾರಿಕಾ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳ) ನಿಧಿ.**– (1) ಬ್ಯಾಂಕು, ರಾಷ್ಟ್ರೀಯ ಕೈಗಾರಿಕಾ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು) ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕುದು ಮತ್ತು ಅದನ್ನು ಇಟ್ಟುಕೊಂಡು ಬರತಕ್ಕುದು, ಅದಕ್ಕೆ–

(ಎ) ಬ್ಯಾಂಕು ಹತ್ತು ಕೋಟಿ ರೂಪಾಯಿಗಳ ಪ್ರಾರಂಭಿಕ ಮೊತ್ತವನ್ನು;

(ಬಿ) ಬ್ಯಾಂಕು ಪ್ರತಿವರ್ಷ ವಂತಿಗೆಯಾಗಿ ಕೊಡಬಹುದಾದಂಥ ಮತ್ತಷ್ಟು ಹಣದ ಮೊತ್ತಗಳನ್ನು

– ಜಮೆ ಮಾಡತಕ್ಕುದು:

ಪರಂತು, 1965ರ ಜೂನ್ 30ನೇ ದಿವಸದಂದು ಕೊನೆಗೊಳ್ಳುವ ವರ್ಷದಿಂದ ಪ್ರಾರಂಭವಾಗುವ ಪ್ರತಿ ಐದು ವರ್ಷಗಳ ಅವಧಿಯಲ್ಲಿನ ವಾರ್ಷಿಕ ವಂತಿಗೆಯು, ಐದು ಕೋಟಿ ರೂಪಾಯಿಗಳಿಗಿಂತ ಕಡಿಮೆ ಇರತಕ್ಕುದಲ್ಲ:

ಮತ್ತೂ ಪರಂತು, ಕೇಂದ್ರ ಸರ್ಕಾರವು, ಸಂದರ್ಭಗಳು ಹಾಗೆ ಅಗತ್ಯಪಡಿಸಿದರೆ, ಯಾವುದೇ ವರ್ಷದಲ್ಲಿ ಸದರಿ ಐದು ಕೋಟಿ ರೂಪಾಯಿಗಳ ಮೊತ್ತವನ್ನು ಇಳಿಸಲು ಬ್ಯಾಂಕಿಗೆ ಅಧಿಕಾರ ಕೊಡಬಹುದು.

(2) ಸದರಿ ನಿಧಿಯಲ್ಲಿನ ಮೊಬಲಗನ್ನು, ಈ ಕೆಳಕಂಡ ಉದ್ದೇಶಗಳಿಗಾಗಿ ಮಾತ್ರ ಬ್ಯಾಂಕು ವಿನಿಯೋಗಿಸಬಹುದು, ಎಂದರೆ:–

(ಎ) ಭಾರತ ಕೈಗಾರಿಕಾ ಹಣಕಾಸು ನಿಗಮ, ರಾಜ್ಯ ಹಣಕಾಸು ನಿಗಮ ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಯಾವುದೇ ಇತರ ಹಣಕಾಸು ಸಂಸ್ಥೆಯು ಹೊರಡಿಸಿದ ಸ್ಟಾಕುಗಳು, ಷೇರುಗಳು, ಬಂಧಪತ್ರಗಳು ಅಥವಾ ಡಿಬೆಂಚರುಗಳ ಖರೀದಿ ಅಥವಾ ಅವುಗಳಿಗೆ ಚಂದಾ ಕೊಡುವ ಉದ್ದೇಶಕ್ಕಾಗಿ, ಅಥವಾ ಅಭಿವೃದ್ಧಿ ಬ್ಯಾಂಕಿನ ಯಾವುದೇ ಇತರ ವ್ಯವಹಾರದ ಉದ್ದೇಶಗಳಿಗಾಗಿ ಸಾಲಗಳು ಮತ್ತು ಮುಂಗಡಗಳನ್ನು ಅಭಿವೃದ್ಧಿ ಬ್ಯಾಂಕಿಗೆ ಕೊಡುವುದು;

(ಬಿ) ಅಭಿವೃದ್ಧಿ ಬ್ಯಾಂಕು ಹೊರಡಿಸಿದ ಬಂಧಪತ್ರಗಳು ಮತ್ತು ಡಿಬೆಂಚರುಗಳನ್ನು ಖರೀದಿಸುವುದು;

(ಸಿ) ಎಕ್ಸಿಂ ಬ್ಯಾಂಕಿನ, ಪುನಾರಚನೆ ಬ್ಯಾಂಕಿನ ಅಥವಾ ಸಣ್ಣ ಕೈಗಾರಿಕೆಗಳ ಬ್ಯಾಂಕಿನ ಯಾವುದೇ ವ್ಯವಹಾರದ ಉದ್ದೇಶಕ್ಕಾಗಿ ಸಾಲಗಳು ಮತ್ತು ಮುಂಗಡಗಳನ್ನು ಎಕ್ಸಿಂ ಬ್ಯಾಂಕಿಗೆ, ಪುನಾರಚನೆ ಬ್ಯಾಂಕಿಗೆ ಅಥವಾ ಸಣ್ಣ ಕೈಗಾರಿಕೆಗಳ ಬ್ಯಾಂಕಿಗೆ ಕೊಡುವುದು;

(ಡಿ) ಎಕ್ಸಿಂ ಬ್ಯಾಂಕು, ಪುನಾರಚನೆ ಬ್ಯಾಂಕು ಅಥವಾ ಸಣ್ಣ ಕೈಗಾರಿಕೆಗಳ ಬ್ಯಾಂಕು ಹೊರಡಿಸಿದ ಬಾಂಡುಗಳು ಮತ್ತು ಡಿಬೆಂಚರುಗಳನ್ನು ಖರೀದಿಸುವುದು.

**46ಡಿ. ರಾಷ್ಟ್ರೀಯ ಗೃಹ ನಿರ್ಮಾಣ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿ.**– (1) ಬ್ಯಾಂಕು ರಾಷ್ಟ್ರೀಯ ಗೃಹ ನಿರ್ಮಾಣ ಸಾಲ (ದೀರ್ಘಾವಧಿ ಕಾರ್ಯಾಚರಣೆಗಳು) ನಿಧಿ ಎಂಬ ಹೆಸರಿನ ನಿಧಿಯೊಂದನ್ನು ಸ್ಥಾಪಿಸತಕ್ಕುದು ಮತ್ತು ನಿರ್ವಹಿಸಿಕೊಂಡು ಬರತಕ್ಕುದು ಮತ್ತು ಆ ನಿಧಿಗೆ ತಾನು ಅವಶ್ಯವೆಂದು ಪರ್ಯಾಲೋಚಿಸುವಷ್ಟು ಹಣದ ಮೊತ್ತವನ್ನು ಪ್ರತಿವರ್ಷ ಜಮೆ ಮಾಡತಕ್ಕುದು.

(2) ಸದರಿ ನಿಧಿಯಲ್ಲಿನ ಮೊಬಲಗನ್ನು ಬ್ಯಾಂಕು ಕೆಳಕಂಡ ಉದ್ದೇಶಗಳಿಗಾಗಿ ಎಂದರೆ:–

(ಎ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿನ ಯಾವುದೇ ವ್ಯವಹಾರದ ಉದ್ದೇಶಕ್ಕಾಗಿ, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕಿಗೆ ಸಾಲಗಳು ಮತ್ತು ಮುಂಗಡಗಳನ್ನು ನೀಡುವುದು;

(ಬಿ) ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕು ಹೊರಡಿಸಿದ ಬಾಂಡುಗಳು ಹಾಗೂ ಡಿಬೆಂಚರುಗಳನ್ನು ಖರೀದಿಸುವುದು

- ಇವುಗಳಿಗಾಗಿ ಬಳಸತಕ್ಕುದು.

**47. ಹೆಚ್ಚುವರಿ ಲಾಭಗಳ ಹಂಚಿಕೆ.–** ವಸೂಲಾಗದ ಮತ್ತು ಸಂದೇಹಾಸ್ಪದ ಸಾಲಗಳು, ಆಸ್ತಿಗಳಲ್ಲಿನ ಇಳಿತಾಯ, ಸಿಬ್ಬಂದಿಗೆ ಮತ್ತು ಸೇವಾ ನಿವೃತ್ತಿ ನಿಧಿಗಳಿಗೆ ವಂತಿಕೆಗಳು ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವ್ಯವಸ್ಥೆಯನ್ನು ಮಾಡಬೇಕಾಗಿರುವಂಥ ಅಥವಾ ಬ್ಯಾಂಕರುಗಳು ಸಾಮಾನ್ಯವಾಗಿ ವ್ಯವಸ್ಥೆ ಮಾಡುವಂಥ ಎಲ್ಲಾ ಇತರ ವಿಷಯಗಳಿಗಾಗಿ ವ್ಯವಸ್ಥೆಯನ್ನು ಮಾಡಿದ ತರುವಾಯ, ಲಾಭಗಳ ಶಿಲ್ಕನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡತಕ್ಕುದು.

**48. ಆದಾಯ ತೆರಿಗೆ ಮತ್ತು ಅಧಿತೆರಿಗೆಯಿಂದ ಬ್ಯಾಂಕುಗಳಿಗೆ ವಿನಾಯತಿ.–** (1) ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರಲ್ಲಿ ಅಥವಾ ಆದಾಯ ತೆರಿಗೆ ಅಥವಾ ಅಧಿತೆರಿಗೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಬ್ಯಾಂಕು ಅದರ ಯಾವುದೇ ಆದಾಯ, ಲಾಭಗಳು ಅಥವಾ ಗಳಿಕೆಗಳ ಮೇಲೆ ಆದಾಯ ತೆರಿಗೆ ಅಥವಾ ಅಧಿತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕುದಲ್ಲ.

* * * * * *

**49. ಬ್ಯಾಂಕು ದರದ ಪ್ರಕಟಣೆ.–** ಬ್ಯಾಂಕು, ಈ ಅಧಿನಿಯಮದ ಮೇರೆಗೆ ಅದು ಕೊಳ್ಳಲು ವಿನಿಮಯ ಪತ್ರಗಳು ಅಥವಾ ಖರೀದಿಗಾಗಿ ಅರ್ಹವಾದ ಇತರ ವಾಣಿಜ್ಯಪತ್ರದ ಮರುಮುಂಗಡ ಮುರಿಕೆಯನ್ನು ಮಾಡಿಕೊಳ್ಳಲು ಸಿದ್ಧವಾಗಿರುವಂಥ ನಿಗದಿತ ದರವನ್ನು ಕಾಲಕಾಲಕ್ಕೆ ಪ್ರಕಟಿಸತಕ್ಕುದು.

**50. ಲೆಕ್ಕಪರಿಶೋಧಕರು.–** (1) ಕೇಂದ್ರ ಸರ್ಕಾರವು, ಇಬ್ಬರಿಗಿಂತ ಕಡಿಮೆ ಇಲ್ಲದಂತೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡತಕ್ಕುದು ಮತ್ತು ಅವರ ಪರಿಶ್ರಮ ಧನವನ್ನು ನಿಗದಿಪಡಿಸತಕ್ಕುದು.

(2) ಲೆಕ್ಕಪರಿಶೋಧಕರು, ಅವರನ್ನು ನೇಮಕ ಮಾಡುವಾಗ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂತೆ ಒಂದು ವರ್ಷವನ್ನು ಮೀರದಷ್ಟು ಅವಧಿಯವರೆಗೆ ಪದಧಾರಣ ಮಾಡತಕ್ಕುದು ಮತ್ತು ಅವರು ಮರು ನೇಮಕಾತಿಗಾಗಿ ಅರ್ಹರಾಗಿರತಕ್ಕುದು.

**51. ಸರ್ಕಾರದಿಂದ ವಿಶೇಷ ಲೆಕ್ಕಪರಿಶೋಧಕರ ನೇಮಕಾತಿ.–** 50ನೇ ಪ್ರಕರಣದಲ್ಲಿ ಅಡಕವಾಗಿರುವ ಯಾವುದಕ್ಕೂ ಬಾಧಕವಾಗದಂತೆ ಕೇಂದ್ರ ಸರ್ಕಾರವು, ಯಾವುದೇ ಕಾಲದಲ್ಲಿ ಬ್ಯಾಂಕಿನ ಲೆಕ್ಕಪತ್ರಗಳನ್ನು ಪರೀಕ್ಷಿಸಲು ಮತ್ತು ಅದರ ಬಗ್ಗೆ ವರದಿ ಮಾಡಲು ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನನ್ನು ನೇಮಕ ಮಾಡಬಹುದು.

**52. ಲೆಕ್ಕಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಪ್ರತಿಯೊಬ್ಬ ಲೆಕ್ಕ ಪರಿಶೋಧಕನಿಗೆ ವಾರ್ಷಿಕ ಜಮಾ ಖರ್ಚು ಪಟ್ಟಿಯ ಪ್ರತಿಯನ್ನು ಒದಗಿಸತಕ್ಕುದು ಮತ್ತು ಅದಕ್ಕೆ ಸಂಬಂಧಪಟ್ಟ ಲೆಕ್ಕಪತ್ರಗಳು ಮತ್ತು ವೋಚರುಗಳೊಂದಿಗೆ ಅದನ್ನು ಪರೀಕ್ಷಿಸುವುದು ಅವನ ಕರ್ತವ್ಯವಾಗಿರತಕ್ಕುದು; ಮತ್ತು ಪ್ರತಿಯೊಬ್ಬ ಲೆಕ್ಕಪರಿಶೋಧಕನು, ಬ್ಯಾಂಕು ಇಟ್ಟಿರುವ ಎಲ್ಲಾ ಪುಸ್ತಕಗಳ ಪಟ್ಟಿಯನ್ನು ಅವನಿಗೆ ವಶಾವಣೆ ಮಾಡತಕ್ಕುದು ಮತ್ತು ಅವನು ಎಲ್ಲಾ ಯುಕ್ತ ಕಾಲಗಳಲ್ಲಿ ಬ್ಯಾಂಕಿನ ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ನೋಡುವ

ಅವಕಾಶವನ್ನು ಹೊಂದಿರತಕ್ಕುದು ಮತ್ತು ಅವನು ಬ್ಯಾಂಕಿನ ವೆಚ್ಚದಲ್ಲಿ ಅಂಥ ಲೆಕ್ಕಪತ್ರಗಳನ್ನು ತನಿಖೆ ಮಾಡುವಲ್ಲಿ ಅವನಿಗೆ ಸಹಾಯ ಮಾಡಲು ಲೆಕ್ಕಿಗರು ಅಥವಾ ಇತರ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳಬಹುದು ಮತ್ತು ಅಂಥ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ಬ್ಯಾಂಕಿನ ಯಾವನೇ ನಿರ್ದೇಶಕ ಅಥವಾ ಅಧಿಕಾರಿಯನ್ನು ಪರೀಕ್ಷಿಸಬಹುದು.

(2) ಲೆಕ್ಕಪರಿಶೋಧಕರು, ಕೇಂದ್ರ ಸರ್ಕಾರಕ್ಕೆ, ವಾರ್ಷಿಕ ಜಮಾ ಖರ್ಚು ಪಟ್ಟಿ ಮತ್ತು ಲೆಕ್ಕಪತ್ರಗಳ ಬಗ್ಗೆ ವರದಿಯನ್ನು ಕೊಡತಕ್ಕುದು ಮತ್ತು ಅಂಥ ಪ್ರತಿಯೊಂದು ವರದಿಯಲ್ಲಿ ಅವರ ಅಭಿಪ್ರಾಯದಲ್ಲಿ ಆ ಜಮಾ ಖರ್ಚು ಪಟ್ಟಿಯು ಎಲ್ಲಾ ಅವಶ್ಯ ವಿವರಗಳನ್ನು ಒಳಗೊಂಡ ಪೂರ್ಣ ಮತ್ತು ಸರಿಯಾದ ಜಮಾ ಖರ್ಚು ಪಟ್ಟಿಯಾಗಿದೆಯೋ ಮತ್ತು ಬ್ಯಾಂಕಿನ ವ್ಯವಹಾರಗಳ ಸ್ಥಿತಿಯ ನಿಜವಾದ ಮತ್ತು ಸರಿಯಾದ ಅಭಿಪ್ರಾಯವನ್ನು ಪ್ರದರ್ಶಿಸುವ ಹಾಗೆ ಸರಿಯಾಗಿ ತಯಾರಿಸಲಾಗಿದೆಯೋ ಹೇಗೆ ಎಂಬುದನ್ನು ಮತ್ತು ಕೇಂದ್ರ ಮಂಡಳಿಯಿಂದ ಅವರು ಯಾವುದೇ ವಿವರಣೆ ಅಥವಾ ಮಾಹಿತಿಯನ್ನು ಕೋರಲಾಗಿದ್ದ ಸಂದರ್ಭದಲ್ಲಿ ಅದನ್ನು ಕೊಡಲಾಗಿದೆಯೋ ಹೇಗೆ ಮತ್ತು ಅದು ತೃಪ್ತಿಕರವಾಗಿದೆಯೋ ಹೇಗೆ ಎಂಬುದನ್ನು ಅವರು ನಿರೂಪಿಸತಕ್ಕುದು.

**53. ವಿವರ ಪಟ್ಟಿಕೆಗಳು.–** (1) ಬ್ಯಾಂಕು, ಕೇಂದ್ರ ಸರ್ಕಾರವು ಭಾರತದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ ನಮೂನೆಯಲ್ಲಿ ಹೊರಡಿಸುವ ಇಲಾಖೆಯ ಮತ್ತು ಬ್ಯಾಂಕಿಂಗ್ ಇಲಾಖೆಯ ಲೆಕ್ಕವನ್ನು ಸಿದ್ಧಪಡಿಸತಕ್ಕುದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ರವಾನಿಸತಕ್ಕುದು. ಕೇಂದ್ರ ಸರ್ಕಾರವು ಈ ಲೆಕ್ಕಪತ್ರಗಳನ್ನು, ಅದು ಸೂಕ್ತವೆಂದು ಯೋಚಿಸಬಹುದಾದಂಥ ಮಧ್ಯಂತರಗಳಲ್ಲಿ ಮತ್ತು ಹಾಗೆ ಮಾರ್ಪಾಟು ಮಾಡಿದ ನಮೂನೆಯಲ್ಲಿ ಭಾರತ ರಾಜಪತ್ರದಲ್ಲಿ ಪ್ರಕಟಿಸುವಂತೆ ಮಾಡತಕ್ಕುದು.

(2) ಬ್ಯಾಂಕು, ಬ್ಯಾಂಕಿನ ವಾರ್ಷಿಕ ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸಿದಂಥ ದಿನಾಂಕದಿಂದ ಎರಡು ತಿಂಗಳುಗಳೊಳಗೆ, ವರ್ಷದಾದ್ಯಂತ ಬ್ಯಾಂಕಿನ ಕಾರ್ಯನಿರ್ವಹಣೆಯ ಬಗ್ಗೆ, ಕೇಂದ್ರ ಮಂಡಳಿಯು ಕೊಟ್ಟಿರುವ ವರದಿಯೊಂದಿಗೆ ಬ್ಯಾಂಕಿನ ಗವರ್ನರ್, ಡೆಪ್ಯೂಟಿ ಗವರ್ನರ್‌ಗಳು ಮತ್ತು ಮುಖ್ಯ ಲೆಕ್ಕಾಧಿಕಾರಿಯ ರುಜು ಮಾಡಿರುವ, ಮತ್ತು ಲೆಕ್ಕಪರಿಶೋಧಕರು ಪ್ರಮಾಣೀಕರಿಸಿರುವ ವಾರ್ಷಿಕ ಲೆಕ್ಕಪತ್ರಗಳ ಪ್ರತಿಯನ್ನು ಸಹ ಕೇಂದ್ರ ಸರ್ಕಾರಕ್ಕೆ ರವಾನಿಸತಕ್ಕುದು ಮತ್ತು ಕೇಂದ್ರ ಸರ್ಕಾರವು, ಅಂಥ ಲೆಕ್ಕಪತ್ರಗಳು ಮತ್ತು ವರದಿಯನ್ನು, ಭಾರತದ ರಾಜಪತ್ರದಲ್ಲಿ ಪ್ರಕಟಿಸುವಂತೆ ಮಾಡತಕ್ಕುದು.

**54. ಕೃಷಿ ಸಾಲ ಮತ್ತು ಅಭಿವೃದ್ಧಿ.–** ಬ್ಯಾಂಕು, ಕೃಷಿ ಸಾಲದ ಬಗ್ಗೆ ಹಲವಾರು ಅಂಶಗಳನ್ನು ಅಧ್ಯಯನ ಮಾಡಲು ಪರಿಣಿತ ಸಿಬ್ಬಂದಿಯನ್ನು ಇಟ್ಟುಕೊಂಡು ಬರಬಹುದು ಮತ್ತು ವಿಶೇಷವಾಗಿ ಅದು–

(ಎ) ರಾಷ್ಟ್ರೀಯ ಬ್ಯಾಂಕಿಗೆ ಪರಿಣಿತ ಮಾರ್ಗದರ್ಶನ ಮತ್ತು ಸಹಾಯವನ್ನು ಕೊಡಬಹುದು:

(ಬಿ) ಸಂಯೋಜಿತ ಗ್ರಾಮೀಣ ಅಭಿವೃದ್ಧಿಯನ್ನು ಸಂವರ್ಧಿಸಿ ಹಾಗೆ ಮಾಡಲು ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಪ್ರದೇಶಗಳಲ್ಲಿ ವಿಶೇಷ ಅಧ್ಯಯನಗಳನ್ನು ನಡೆಸಬಹುದು.

**54ಎ. ಅಧಿಕಾರಗಳ ಪ್ರತ್ಯಾಯೋಜನೆ.–** (1) ಗವರ್ನರನು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು ಬ್ಯಾಂಕಿನ ಪ್ರಕಾರ್ಯಗಳ ದಕ್ಷ ಆಡಳಿತಕ್ಕಾಗಿ ಅವನು ಅವಶ್ಯವೆಂದು ಭಾವಿಸಬಹುದಾದಂತೆ ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ

ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅವನು ಚಲಾಯಿಸಬಹುದಾದಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಡೆಪ್ಯೂಟಿ ಗವರ್ನರನಿಗೆ ಪ್ರತ್ಯಾಯೋಜಿಸಬಹುದು.

(2) ಡೆಪ್ಯೂಟಿ ಗವರ್ನರನು, ಈ ಅಧಿನಿಯಮದ ಅನುಸರಣೆಯಲ್ಲಿ ಯಾವುದೇ ಅಧಿಕಾರವನ್ನು ಚಲಾಯಿಸುವ ಅಥವಾ ಯಾವುದೇ ಕೆಲಸ ಅಥವಾ ಕಾರ್ಯವನ್ನು ಮಾಡುವ ಸಂಗತಿಯು ಹಾಗೆ ಮಾಡಲು ಅವನ ಅಧಿಕಾರದ ಬಗ್ಗೆ ನಿರ್ಣಾಯಕ ರುಜುವಾತಾಗಿರತಕ್ಕುದು.

**54ಎಎ. ಬ್ಯಾಂಕಿನ ನೌಕರರನ್ನು ಇತರ ಸಂಸ್ಥೆಗಳಿಗೆ ಪ್ರತಿನಿಯೋಜಿಸಲು ಅದರ ಅಧಿಕಾರ.–** (1) ಬ್ಯಾಂಕು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಒಪ್ಪಂದದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅದರ ಸಿಬ್ಬಂದಿಯ ಯಾರೇ ಸದಸ್ಯನನ್ನು, ಅದು ಸೂಕ್ತವೆಂದು ಯೋಚಿಸಬಹುದಾದಂಥ ಅವಧಿಯವರೆಗೆ –

(ಎ) ಬ್ಯಾಂಕು ಪೂರ್ಣವಾಗಿ ಅಥವಾ ಗಣನೀಯವಾಗಿ ಒಡೆತನ ಹೊಂದಿರುವಂಥ ಯಾವುದೇ ಸಂಸ್ಥೆಗೆ ಪ್ರತಿನಿಯೋಜಿಸಬಹುದು;

(ಬಿ) ಅಭಿವೃದ್ಧಿ ಬ್ಯಾಂಕಿಗೆ ಪ್ರತಿನಿಯೋಜಿಸಬಹುದು, ಆದಾಗ್ಯೂ, ಯಾವುದೇ ಅಂಥ ಪ್ರತಿನಿಯೋಜನೆಯ ಸಾರ್ವಜನಿಕ ಹಣಕಾಸು ಸಂಸ್ಥೆಗಳ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1975ರ 5ನೇ ಪ್ರಕರಣದ ಪ್ರಾರಂಭದಿಂದ ಮೂವತ್ತು ತಿಂಗಳುಗಳು ಮುಕ್ತಾಯವಾದ ತರುವಾಯ ಮುಂದುವರೆಯತಕ್ಕುದಲ್ಲ;

(ಸಿ) ಯೂನಿಟ್ ಟ್ರಸ್ಟಿಗೆ ಪ್ರತಿನಿಯೋಜಿಸಬಹುದು, ಆದಾಗ್ಯೂ ಯಾವುದೇ ಅಂಥ ಪ್ರತಿನಿಯೋಜನೆಯು ಭಾರತದ ಯೂನಿಟ್ ಟ್ರಸ್ಟ್ ಅಧಿನಿಯಮ, 1963ರ (1963ರ 52)ರ 4ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಅಧಿಸೂಚಿಸಿದ ದಿನಾಂಕದಿಂದ ಮೂವತ್ತು ತಿಂಗಳುಗಳು ಮುಕ್ತಾಯವಾದ ತರುವಾಯ ಮುಂದುವರೆಯತಕ್ಕುದಲ್ಲ;

ಮತ್ತು ಆ ತರುವಾಯ ಹಾಗೆ ಪ್ರತಿನಿಯೋಜಿತ ವ್ಯಕ್ತಿಯು ಅವನ ನಿಯೋಜನೆಯ ಅವಧಿಯಲ್ಲಿ, ಅವನನ್ನು ಪ್ರತಿನಿಯೋಜಿಸಲಾಗಿರುವಂಥ ಸಂಸ್ಥೆಗೆ ಆ ಸಂಸ್ಥೆಯು ಅಗತ್ಯಪಡಿಸ ಬಹುದಾದಂಥ ಸೇವೆಯನ್ನು ಸಲ್ಲಿಸತಕ್ಕುದು.

(2) ಒಬ್ಬ ವ್ಯಕ್ತಿಯನ್ನು (1)ನೇ ಉಪಪ್ರಕರಣದ ಮೇರೆಗೆ ಒಂದು ಸಂಸ್ಥೆಗೆ ಪ್ರತಿನಿಯೋಜಿಸಿರುವಲ್ಲಿ, ಅವನು, ಅವನನ್ನು ಹಾಗೆ ಪ್ರತಿನಿಯೋಜಿಸಿಲ್ಲದಿದ್ದರೆ ಅವನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರದಿದ್ದಂಥ ಯಾವುದೇ ಸಂಬಳ, ಉಪಲಬ್ಧಿಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕುದಲ್ಲ.

(3) ಈ ಪ್ರಕರಣದಲ್ಲಿರುವುದು ಯಾವುದೂ, ಬ್ಯಾಂಕಿನ ಸಿಬ್ಬಂದಿಯ ಯಾವನೇ ಸದಸ್ಯನನ್ನು ಯಾವುದೇ ಸಂಸ್ಥೆಗೆ ಅಂಥ ಪ್ರತಿನಿಯೋಜನೆಯ ನಿಕಟಪೂರ್ವದಲ್ಲಿ ಅವನು ಹಕ್ಕುಳ್ಳವನಾಗಿರುವಂಥ ಯಾವುದೇ ಸಂಬಳ, ಉಪಲಬ್ಧಿಗಳು ಅಥವಾ ನಿಬಂಧನೆಗಳು ಮತ್ತು ಷರತ್ತುಗಳಿಗಿಂತ ಅವನಿಗೆ ಇನ್ನೂ ಕಡಿಮೆ ಅನುಕೂಲಕರವಾದ ಅಥವಾ ಆಗಿರುವಂಥ ಸಂಬಳ, ಉಪಲಬ್ಧಿಗಳು ಅಥವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅವನನ್ನು ಪ್ರತಿನಿಯೋಜಿಸಲು ಬ್ಯಾಂಕನ್ನು ಶಕ್ತಗೊಳಿಸತಕ್ಕುದಲ್ಲ.

(4) ಈ ಪ್ರಕರಣದ ಉದ್ದೇಶಗಳಿಗಾಗಿ, ಒಂದು ಸಂಸ್ಥೆಯನ್ನು, ಆ ಸಂಸ್ಥೆಯ ಬಂಡವಾಳದಲ್ಲಿ ಶೇಕಡಾ ನಲ್ವತ್ತಕ್ಕಿಂತ ಕಡಿಮೆ ಇಲ್ಲದಷ್ಟು ಬಂಡವಾಳವನ್ನು ಬ್ಯಾಂಕು ಹೊಂದಿದ್ದರೆ, ಅದು ಬ್ಯಾಂಕಿನ ಗಣನೀಯ ಒಡೆತನದಲ್ಲಿರುವುದಾಗಿ ಭಾವಿಸತಕ್ಕುದು.

**ವಿವರಣೆ:–** ಯೂನಿಟ್ ಟ್ರಸ್ಟಿಗೆ ಸಂಬಂಧಪಟ್ಟಂತೆ 'ಬಂಡವಾಳ' ಎಂಬ ಪದವು ಆ ಟ್ರಸ್ಟಿನ ಪ್ರಾರಂಭಿಕ ಬಂಡವಾಳ ಎಂಬ ಅರ್ಥವನ್ನು ಹೊಂದಿದೆ.

**55 ಮತ್ತು 56**. [*ಬ್ಯಾಂಕಿನಿಂದ ವರದಿಗಳು, ನೋಂದಾಯಿತ ಷೇರುಗಳ ಒಡೆತನದ ಬಗ್ಗೆ ಘೋಷಣೆಯನ್ನು ಅಗತ್ಯಪಡಿಸುವ ಅಧಿಕಾರ*] 1948ರ ಅಧಿನಿಯಮ ಸಂಖ್ಯೆ 62ರ 7ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ (1.1.1949 ರಿಂದ ಜಾರಿಗೆ ಬರುವಂತೆ) ನಿರಸನಗೊಂಡಿವೆ.

**57. ಬ್ಯಾಂಕಿನ ಸಮಾಪನ.–** (1) ಕಂಪನಿಗಳ ಅಧಿನಿಯಮ, 1956 (1956ರ 1) ರಲ್ಲಿ ಇರುವುದು ಯಾವುದೂ, ಬ್ಯಾಂಕಿಗೆ ಅನ್ವಯವಾಗತಕ್ಕುದಲ್ಲ ಮತ್ತು ಬ್ಯಾಂಕನ್ನು ಕೇಂದ್ರ ಸರ್ಕಾರದ ಆದೇಶದ ಮೂಲಕವಲ್ಲದೆ ಮತ್ತು ಅದು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅಲ್ಲದೆ ಸಮಾಪನಗೊಳಿಸತಕ್ಕುದಲ್ಲ.

* * * *

**58. ಕೇಂದ್ರ ಮಂಡಳಿಯ ವಿನಿಯಮಗಳ ರಚನಾಧಿಕಾರ.–** (1) ಕೇಂದ್ರ ಮಂಡಳಿಯು, ಕೇಂದ್ರ ಸರ್ಕಾರದ ಪೂರ್ವಮಂಜೂರಾತಿಯೊಂದಿಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಯಾವ ವಿಷಯಗಳಿಗಾಗಿ ಉಪಬಂಧಿಸುವುದು ಅವಶ್ಯ ಅಥವಾ ಅನುಕೂಲಕರವಾಗಿರುವುದೋ ಆ ಎಲ್ಲಾ ವಿಷಯಗಳಿಗಾಗಿ ಉಪಬಂಧಿಸಲು ಈ ಅಧಿನಿಯಮಕ್ಕೆ ಸುಸಂಗತವಾದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:–

* * * *

(ಎಫ್) ಕೇಂದ್ರ ಮಂಡಳಿಯ ವ್ಯವಹಾರವನ್ನು ನಡೆಸತಕ್ಕಂಥ ರೀತಿ ಮತ್ತು ಅದರ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಜಿ) ಸ್ಥಳೀಯ ಮಂಡಳಿಗಳ ವ್ಯವಹಾರವನ್ನು ನಡೆಸುವುದು ಮತ್ತು ಅಂಥ ಮಂಡಳಿಗಳಿಗೆ ಅಧಿಕಾರಗಳ ಮತ್ತು ಪ್ರಕಾರ್ಯಗಳ ಪ್ರತ್ಯಾಯೋಜನೆ;

(ಹೆಚ್) ಕೇಂದ್ರ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಬ್ಯಾಂಕಿನ ಡೆಪ್ಯೂಟಿ ಗವರ್ನರ್‌ಗಳು, ನಿರ್ದೇಶಕರು ಅಥವಾ ಅಧಿಕಾರಿಗಳಿಗೆ ಪ್ರತ್ಯಾಯೋಜಿಸುವುದು;

(ಐ) ಕೇಂದ್ರ ಮಂಡಲಿಯ ಸಮಿತಿಗಳ ರಚನೆ, ಅಂಥ ಸಮಿತಿಗಳಿಗೆ ಕೇಂದ್ರ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳ ಪ್ರತ್ಯಾಯೋಜನೆ ಮತ್ತು ಅಂಥ ಸಮಿತಿಗಳಲ್ಲಿ ವ್ಯವಹಾರವನ್ನು ನಡೆಸುವುದು;

(ಜೆ) ಬ್ಯಾಂಕಿನ ಅಧಿಕಾರಿಗಳು ಮತ್ತು ನೌಕರರಿಗಾಗಿ ಸಿಬ್ಬಂದಿ ಮತ್ತು ಸೇವಾ ನಿವೃತ್ತಿ ನಿಧಿಗಳ ರಚನೆ ಮತ್ತು ಅವುಗಳ ವ್ಯವಸ್ಥಾಪನೆ;

(ಕೆ) ಬ್ಯಾಂಕು ಬದ್ಧವಾಗಿರುವ ಕರಾರುಗಳನ್ನು ಬರೆದುಕೊಡಬಹುದಾದಂಥ ರೀತಿ ಮತ್ತು ನಮೂನೆ;

(ಎಲ್) ಬ್ಯಾಂಕಿನ ಅಧಿಕೃತ ಮೊಹರಿನ ಬಗ್ಗೆ ವ್ಯವಸ್ಥೆ ಮತ್ತು ಅದರ ಬಳಕೆಯ ರೀತಿ ಮತ್ತು ಅದರ ಪರಿಣಾಮ;

(ಎಂ) ಬ್ಯಾಂಕಿನ ಜಮಾ ಖರ್ಚು ಪಟ್ಟಿಯನ್ನು ತಯಾರಿಸತಕ್ಕಂಥ ಮತ್ತು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರಬೇಕಾದಂಥ ರೀತಿ ಮತ್ತು ನಮೂನೆ;

(ಎನ್) ಬ್ಯಾಂಕಿನ ನಿರ್ದೇಶಕರ ಪರಿಶ್ರಮಧನ;

(ಒ) ಬ್ಯಾಂಕಿನೊಂದಿಗೆ ಅನುಸೂಚಿತ ಬ್ಯಾಂಕುಗಳ ಸಂಬಂಧಗಳು ಮತ್ತು ಬ್ಯಾಂಕಿಗೆ ಅನುಸೂಚಿತ ಬ್ಯಾಂಕುಗಳು ಒಪ್ಪಿಸಬೇಕಾದ ವಿವರಪಟ್ಟಿಕೆಗಳು;

(ಪಿ) ಬ್ಯಾಂಕುಗಳಿಗಾಗಿ (ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳನ್ನೊಳಗೊಂಡು) ತೀರುವೆ ಮನೆಗಳ ನಿಯಂತ್ರಣ;

(ಪಿಪಿ) ಯಾವ ಷರತ್ತುಗಳಿಗೆ ಒಳಪಟ್ಟು ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕದ ನಿಧಿಯ ವರ್ಗಾವಣೆಯಲ್ಲಿ ಪಾಲ್ಗೊಳ್ಳತಕ್ಕುದೋ ಆ ಷರತ್ತುಗಳನ್ನು ವಿಧಿಸುವುದು, ಅಂಥ ನಿಧಿಯ ವರ್ಗಾವಣೆಗಳ ರೀತಿ ಮತ್ತು ಅಂಥ ನಿಧಿ ವರ್ಗಾವಣೆಗಳಲ್ಲಿ ಪಾಲ್ಗೊಳ್ಳುವವರ ಹಕ್ಕುಗಳು ಮತ್ತು ಹೊಣೆಗಾರಿಕೆಗಳೂ ಒಳಗೊಂಡಂತೆ 45-ಐ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಬ್ಯಾಂಕುಗಳ ನಡುವೆ ಅಥವಾ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳ ನಡುವೆ ಅಂಥ ನಿಧಿಯ ವರ್ಗಾವಣೆಯ ನಿಯಂತ್ರಣ;

(ಕ್ಯೂ) ಯಾವ ಸಂದರ್ಭಗಳಲ್ಲಿ ಮತ್ತು ಯಾವ ಷರತ್ತುಗಳು ಮತ್ತು ಪರಿಮಿತಿಗಳಿಗೊಳಪಟ್ಟು, ಯಾವುದೇ ನಷ್ಟವಾದ, ಕಳುವಾದ, ವಿರೂಪಗೊಂಡ ಅಥವಾ ಅಪರಿಪೂರ್ಣವಾದ ಭಾರತ ಸರ್ಕಾರದ ಕರೆನ್ಸಿ ನೋಟು ಅಥವಾ ಬ್ಯಾಂಕು ನೋಟಿನ ಮೌಲ್ಯವನ್ನು ಮರುಪಾವತಿ ಮಾಡಬಹುದೋ ಆ ಸಂದರ್ಭಗಳು, ಮತ್ತು ಷರತ್ತುಗಳು ಮತ್ತು ಪರಿಮಿತಿಗಳು; ಮತ್ತು

(ಆರ್) ಸಾಮಾನ್ಯವಾಗಿ, ಬ್ಯಾಂಕಿನ ವ್ಯವಹಾರವನ್ನು ದಕ್ಷತೆಯಿಂದ ನಡೆಸುವುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ವಿನಿಯಮವು, ಆ ವಿನಿಯಮದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮುಂಚಿನ ಅಥವಾ ತರುವಾಯದ ದಿನಾಂಕದಿಂದ ಜಾರಿಗೆ ಬರತಕ್ಕುದು.

(4) ಕೇಂದ್ರ ಮಂಡಳಿಯು ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಆ ಸರ್ಕಾರವು, ಅದರ ಪ್ರತಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಿರಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ವಿನಿಯಮವು ಆ ತರುವಾಯ, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಯಾವುದೇ ಪರಿಣಾಮವನ್ನು ಹೊಂದಿರತಕ್ಕುದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

(5) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲಾ ವಿನಿಯಮಗಳ ಪ್ರತಿಗಳು, ಸಂದಾಯದ ಮೇಲೆ ಸಾರ್ವಜನಿಕರಿಗೆ ಲಭ್ಯವಾಗತಕ್ಕುದು.

**58ಎ. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಬಗ್ಗೆ ಸಂರಕ್ಷಣೆ.-** (1) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ಮಾಡಿದ ಅಥವಾ ಕೊಟ್ಟ ಯಾವುದೇ ಆದೇಶ, ವಿನಿಯಮ ಅಥವಾ ನಿರ್ದೇಶನದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಅಥವಾ ಬ್ಯಾಂಕು ಅಥವಾ ಯಾವನೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

(2) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ಮಾಡಿದ ಅಥವಾ ಕೊಟ್ಟ ಯಾವುದೇ ಆದೇಶ, ವಿನಿಯಮ ಅಥವಾ ನಿರ್ದೇಶನದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಕೇಂದ್ರ ಸರ್ಕಾರ ಅಥವಾ ಬ್ಯಾಂಕಿನ ವಿರುದ್ಧ ಯಾವುದೇ ದಾವೆ, ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

## ಅಧ್ಯಾಯ-V

## ದಂಡನೆಗಳು.

**58ಬಿ. ದಂಡನೆಗಳು.-** (1) ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿದ ಅಥವಾ ಕೊಟ್ಟ ಯಾವುದೇ ಆದೇಶ, ವಿನಿಯಮ ಅಥವಾ ನಿರ್ದೇಶನದ ಮೂಲಕ ಅಥವಾ ಅದರ ಮೇರೆಗೆ ಮಾಡಿಕೊಂಡ, ಅಗತ್ಯಪಡಿಸಿದ ಅಥವಾ ಒದಗಿಸಿದ ಅಥವಾ ಅದರ ಯಾವುದೇ ಉಪಬಂಧದ ಉದ್ದೇಶಗಳಿಗಾಗಿನ ಯಾವುದೇ ಅರ್ಜಿ, ಘೋಷಣೆ, ವಿವರಪಟ್ಟಿಕೆ, ವಿವರಪತ್ರ, ಮಾಹಿತಿ ಅಥವಾ ವಿವರಗಳಲ್ಲಿ ಅಥವಾ ಸಾರ್ವಜನಿಕರಿಂದ ಹಣದ ಠೇವಣಿಗಳನ್ನು ಯಾವನೇ ವ್ಯಕ್ತಿಯು ಆಹ್ವಾನಿಸುವುದಕ್ಕಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಹೊರಡಿಸಿದ ಯಾವುದೇ ಪರಿಚಯ ಪತ್ರಿಕೆ ಅಥವಾ ಜಾಹೀರಾತಿನಲ್ಲಿ ಯಾರೇ ಆಗಲಿ, ಯಾವುದೇ ಮುಖ್ಯ ವಿವರದಲ್ಲಿ ಅದು ಸುಳ್ಳಾಗಿರುವುದೆಂದು ತಿಳಿದೂ, ಸುಳ್ಳಾಗಿರುವಂಥ ನಿರೂಪಣೆಯನ್ನು ಬುದ್ಧಿಪೂರ್ವಕವಾಗಿ ಮಾಡಿದರೆ ಅಥವಾ ಮುಖ್ಯ ನಿರೂಪಣೆಯನ್ನು ಮಾಡಲು ಬುದ್ಧಿಪೂರ್ವಕವಾಗಿ ತಪ್ಪಿದರೆ, ಅವನು ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

(2) ಯಾವನೇ ವ್ಯಕ್ತಿಯು, ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಿರುವ ಅಥವಾ ಕೊಟ್ಟಿರುವ ಯಾವುದೇ ಆದೇಶ, ವಿನಿಯಮ, ನಿರ್ದೇಶನದ ಮೇರೆಗೆ, ಹಾಜರುಪಡಿಸುವುದು ಅಥವಾ ಒದಗಿಸುವುದು ಆತನ ಕರ್ತವ್ಯವಾಗಿರುವಂಥ ಯಾವುದೇ ಪುಸ್ತಕ, ಲೆಕ್ಕ ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ಅಥವಾ ಯಾವುದೇ ವಿವರಪತ್ರ, ಮಾಹಿತಿ ಅಥವಾ ವಿವರಗಳನ್ನು ಒದಗಿಸಲು ಅಥವಾ ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ಮಾಡಿರುವ ಅಥವಾ ಕೊಟ್ಟಿರುವ ಯಾವುದೇ ಆದೇಶ, ವಿನಿಯಮ ಅಥವಾ ನಿರ್ದೇಶನಗಳ ಅನುಸರಣೆಯಲ್ಲಿ ಅವನಿಗೆ ಹಾಕಿದ ಯಾವುದೇ ಪ್ರಶ್ನೆಗೆ ಉತ್ತರಿಸಲು ತಪ್ಪಿದರೆ ಅವನು, ಪ್ರತಿಯೊಂದು ಅಪರಾಧಕ್ಕೆ ಸಂಬಂಧಿಸಿದಂತೆ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅಂಥ ತಪ್ಪುವಿಕೆ ಮತ್ತು ನಿರಾಕರಣೆಯಲ್ಲಿ ಅವನು ಪಟ್ಟು ಹಿಡಿದರೆ ಮೊದಲನೇ ಅಪರಾಧದ ತರುವಾಯ ಆ ಅಪರಾಧವು ಮುಂದುವರೆಯುತ್ತಿರುವಂಥ ಕಾಲದಲ್ಲಿ, ಪ್ರತಿ ದಿವಸಕ್ಕೆ ಒಂದು

ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(3) ಯಾವನೇ ವ್ಯಕ್ತಿಯು, 31ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು, ಯಾವುದಕ್ಕೆ ಸಂಬಂಧಿಸಿದಂತೆ ಆ ಅಪರಾಧವನ್ನು ಮಾಡಲಾಗಿದೆಯೋ ಆ ವಿನಿಮಯಪತ್ರ, ಹುಂಡಿ, ಪ್ರಾಮಿಸರಿ ನೋಟು ಅಥವಾ ಹಣವನ್ನು ಸಂದಾಯ ಮಾಡುವುದಕ್ಕಾಗಿನ ವಚನಬಂಧದ ಮೊಬಲಗಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(4) ಯಾವನೇ ವ್ಯಕ್ತಿಯು, 45ಇ ಪ್ರಕರಣದ ಮೇರೆಗೆ ಯಾವುದರ ಬಹಿರಂಗಪಡಿಸುವಿಕೆಯನ್ನು ನಿಷೇಧಿಸಲಾಗಿದೆಯೋ ಆ ಯಾವುದೇ ಸಾಲದ ಮಾಹಿತಿಯನ್ನು ಬಹಿರಂಗಪಡಿಸಿದರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(4ಎ) ಯಾರೇ ವ್ಯಕ್ತಿಯು 45ಐಎ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಒಂದು ವರ್ಷಕ್ಕೆ ಕಡಿಮೆ ಇಲ್ಲದ ಆದರೆ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯವರೆಗಿನ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆ ಇಲ್ಲದ ಆದರೆ, ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು;

(4ಎಎ) ಯಾರೇ ಲೆಕ್ಕ ಪರಿಶೋಧಕನು, 45 ಕ್ಯೂಎ ಪ್ರಕರಣದ ಮೇರೆಗೆ, ಬ್ಯಾಂಕು ನೀಡಿದ ಯಾವುದೇ ನಿರ್ದೇಶನವನ್ನು ಅಥವಾ ಮಾಡಿದ ಯಾವುದೇ ಆದೇಶವನ್ನು ಪಾಲಿಸಲು ತಪ್ಪಿದರೆ, ಅವನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(4ಎಎಎ) 45ಕ್ಯೂಎ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕಂಪನಿ ಕಾನೂನು ಮಂಡಲಿ ಮಾಡಿದ ಯಾವುದೇ ಆದೇಶವನ್ನು ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯವರೆಗಿನ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಹಾಗೆ ಪಾಲಿಸದಿರುವಿಕೆಯು ಮುಂದುವರೆದ ಪ್ರತಿಯೊಂದು ದಿನಕ್ಕೆ ಐವತ್ತು ರೂಪಾಯಿಗಳಿಗೆ ಕಡಿಮೆ ಇಲ್ಲದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

(5)ಲೆಕ್ಕಪರಿಶೋಧಕನ ಹೊರತು ಯಾವನೇ ವ್ಯಕ್ತಿಯು –

(ಎ) IIIಬಿ ಅಧ್ಯಾಯದ ಮೇರೆಗೆ ಕೊಟ್ಟ ಯಾವುದೇ ನಿರ್ದೇಶನ ಅಥವಾ ಮಾಡಿದ ಆದೇಶವನ್ನು ಉಲ್ಲಂಘಿಸಿ ಯಾವುದೇ ಠೇವಣಿಯನ್ನು ಸ್ವೀಕರಿಸಿದರೆ, ಅಥವಾ

(ಎಎ) ಬ್ಯಾಂಕು, IIIಬಿ ಆಧ್ಯಾಯದ ಯಾವುದೇ ಉಪಬಂಧದ ಮೇರೆಗೆ ನೀಡಿದ ಯಾವುದೇ ನಿರ್ದೇಶನವನ್ನು ಅಥವಾ ಮಾಡಿದ ಆದೇಶವನ್ನು ಪಾಲಿಸಲು ತಪ್ಪಿದರೆ; ಅಥವಾ

(ಬಿ) ಸಂದರ್ಭಾನುಸಾರ 45ಎಂಎ ಪ್ರಕರಣದ ಅನುಸಾರವಾಗಿ ಅಥವಾ 54ಜೆ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶಕ್ಕೆ ಅನುಸಾರವಾಗಿ ಅಲ್ಲದೆ ಅನ್ಯಥಾ ಯಾವುದೇ ಪರಿಚಯ ಪತ್ರಿಕೆ ಅಥವಾ ಜಾಹೀರಾತನ್ನು ಹೊರಡಿಸಿದರೆ

– ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಅವನು–

(i) (ಎ) ಖಂಡದ ಅಡಿಯಲ್ಲಿ ಬರುವ ಉಲ್ಲಂಘನೆಯ ಸಂದರ್ಭದಲ್ಲಿ, ಸ್ವೀಕರಿಸಿದ ಠೇವಣಿಯ ಮೊಬಲಗಿನ ಎರಡರಷ್ಟಕ್ಕೆ; ಮತ್ತು

(ii) (ಬಿ) ಖಂಡದ ಅಡಿಯಲ್ಲಿ ಬರುವ ಉಲ್ಲಂಘನೆಯ ಸಂದರ್ಭದಲ್ಲಿ, ಆ ಪರಿಚಯ ಪತ್ರಿಕೆ ಅಥವಾ ಜಾಹೀರಾತಿನ ಮೂಲಕ ಕೋರಲಾದ ಠೇವಣಿಯ ಮೊಬಲಗಿನ ಎರಡರಷ್ಟಕ್ಕೆ

– ವಿಸ್ತರಿಸಬಹುದಾದಂಥ ಜುಲ್ಮಾನೆಗೂ ಗುರಿಯಾಗತಕ್ಕುದು.

(5ಎ) ಯಾವನೇ ವ್ಯಕ್ತಿಯು, 45ಎಸ್ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಆ ಪ್ರಕರಣವನ್ನು ಉಲ್ಲಂಘಿಸಿ ಅಂಥ ವ್ಯಕ್ತಿಯು ಸ್ವೀಕರಿಸಿದ ಠೇವಣಿಯ ಮೊಬಲಗಿನ ಎರಡರಷ್ಟು ಅಥವಾ ಎರಡು ಸಾವಿರ ರೂಪಾಯಿಗಳು, ಇವುಗಳಲ್ಲಿ ಯಾವುದು ಹೆಚ್ಚಿನದೋ ಅಷ್ಟಕ್ಕೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು:

ಪರಂತು, ಆ ನ್ಯಾಯಾಲಯದ ತೀರ್ಪಿನಲ್ಲಿ ನಮೂದಿಸಬೇಕಾದ, ಅದಕ್ಕೆ ತದ್ವಿರುದ್ಧವಾದ ವಿಶೇಷ ಮತ್ತು ಸಾಕಷ್ಟು ಕಾರಣಗಳು ಇಲ್ಲದಿರುವಲ್ಲಿ, ಕಾರಾವಾಸವು ಒಂದು ವರ್ಷಕ್ಕಿಂತ ಕಡಿಮೆ ಇರತಕ್ಕುದಲ್ಲ ಮತ್ತು ಜುಲ್ಮಾನೆಯು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರತಕ್ಕುದಲ್ಲ.

(5ಬಿ) ದಂಡಪ್ರಕ್ರಿಯಾ ಸಂಹಿತೆ, 1973ರ 29ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮಹಾನಗರ ಮ್ಯಾಜಿಸ್ಟ್ರೇಟನಿಗೆ ಅಥವಾ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟನಿಗೆ (5ಎ) ಉಪಪ್ರಕರಣದ ಮೇರೆಗೆ ಅಪರಾಧಿ ಎಂದು ನಿರ್ಣೀತನಾದ ಯಾವನೇ ವ್ಯಕ್ತಿಗೆ ಆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪರಿಮಿತಿಗಿಂತ ಹೆಚ್ಚಿಗೆಯಾಗಿ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸುವುದು ಕಾನೂನು ಸಮ್ಮತವಾಗಿರತಕ್ಕುದು.

(6) ಈ ಅಧಿನಿಯಮದ ಯಾವುದೇ ಇತರ ಉಪಬಂಧವನ್ನು ಉಲ್ಲಂಘಿಸಿದರೆ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಅಥವಾ ಕೊಟ್ಟ ಯಾವುದೇ ಆದೇಶ, ವಿನಿಯಮ ಅಥವಾ ನಿರ್ದೇಶನ ಅಥವಾ ವಿಧಿಸಿದ ಷರತ್ತಿನ ಯಾವುದೇ ಇತರ ಅಗತ್ಯತೆಯನ್ನು ಪಾಲಿಸುವಲ್ಲಿ, ಯಾವುದೇ ತಪ್ಪಿತವನ್ನು ಮಾಡಿದ್ದರೆ, ಅಂಥ ಉಲ್ಲಂಘನೆ ಅಥವಾ ತಪ್ಪಿತದ ಬಗ್ಗೆ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು, ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಉಲ್ಲಂಘನೆ ಅಥವಾ ತಪ್ಪಿತವು ಮುಂದುವರಿಯುತ್ತಿರುವಂಥದು ಆಗಿರುವಲ್ಲಿ ಮೊದಲನೆಯದರ ತರುವಾಯ ಆ ಉಲ್ಲಂಘನೆ ಅಥವಾ ತಪ್ಪಿತವು ಮುಂದುವರಿಯುತ್ತಿರುವಂಥ ಕಾಲದಲ್ಲಿ ಪ್ರತಿದಿವಸಕ್ಕಾಗಿ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**58ಸಿ. ಕಂಪನಿಯ ಅಪರಾಧಗಳು.**– (1) 58ಬಿ ಪ್ರಕರಣದಲ್ಲಿ ಉಲ್ಲೇಖಿಸಿದ ಉಲ್ಲಂಘನೆ ಅಥವಾ ತಪ್ಪಿತವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿರುವಲ್ಲಿ, ಆ ಉಲ್ಲಂಘನೆ ಅಥವಾ ತಪ್ಪಿತವನ್ನು ಮಾಡುವ ಕಾಲದಲ್ಲಿ, ಆ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಆ ಕಂಪನಿಯು ಸಹ ಆ ಉಲ್ಲಂಘನೆ ಅಥವಾ ಆ ತಪ್ಪಿತದ ಬಗ್ಗೆ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕುದು ಮತ್ತು ಅವನು ತದನುಸಾರವಾಗಿ, ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ದಂಡಿತನಾಗತಕ್ಕುದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಅವನು ಆ ಉಲ್ಲಂಘನೆ ಅಥವಾ ತಪ್ಪಿತವನ್ನು ಅವನಿಗೆ ತಿಳಿಯದೆ ಮಾಡಲಾಗಿದೆ ಎಂದು ಅಥವಾ ಆ ಉಲ್ಲಂಘನೆ ಅಥವಾ ತಪ್ಪಿತವನ್ನು ತಡೆಗಟ್ಟಲು ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಯಾವನೇ ಅಂಥ ವ್ಯಕ್ತಿಯನ್ನು ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಅದನ್ನು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿ ಅಥವಾ ನಿಯೋಜಿತನ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಯಿತೆಂದು ರುಜುವಾತುಪಡಿಸಿದರೆ ಅಥವಾ ಅವನ ನಿರ್ಲಕ್ಷತೆಯ ಕಾರಣದಿಂದ ಆಗಿದೆ ಎಂದು ಹೇಳಬಹುದಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ, ಇತರ ಅಧಿಕಾರಿ ಅಥವಾ ನಿಯೋಜಿತನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ದಂಡಿತನಾಗತಕ್ಕುದು.

**ವಿವರಣೆ-1:-** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಸಂದರ್ಭಾನುಸಾರ ಆ ಕಂಪನಿಯ ಭಾರತದಲ್ಲಿನ ನೋಂದಾಯಿತ ಕಚೇರಿ ಅಥವಾ ವ್ಯವಹಾರದ ಮುಖ್ಯ ಸ್ಥಳವು ಇರುವ ಸ್ಥಳದಲ್ಲಿ ಮಾಡಿರುವುದಾಗಿ ಭಾವಿಸತಕ್ಕುದು.

**ವಿವರಣೆ-2:-** ಈ ಪ್ರಕರಣದ ಉದ್ದೇಶಕ್ಕಾಗಿ -

(ಎ) 'ಕಂಪನಿ' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ನಿಗಮ, ಬ್ಯಾಂಕೇತರ ಸಂಸ್ಥೆ, ಫರ್ಮು, ಸಹಕಾರಿ ಸಂಘ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ.

(ಬಿ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಫರ್ಮಿನಲ್ಲಿನ ಪಾಲುಗಾರ.

**58ಡಿ. 58ಬಿ ಪ್ರಕರಣದ ಅನ್ವಯದ ಬಗ್ಗೆ ಪ್ರತಿಷೇಧ.-** 58ಬಿ ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, 42ನೇ ಪ್ರಕರಣದಲ್ಲಿ ವ್ಯವಹರಿಸಲಾದ ಯಾವುದೇ ವಿಷಯಕ್ಕೆ, ಅಥವಾ ಅದಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕುದಲ್ಲ.

**58ಇ. ಅಪರಾಧಗಳ ಸಂಜ್ಞೇಯತೆ.-** (1) ಯಾವುದೇ ನ್ಯಾಯಾಲಯವು, ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ಬ್ಯಾಂಕು ಈ ಬಗ್ಗೆ ಬರಹದಲ್ಲಿ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಿದ ಬ್ಯಾಂಕಿನ ಅಧಿಕಾರಿಯು ಬರಹದಲ್ಲಿ ಕೊಟ್ಟ ದೂರಿನ ಮೇಲೆ ಹೊರತು, ತೆಗೆದುಕೊಳ್ಳತಕ್ಕುದಲ್ಲ ಮತ್ತು ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯ ಅಥವಾ ಇವುಗಳಿಗೆ ಶ್ರೇಷ್ಠವಾದ ನ್ಯಾಯಾಲಯವನ್ನು ಬಿಟ್ಟು ಇತರ ಯಾವುದೇ ನ್ಯಾಯಾಲಯವು ಅಂಥ ಅಪರಾಧದ ಬಗ್ಗೆ ವಿಚಾರಣೆ ಮಾಡತಕ್ಕುದಲ್ಲ:

ಪರಂತು, 58ಬಿ ಪ್ರಕರಣದ (5ಎ) ಉಪಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಬರಹದಲ್ಲಿ ದೂರನ್ನು, ಈ ಬಗ್ಗೆ ಸರ್ಕಾರವು ಬರಹದಲ್ಲಿ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಿದ ರಾಜ್ಯ ಸರ್ಕಾರದ ಅಧಿಕಾರಿಯು ಸಹ ಕೊಡಬಹುದು.

(2) ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮ್ಯಾಜಿಸ್ಟ್ರೇಟನು ದೂರು ಕೊಡುವ ಬ್ಯಾಂಕಿನ ಅಧಿಕಾರಿಯ ಖುದ್ದು ಹಾಜರಾತಿಯಿಂದ ಹಾಗೆ

ಮಾಡಲು ಅವನಿಗೆ ಕಾರಣವು ಕಂಡುಬಂದರೆ ವಿನಾಯಿತಿ ಕೊಡಬಹುದು. ಆದರೆ ವ್ಯವಹರಣೆಗಳ ಯಾವುದೇ ಹಂತದಲ್ಲಿ ಮ್ಯಾಜಿಸ್ಟ್ರೇಟನು ತನ್ನ ವಿವೇಚನೆಯಲ್ಲಿ ಫಿರ್ಯಾದಿಯು ಖುದ್ದಾಗಿ ಹಾಜರಾಗಬೇಕೆಂದು ನಿರ್ದೇಶಿಸಬಹುದು.

**58ಎಫ್. ಜುಲ್ಮಾನೆಯ ವಿನಿಯೋಗ.–** ಈ ಅಧಿನಿಯಮದ ಮೇರೆಗೆ ಯಾವುದೇ ಜುಲ್ಮಾನೆಯನ್ನು ವಿಧಿಸುವ ನ್ಯಾಯಾಲಯವು ಅದರ ಪೂರ್ತಿ ಅಥವಾ ಯಾವುದೇ ಭಾಗವನ್ನು ವ್ಯವಹರಣೆಗಳ ಖರ್ಚುಗಳ ಸಂದಾಯದಲ್ಲಿ ಅಥವಾ ಸಂದಾಯಕ್ಕಾಗಿ ವಿನಿಯೋಗಿಸತಕ್ಕುದೆಂದು ನಿರ್ದೇಶಿಸಬಹುದು.

**58ಜಿ. ಜುಲ್ಮಾನೆ ವಿಧಿಸಲು ಬ್ಯಾಂಕಿನ ಅಧಿಕಾರ.–** (1) 58ಬಿ ಪ್ರಕರಣದಲ್ಲಿ ಏನೇ ಇದ್ದರೂ, 58ಬಿ ಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವಭಾವದ ಉಲ್ಲಂಘನೆ ಅಥವಾ ತಪ್ಪನ್ನು ಬ್ಯಾಂಕೇತರ ಹಣಕಾಸು ಕಂಪನಿಯು ಮಾಡಿದ್ದರೆ, ಅಂಥ ಬ್ಯಾಂಕೇತರ ಹಣಕಾಸು ಕಂಪನಿಯ ಮೇಲೆ ಬ್ಯಾಂಕು–

(ಎ) ಐದು ಸಾವಿರ ರೂಪಾಯಿಗಳನ್ನು ಮೀರದ ದಂಡವನ್ನು; ಅಥವಾ

(ಬಿ) (4ಎ) ಪ್ರಕರಣದ ಮೇರೆಗೆ ಅಥವಾ 58 ಬಿ ಪ್ರಕರಣದ (5)ನೇ ಉಪಪ್ರಕರಣದ (ಎ) ಅಥವಾ (ಎಎ) ಖಂಡದ ಮೇರೆಗೆ ಉಲ್ಲಂಘನೆ ಅಥವಾ ತಪ್ಪುವಿಕೆ ಆಗಿದ್ದರೆ, ಐದು ಲಕ್ಷ ರೂಪಾಯಿಗಳಿಗೆ ಮೀರದಷ್ಟು ಆ ಮೊತ್ತವನ್ನು ಪರಿಮಾಣೀಕರಿಸುವಂತಿದ್ದಲ್ಲಿ ಅಥವಾ ಅಂಥ ಉಲ್ಲಂಘನೆ ಅಥವಾ ತಪ್ಪುವಿಕೆ ಒಳಗೊಂಡಿರುವ ಮೊತ್ತದ ಎರಡರಷ್ಟು – ಇವೆರಡರಲ್ಲಿ ಯಾವುದು ಹೆಚ್ಚೋ ಅಷ್ಟು ದಂಡವನ್ನು ಮತ್ತು ಅಂಥ ಉಲ್ಲಂಘನೆ ಅಥವಾ ತಪ್ಪುವಿಕೆಯು ಮುಂದುವರಿಯುತ್ತಿರುವಲ್ಲಿ, ಆ ಉಲ್ಲಂಘನೆ ಅಥವಾ ತಪ್ಪುವಿಕೆಯು ಮುಂದುವರೆಯುವ ಮೊದಲನೇ ದಿನದ ತರುವಾಯದ ಪ್ರತಿಯೊಂದು ದಿನಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ದಂಡವನ್ನು –

– ವಿಧಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ದಂಡವನ್ನು ವಿಧಿಸುವ ಉದ್ದೇಶಕ್ಕಾಗಿ ಬ್ಯಾಂಕು, ಬ್ಯಾಂಕೇತರ ಹಣಕಾಸು ಕಂಪನಿಯ ಮೇಲೆ ಒಂದು ನೋಟೀಸನ್ನು ಜಾರಿಗೊಳಿಸಿ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ದಂಡವನ್ನಾಗಿ ಏಕೆ ವಿಧಿಸಬಾರದು ಎಂಬುದಕ್ಕೆ ಕಾರಣ ತೋರಿಸುವಂತೆ ಅಗತ್ಯಪಡಿಸತಕ್ಕದ್ದು ಮತ್ತು ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಸಹ ಅಂಥ ಬ್ಯಾಂಕೇತರ ಹಣಕಾಸು ಕಂಪನಿಗೆ ಕೊಡತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಬ್ಯಾಂಕು ವಿಧಿಸಿದ ಯಾವುದೇ ದಂಡವು, ಆ ಮೊತ್ತದ ಸಂದಾಯವನ್ನು ಕೋರಿ ಬ್ಯಾಂಕು ಹೊರಡಿಸಿದ ನೋಟೀಸು, ಬ್ಯಾಂಕೇತರ ಹಣಕಾಸು ಕಂಪನಿಯ ಮೇಲೆ ಜಾರಿಯಾದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಸಂದಾಯವಾಗತಕ್ಕದ್ದು ಮತ್ತು ಆ ಬ್ಯಾಂಕೇತರ ಹಣಕಾಸು ಕಂಪನಿಯು ಆ ಮೊತ್ತವನ್ನು ಅಂಥ ಅವಧಿಯೊಳಗೆ ಸಂದಾಯ ಮಾಡಲು ತಪ್ಪಿದ ಸಂದರ್ಭದಲ್ಲಿ, ಬ್ಯಾಂಕೇತರ ಹಣಕಾಸು ಕಂಪನಿಯ ನೋಂದಾಯಿತ ಕಛೇರಿ ಅಥವಾ ಮುಖ್ಯ ಕಚೇರಿ ಇರುವ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಪ್ರಧಾನ ಸಿವಿಲ್ ನ್ಯಾಯಾಲಯವು ನೀಡಿದ ನಿರ್ದೇಶನದ ಮೇಲೆ ದಂಡ ವಿಧಿಸಬಹುದು:

ಪರಂತು, ಈ ಸಂಬಂಧದಲ್ಲಿ ಅಧಿಕೃತನಾದ ಬ್ಯಾಂಕಿನ ಅಧಿಕಾರಿಯು ಪ್ರಧಾನ ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯ ಮೇಲೆ ಹೊರತು, ಅಂಥ ಯಾವುದೇ ನಿರ್ದೇಶನವನ್ನು ನೀಡತಕ್ಕದ್ದಲ್ಲ.

(4) (3)ನೇ ಉಪಪ್ರಕರಣದ ಮೇರೆಗೆ ನಿರ್ದೇಶನ ನೀಡುವ ನ್ಯಾಯಾಲಯವು, ಬ್ಯಾಂಕೇತರ ಹಣಕಾಸು ಕಂಪನಿಯು ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ದಿಷ್ಟಪಡಿಸಿ ಒಂದು ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪ್ರಮಾಣಪತ್ರವನ್ನು, ಅದು ಸಿವಿಲ್ ದಾವೆಯಲ್ಲಿ ಕೋರ್ಟು ಹೊರಡಿಸಿದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಜಾರಿಯಾಗತಕ್ಕದ್ದು.

(5) ಯಾವ ಉಲ್ಲಂಘನೆ ಅಥವಾ ತಪ್ಪುವಿಕೆಯ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಬ್ಯಾಂಕು ಯಾವ ದಂಡವನ್ನು ವಿಧಿಸಿದೆಯೋ ಆ ಯಾವುದೇ ಉಲ್ಲಂಘನೆ ಅಥವಾ ತಪ್ಪುವಿಕೆಗೆ ಸಂಬಂಧಿಸಿದಂತೆ, ಯಾವುದೇ ಬ್ಯಾಂಕೇತರ ಹಣಕಾಸು ಕಂಪನಿಯ ವಿರುದ್ಧ, ಯಾವುದೇ ನ್ಯಾಯಾಲಯದಲ್ಲಿ, ಯಾವುದೇ ಫಿರ್ಯಾದನ್ನು ಸಲ್ಲಿಸತಕ್ಕದ್ದಲ್ಲ.

(6) 58ಬಿ ಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವಭಾವದ ಉಲ್ಲಂಘನೆ ಅಥವಾ ತಪ್ಪುವಿಕೆಗೆ ಸಂಬಂಧಿಸಿದಂತೆ ಬ್ಯಾಂಕೇತರ ಹಣಕಾಸು ಕಂಪನಿಯ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಫಿರ್ಯಾದನ್ನು ಸಲ್ಲಿಸುವಲ್ಲಿ, ಆ ಬ್ಯಾಂಕೇತರ ಹಣಕಾಸು ಕಂಪನಿಯ ವಿರುದ್ಧ ಈ ಪ್ರಕರಣದ ಮೇರೆಗೆ ದಂಡ ವಿಧಿಸುವುದಕ್ಕಾಗಿ ಯಾವುದೇ ವ್ಯವಹರಣೆಯನ್ನು ಕೈಗೊಳ್ಳತಕ್ಕದ್ದಲ್ಲ.

**59 ರಿಂದ 61**. [***1906ರ ಅಧಿನಿಯಮ 3ರ ತಿದ್ದುಪಡಿ. ನಿರಸನಗಳು. 1913ರ 7ನೇ ಅಧಿನಿಯಮ 11ನೇ ಪ್ರಕರಣದ ತಿದ್ದುಪಡಿ***].- 1937ರ ಅಧಿನಿಯಮ, 20, 3ನೇ ಪ್ರಕರಣ ಮತ್ತು ಅನುಸೂಚಿ ಖಖರ ಮೂಲಕ ನಿರಸನಗೊಂಡಿದೆ.

## ಮೊದಲನೇ ಅನುಸೂಚಿ

**(9ನೇ ಪ್ರಕರಣವನ್ನು ನೋಡಿ)**

1. ಪಶ್ಚಿಮ ಪ್ರದೇಶವು ಗೋವ, ಗುಜರಾತ್, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ದಾದ್ರ ಮತ್ತು ನಗರ ಹವೇಲಿ ಮತ್ತು ದಮನ್ ಮತ್ತು ದೀವ್ - ಇವುಗಳನ್ನು ಒಳಗೊಂಡಿರತಕ್ಕದ್ದು.

2. ಪೂರ್ವ ಪ್ರದೇಶವು, ಅರುಣಾಚಲ ಪ್ರದೇಶ, ಅಸ್ಸಾಂ, ಬಿಹಾರ್, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಒರಿಸ್ಸಾ, ಸಿಕ್ಕಿಂ, ತ್ರಿಪುರ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳನ್ನು ಹಾಗೂ ಕೇಂದ್ರಾಡಳಿತ ಪ್ರದೇಶವಾದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಒಳಗೊಂಡಿರತಕ್ಕದ್ದು.

3. ಉತ್ತರ ಕ್ಷೇತ್ರವು, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶ ರಾಜ್ಯಗಳನ್ನು ಮತ್ತು ಚಂಡೀಗಢ ಮತ್ತು ದೆಹಲಿ ಒಕ್ಕೂಟರಾಜ್ಯ ಕ್ಷೇತ್ರಗಳನ್ನು ಒಳಗೊಳ್ಳತಕ್ಕುದು.

4. ದಕ್ಷಿಣ ಕ್ಷೇತ್ರವು, ಆಂಧ್ರ ಪ್ರದೇಶ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳನ್ನು ಮತ್ತು ಪಾಂಡಿಚೆರಿ ಮತ್ತು ಲಕ್ಷದ್ವೀಪ ಒಕ್ಕೂಟರಾಜ್ಯ ಕ್ಷೇತ್ರಗಳನ್ನು ಒಳಗೊಳ್ಳತಕ್ಕುದು.

## ಎರಡನೇ ಅನುಸೂಚಿ

**(42ನೇ ಪ್ರಕರಣ ಮತ್ತು 2(ಇ) ಪ್ರಕರಣವನ್ನು ನೋಡಿ)**

**ಅನುಸೂಚಿತ ಬ್ಯಾಂಕುಗಳು**

ಅಯೋಧ್ಯಾ ಬ್ಯಾಂಕ್, ಫೈಜಾಬಾದ್

ಅಲಹಾಬಾದ್ ಬ್ಯಾಂಕು.
ಅಮೆರಿಕನ್ ಎಕ್ಸ್‌ಪ್ರೆಸ್ ಅಂತರರಾಷ್ಟ್ರೀಯ ಬ್ಯಾಂಕಿಂಗ್ ನಿಗಮ.
ಆಂಧ್ರ ಬ್ಯಾಂಕು, ಮಚಲಿಪಟ್ನ.
ಅಮೇರಿಕಾ ಬ್ಯಾಂಕು, ರಾಷ್ಟ್ರೀಯ ನ್ಯಾಸ ಮತ್ತು ಉಳಿತಾಯಗಳ ಸಂಘ.
ಬರೋಡಾ ಬ್ಯಾಂಕು.
ಚೀನಾ ಬ್ಯಾಂಕು, ಕಲ್ಕತ್ತ.
ಭಾರತದ ಬ್ಯಾಂಕು, ಮುಂಬಯಿ
ಕರಡ್ ಬ್ಯಾಂಕು.
ಕೇರಳ ಬ್ಯಾಂಕು ಲಿಮಿಟೆಡ್.
ಮಧುರಾ ಬ್ಯಾಂಕು ಲಿಮಿಟೆಡ್, ಮಧುರೈ.
ಕರ್ನಾಟಕ ಬ್ಯಾಂಕು, ಹುಬ್ಬಳ್ಳಿ.
ಮಹಾರಾಷ್ಟ್ರ ಬ್ಯಾಂಕು, ಪುಣೆ.
ರಾಜಸ್ಥಾನ ಬ್ಯಾಂಕು, ಉದಯಪುರ.
ಟೋಕಿಯೋ ಬ್ಯಾಂಕು.
ಬರೇಲಿ ನಿಗಮ (ಬ್ಯಾಂಕು), ಬರೇಲಿ.
ಬನಾರಸ್ ಸ್ಟೇಟ್ ಬ್ಯಾಂಕು.
ಮಧ್ಯಪ್ರಾಚ್ಯದ ಬ್ರಿಟಿಷ್ ಬ್ಯಾಂಕು.
ಕೆನರಾ ಬ್ಯಾಂಕು.
ಕಾರ್ಪೊರೇಷನ್ ಬ್ಯಾಂಕ್ ಲಿಮಿಟೆಡ್, ಉಡುಪಿ.
ಕೆನರಾ ಕೈಗಾರಿಕಾ ಮತ್ತು ಬ್ಯಾಂಕಿಂಗ್ ಸಿಂಡಿಕೇಟ್, ಉಡುಪಿ.
ಕ್ಯಾಥೋಲಿಕ್ ಸಿರಿಯನ್ ಬ್ಯಾಂಕ್ ಲಿಮಿಟೆಡ್, ತ್ರಿಚೂರು.
ಭಾರತದ ಸೆಂಟ್ರಲ್ ಬ್ಯಾಂಕು.
ಚಾರ್ಟರ್ಡ್ ಬ್ಯಾಂಕು.
ಕಂಟಾಯರ್ ನ್ಯಾಷನಲ್ ಡಿ ಎಸ್ ಕಾಂಟಿಪ್ಯಾರಿಸ್.
ದೇನಾ ಬ್ಯಾಂಕು, ಮುಂಬೈ.
ಈಸ್ಟ್ರನ್ ಬ್ಯಾಂಕು.
ಸಿಟಿ ಬ್ಯಾಂಕು, ಎನ್. ಎ., ನ್ಯೂಯಾರ್ಕ್.
ಫೆಡರಲ್ ಬ್ಯಾಂಕ್ ಲಿಮಿಟೆಡ್, ಆಳ್ವಾಯ.
ನೆದರ್‌ಲ್ಯಾಂಡಿನ ಜನರಲ್ ಬ್ಯಾಂಕು.
ಗಡೋಡಿಯಾ ಬ್ಯಾಂಕು, ಮುಂಬೈ.
ಹಬೀಬ್ ಬ್ಯಾಂಕು.

ಹಿಂದೂಸ್ತಾನ್ ವಾಣಿಜ್ಯ ಬ್ಯಾಂಕ್, ಕಾನ್‌ಪುರ್.

ಹಿಂದೂಸ್ತಾನ್ ಮರ್ಕನ್‌ಟೇಲ್ ಬ್ಯಾಂಕು,ಕಲ್ಕತ್ತೆ.

ಹಾಂಕಾಂಗ್ ಮತ್ತು ಷಾಂಘೈ ಬ್ಯಾಂಕಿಂಗ್ ಕಾರ್ಪೊರೇಷನ್.

ಇಂಡಿಯನ್ ಬ್ಯಾಂಕು, ಮದರಾಸು.

ಇಂಡಿಯನ್ ಓವರ್‌ಸೀಸ್ ಬ್ಯಾಂಕು, ಮದರಾಸು.

ಭಾರತ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು.

ಜೆ ಅಂಡ್ ಕೆ ಬ್ಯಾಂಕ್ ಲಿಮಿಟೆಡ್, ಶ್ರೀನಗರ.

ಕಮಾನಿ ಕೈಗಾರಿಕಾ ಬ್ಯಾಂಕು.

ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ಕರೂರು ವೈಶ್ಯ ಬ್ಯಾಂಕು.

ಕೃಷ್ಣರಾಂ ಬಲದೇವ ಬ್ಯಾಂಕು.

ಕುಂಬಕೋಣಂ ಬ್ಯಾಂಕ್ ಲಿಮಿಟೆಡ್.

ಲಕ್ಷ್ಮಿ ವಾಣಿಜ್ಯ ಬ್ಯಾಂಕು.

ಲಕ್ಷ್ಮಿ ವಿಲಾಸ್ ಬ್ಯಾಂಕ್ ಲಿಮಿಟೆಡ್, ಕರೂರು.

ಮರ್ಕನ್‌ಟೈಲ್ ಬ್ಯಾಂಕು.

ಮೀರಜ್ ಸ್ಟೇಟ್ ಬ್ಯಾಂಕು.

ಮಿತಸುಯಿ ಬ್ಯಾಂಕು.

ನಾಡಾರ್ ಬ್ಯಾಂಕು, ಟುಟಿಕೋರಿನ್.

ಗ್ರಿಡ್‌ಲೇಸ್ ಬ್ಯಾಂಕು.

ಪಾಕಿಸ್ತಾನದ ರಾಷ್ಟ್ರೀಯ ಬ್ಯಾಂಕು.

ನೆಡಂಗಡಿ ಬ್ಯಾಂಕು, ಕಲಿಕಟ್.

ನ್ಯೂ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್.

ಓರಿಯಂಟಲ್ ವಾಣಿಜ್ಯ ಬ್ಯಾಂಕು.

ಪಾಂಡ್ಯನ್ ಬ್ಯಾಂಕು.

ಪಂಜಾಬ್ ಮತ್ತು ಸಿಂಧು ಬ್ಯಾಂಕು, ಅಮೃತಸರ.

ಪಂಜಾಬ್ ಸಹಕಾರಿ ಬ್ಯಾಂಕು, ಅಮೃತಸರ.

ಪಂಜಾಬ್ ನ್ಯಾಷನಲ್ ಬ್ಯಾಂಕು.

ಪೊರ್ವಾಂಚಾಲ್ ಬ್ಯಾಂಕ್ ಲಿಮಿಟೆಡ್, ಗುವಾಹತಿ.

ರತ್ನಾಕರ್ ಬ್ಯಾಂಕ್ ಲಿಮಿಟೆಡ್, ಕೊಲ್ಹಾಪುರ್.

ಸಾಂಗ್ಲಿ ಬ್ಯಾಂಕ್.

ತಮಿಳುನಾಡು ಬ್ಯಾಂಕು ಪರಿಮಿತ.

ಸೌತ್ ಇಂಡಿಯನ್ ಬ್ಯಾಂಕ್ ಲಿಮಿಟೆಡ್, ತ್ರಿಚೂರ್.
ಹೈದರಾಬಾದ್ ಸ್ಟೇಟ್ ಬ್ಯಾಂಕು.
ಭಾರತ ಸ್ಟೇಟ್ ಬ್ಯಾಂಕು.
ಜಯಪುರ ಸ್ಟೇಟ್ ಬ್ಯಾಂಕು.
ಪಟಿಯಾಲ ಸ್ಟೇಟ್ ಬ್ಯಾಂಕು.
ಸೌರಾಷ್ಟ್ರ ಸ್ಟೇಟ್ ಬ್ಯಾಂಕು.
ಸಿಂಡಿಕೇಟ್ ಬ್ಯಾಂಕು.
ತಂಜಾವೂರು ಪರ್ಮನೆಂಟ್ ಬ್ಯಾಂಕ್ ಲಿಮಿಟೆಡ್, ತಂಜಾವೂರು.
ತಮಿಳುನಾಡು ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮದರಾಸು.
ಟ್ರೇಡರ್ಸ್ ಬ್ಯಾಂಕ್ ಲಿಮಿಟೆಡ್.
ತಿರುವಾಂಕೂರು ಬ್ಯಾಂಕ್ ಲಿಮಿಟೆಡ್, ತ್ರಿವೇಂಡ್ರಂ ತಾಲೂಕು.
ಭಾರತ ಯೂನಿಯನ್ ಬ್ಯಾಂಕು, ಮುಂಬೈ.
ಭಾರತ ಯುನೈಟೆಡ್ ಬ್ಯಾಂಕು.
ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್, ಕಲ್ಕತ್ತಾ.
ಯುನೈಟೆಡ್ ಇಂಡಷ್ಟ್ರಿಯಲ್ ಬ್ಯಾಂಕು, ಕಲ್ಕತ್ತಾ.
ಯುನೈಟೆಡ್ ವೆಸ್ಟ್ರನ್ ಬ್ಯಾಂಕ್ ಲಿಮಿಟೆಡ್, ಸತಾರ.
ವಿಜಯ ಬ್ಯಾಂಕ್ ಲಿಮಿಟೆಡ್, ಮಂಗಳೂರು.
ವೈಶ್ಯ ಬ್ಯಾಂಕ್, ಬೆಂಗಳೂರು ನಗರ.
ಪಶ್ಚಿಮ ಬಂಗಾಳ ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಕಲ್ಕತ್ತಾ.
ಪ್ರಥಮ ಬ್ಯಾಂಕ್, ಮುರಾದಬಾದ್.
ಗೋರಖ್‌ಪುರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಗೋರಖ್‌ಪುರ್.
ಜಯಪುರ್ ನಾಗವರ್ ಅಂಚಲಕ್ ಗ್ರಾಮೀಣ ಬ್ಯಾಂಕ್, ಜಯಪುರ.
ಗೌರ್ ಗ್ರಾಮೀಣ ಬ್ಯಾಂಕ್, ಮಾಲ್ಡಾ.
ಹರಿಯಾಣ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಭವಾನಿ.
ಭೋಜ್‌ಪುರ್ ರೇಹತಾಜ್ ಗ್ರಾಮೀಣ ಬ್ಯಾಂಕ್, ಅರ್‍ಹಾ.
ಸಂಯುಕ್ತ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಅಜಂಗಢ.
ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಕುಷಂಗಾಬಾದ್.
ತುಂಗಭದ್ರ ಗ್ರಾಮೀಣ ಬ್ಯಾಂಕ್, ಬಳ್ಳಾರಿ.
ಪುರಿ ಗ್ರಾಮ್ಯ ಬ್ಯಾಂಕ್, ಪಿಪ್ಲಿ.
ಜಮ್ಮು ಗ್ರಾಮೀಣ ಬ್ಯಾಂಕ್, ಜಮ್ಮು.
ಚಂಪಾರಣ್ಯ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಮೋತಿಹಾರಿ.

ಬಾರಾಬಂಕಿ ಗ್ರಾಮೀಣ ಬ್ಯಾಂಕ್, ಬಾರಾಬಂಕಿ.
ಗುರ್‌ಗಾಂ ಗ್ರಾಮೀಣ ಬ್ಯಾಂಕ್, ಗುರ್‌ಗಾಂ.
ರಾಯಬರೇಲಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ರಾಯಬರೇಲಿ.
ಫರೂಕಾಬಾದ್ ಗ್ರಾಮೀಣ ಬ್ಯಾಂಕ್, ಫರೂಕಾಬಾದ್.
ಮೇಲಾಭಂ ಗ್ರಾಮೀಣ ಬ್ಯಾಂಕ್, ಬಾಂಕೂರ.
ಬೋಲಂಗೀರ್ ಅಂಚಲಿಕ್ ಗ್ರಾಮ್ಯ ಬ್ಯಾಂಕ್, ಬೋಲಂಗೀರ್.
ನಾಗಾರ್ಜುನ್ ಗ್ರಾಮೀಣ ಬ್ಯಾಂಕ್, ಖಮ್ಮಂ.
ಪ್ರಾಗ್ ಜೋತಿಷ್ ಗಾಂವ್‌ವಿಯಾ ಬ್ಯಾಂಕ್, ನಲಬಾರಿ.
ರಾಯಲಸೀಮಾ ಗ್ರಾಮೀಣ ಬ್ಯಾಂಕ್, ಕಡಪ.
ಮಯೂರಾಕ್ಷಿ ಗ್ರಾಮೀಣ ಬ್ಯಾಂಕ್, ಸೂರಿ.
ಮಲಪ್ರಭಾ ಗ್ರಾಮೀಣ ಬ್ಯಾಂಕ್, ಧಾರವಾಡ.
ಮರಾಠವಾಡ ಗ್ರಾಮೀಣ ಬ್ಯಾಂಕ್, ನಾಂದೇಡ್.
ಮಾರಾವಾರ್ ಗ್ರಾಮೀಣ ಬ್ಯಾಂಕ್, ಪಾಲಿ.
ಭಗೀರಥ ಗ್ರಾಮೀಣ ಬ್ಯಾಂಕ್, ಸೀತಾಪುರ್.
ವಿಶಾಖ ಗ್ರಾಮೀಣ ಬ್ಯಾಂಕ್, ಶ್ರೀಕಾಕುಲಂ.
ಕಾವೇರಿ ಗ್ರಾಮೀಣ ಬ್ಯಾಂಕ್, ಮೈಸೂರು.
ಶೇಖಾವಟಿ ಗ್ರಾಮೀಣ ಬ್ಯಾಂಕ್, ಸಿಕಾರ್.
ಕಟಕ್ ಗ್ರಾಮ್ಯ ಬ್ಯಾಂಕ್, ಕಟಕ್.
ಬಿಲಾಸ್‌ಪುರ್- ರಾಯಪುರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್ ಬಿಲಾಸ್‌ಪುರ್.
ಮಗದ್ ಗ್ರಾಮೀಣ ಬ್ಯಾಂಕ್, ಗಯಾ.
ಕೇರಾಪುಟ್- ಪಂಚವಟಿ ಗ್ರಾಮ್ಯ ಬ್ಯಾಂಕ್, ಜೈಪುರ್.
ದಕ್ಷಿಣ ಮಲಬಾರ್ ಗ್ರಾಮೀಣ ಬ್ಯಾಂಕ್, ಕೆನಾನೂರ್.
ರೀವಾ- ಸಿದ್ಧಿ ಗ್ರಾಮೀಣ ಬ್ಯಾಂಕ್, ರೀವಾ.
ತ್ರಿಪುರ ಗ್ರಾಮೀಣ ಬ್ಯಾಂಕ್, ಅಗರ್‌ತಲ.
ಕೋಸಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಪೂರ್ಣಿಯಾ.
ಹಿಮಾಚಲ ಗ್ರಾಮೀಣ ಬ್ಯಾಂಕ್, ಮಂಡಿ.
ಬಲಿಯಾ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಬಲಿಯಾ.
ಹರದೋಯಿ- ಉನ್ನೋ ಗ್ರಾಮೀಣ ಬ್ಯಾಂಕ್, ಹರದೋಯಿ.
ಕೃಷ್ಣ ಗ್ರಾಮೀಣ ಬ್ಯಾಂಕ್, ಗುಲ್ಬರ್ಗಾ.
ಕಚ್ ಗ್ರಾಮೀಣ ಬ್ಯಾಂಕ್, ಭೂಜ್.
ಜಾಂನಗರ್ ಗ್ರಾಮೀಣ ಬ್ಯಾಂಕ್, ಜಾಮ್‌ನಗರ್.

ಮರುಧಾರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಚುರು.
ನಳಂದಾ ಗ್ರಾಮೀಣ ಬ್ಯಾಂಕ್, ಬಿಹಾರ್ ಷರೀಫ್.
ಸಿಂಘ್‌ಭೂಮ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಜಯಬಾಸ್.
ಮಧುಬನಿ ಕ್ಷೇತ್ರೀಯ ಗಾಮೀಣ ಬ್ಯಾಂಕ್, ಮಧುಬನಿ.
ಶಾರದಾ ಗ್ರಾಮೀಣ ಬ್ಯಾಂಕ್, ಸಂತ.
ಇಲಾಖಿಯಂ ದೇಹಾತಿ ಬ್ಯಾಂಕ್, ಶ್ರೀನಗರ್.
ಸರಗೂಜ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಅಂಬಿಕಾಪುರ್, ಮಧ್ಯಪ್ರದೇಶ್.
ಶ್ರೀ ಅನಂತಾ ಗ್ರಾಮೀಣ ಬ್ಯಾಂಕ್, ಅನಂತಪುರ್.
ಬಸ್ತಾರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಜಗದಲ್‌ಪುರ್.
ಕಾನ್‌ಪುರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಕಾನ್‌ಪುರ್.
ಶ್ರಾವಸ್ತಿ ಗ್ರಾಮೀಣ ಬ್ಯಾಂಕ್, ಭರೈಜ್.
ದುರ್ಗ- ರಾಜನಂದಗಾಂ ಗ್ರಾಮೀಣ ಬ್ಯಾಂಕ್, ರಾಜನಂದಗಾಂ.
ಮಿಥಿಲಾ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ದರ್ಭಂಗಾ.
ಇಟಾವ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಇಟಾವ, ಉತ್ತರಪ್ರದೇಶ.
ಸಮಷ್ಠಿಪುರ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಸಮಷ್ಠಿಪುರ.
ಪಲಾಮಾವ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಡಾಲ್ಟನ್‌ಗಂಜ್.
ಕಿಸಾನ್ ಗ್ರಾಮೀಣ ಬ್ಯಾಂಕ್, ಬೂಡಾನ್, ಉತ್ತರಪ್ರದೇಶ.
ಕ್ಷೇತ್ರೀಯ ಕಿಸಾನ್ ಗ್ರಾಮೀಣ ಬ್ಯಾಂಕ್, ಮಂಲಿನ್‌ಪುರಿ, ಉತ್ತರಪ್ರದೇಶ.
ಆಲ್‌ಬಂದಿ ಅಂಚಲಿಕ್ ಗ್ರಾಮ್ಯ ಬ್ಯಾಂಕ್, ಭವಾನಿಪುರ್, ಒರಿಸ್ಸಾ.
ಜಾಬ್‌ವಾ- ಧಾಕ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಜಾಬ್‌ವಾ, ಮಧ್ಯಪ್ರದೇಶ.
ರಾಂಚಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ರಾಂಚಿ, ಬಿಹಾರ್.
ಬೈತಾರುಣಿ ಗ್ರಾಮ್ಯ ಬ್ಯಾಂಕ್, ಪಾರಿಪಾಲಿ, ಒರಿಸ್ಸಾ.
ಕಾಶಿ ಗ್ರಾಮೀಣ ಬ್ಯಾಂಕ್, ವಾರಣಾಸಿ, ಉತ್ತರಪ್ರದೇಶ.
ಲಾಖಿಮಿ ಗೋಂಡ್ಲಿಮಾ ಬ್ಯಾಂಕ್, ಗೋಲಾಘಾಟ್, ಅಸ್ಸಾಂ.
ಬಸ್ತಿ ಗ್ರಾಮೀಣ ಬ್ಯಾಂಕ್, ಬಸ್ತಿ, ಉತ್ತರಪ್ರದೇಶ.
ಬಾಲಾಸು ಗ್ರಾಮ್ಯ ಬ್ಯಾಂಕ್, ಬಾಲಾಸು, ಒರಿಸ್ಸಾ.
ಅಲಹಾಬಾದ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಅಲಹಾಬಾದ್, ಉತ್ತರಪ್ರದೇಶ.
ಪ್ರತಾಫ್ ಘರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಪ್ರತಾಫ್‌ಘರ್, ಉತ್ತರಪ್ರದೇಶ.
ನಾದಿಯಾ ಗ್ರಾಮೀಣ ಬ್ಯಾಂಕ್, ಕೃಷ್ಣಘರ್, ಉತ್ತರಪ್ರದೇಶ.
ಫೈಜಾಬಾದ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಫೈಜಾಬಾದ್, ಉತ್ತರಪ್ರದೇಶ.
ಫಥೇಪುರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಫಥೇಪುರ್, ಉತ್ತರಪ್ರದೇಶ.

ಸಾಗರ್ ಗ್ರಾಮೀಣ ಬ್ಯಾಂಕ್, ಅಂತಾಲ, ಪಶ್ಚಿಮ ಬಂಗಾಲ.
ಬರೇಲಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಬರೇಲಿ, ಉತ್ತರಪ್ರದೇಶ.
ದೇವಿಪಟಣ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಗೋಂಡಾ.
ರಾಯಘರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ರಾಯಪುರ್, ಮಧ್ಯಪ್ರದೇಶ.
ಋಷಿ ಕುಲಿಯಾ ಗ್ರಾಮ್ಯ ಬ್ಯಾಂಕ್, ಬರ್ಹಾಂಪುರ್, ಒರಿಸ್ಸಾ.
ಆಳ್ವಾರ್ - ಭಾರತ್‌ಪುರ್ ಅಂಚಲಿಕ್ ಗ್ರಾಮೀಣ ಬ್ಯಾಂಕ್, ಭಾರತ್‌ಪುರ್, ರಾಜಸ್ತಾನ್.
ಶ್ರೀ ವೆಂಕಟೇಶ್ವರ ಗ್ರಾಮೀಣ ಬ್ಯಾಂಕ್, ಚಿತ್ತೂರ್, ಆಂಧ್ರಪ್ರದೇಶ.
ಆಲೀಘರ್ ಗ್ರಾಮೀಣ ಬ್ಯಾಂಕ್, ಆಲೀಘರ್, ಉತ್ತರಪ್ರದೇಶ.
ತುಳಸಿ ಗ್ರಾಮೀಣ ಬ್ಯಾಂಕ್, ಬಾಂಡಾ, ಉತ್ತರಪ್ರದೇಶ.
ಗೋಪಾಲ್‌ಗಂಜ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಗೋಪಾಲ್‌ಗಂಜ್.
ಶಿವಪುರಿ-ಗುನಾ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಶಿವಪುರಿ, ಮಧ್ಯಪ್ರದೇಶ.
ಸರನ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಚಪಾರ, ಬಿಹಾರ್.
ಇಟಾ ಗ್ರಾಮೀಣ ಬ್ಯಾಂಕ್, ಇಟಾ, ಉತ್ತರಪ್ರದೇಶ.
ಗೋಮತಿ ಗ್ರಾಮೀಣ ಬ್ಯಾಂಕ್, ಜಾಂಪುರ್, ಉತ್ತರಪ್ರದೇಶ.
ದಾಮೋ-ಪನ್ನಾ-ಸಾಗರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ದಾಮೋ, ಮಧ್ಯಪ್ರದೇಶ.
ಕಾಚಾರ್ ಗ್ರಾಮೀಣ ಬ್ಯಾಂಕ್, ಸಿಲ್‌ಜಾ, ಅಸ್ಸಾಂ.
ಶಿವಾನ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಶಿವಾನ್, ಬಿಹಾರ್.
ಮಣಿಪುರ ರೂರಲ್ ಬ್ಯಾಂಕ್, ಇಂಫಾಲ್, ಮಣಿಪುರ್.
ಕುಮರಾಜ್ ಗ್ರಾಮೀಣ ಬ್ಯಾಂಕ್, ನೊಪೋರೆ, ಜಮ್ಮು ಮತ್ತು ಕಾಶ್ಮೀರ.
ಚಿತ್ರದುರ್ಗ ಗ್ರಾಮೀಣ ಬ್ಯಾಂಕ್, ಚಿತ್ರದುರ್ಗ,ಕರ್ನಾಟಕ.
ಡೆಂಕನಲ್ ಗ್ರಾಮ್ಯ ಬ್ಯಾಂಕ್, ಡೆಂಕನಲ್, ಒರಿಸ್ಸಾ.
ಅವರೋಳಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಸವಾಯಿ ಮಾಧೋಪುರ್, ರಾಜಸ್ತಾನ್.
ಬಾಣಸಕಾಂತ- ಮೆಹಸಾನ ಗ್ರಾಮೀಣ ಬ್ಯಾಂಕ್, ಪಾಟನ್, ಗುಜರಾತ್.
ಕ. ಬ್ಯಾಂಕ್ ನೋಂಗ್ ಕಿನ್ ಡೋಂಗ್ ರಿ ಖಾಸಿ ಜಂತ್ಯ, ಮೇಘಾಲಯ.
ಕಾರ್ಬಿಎಸ್‌ಸಿ ಗ್ರಾಮೀಣ ಬ್ಯಾಂಕ್, ದೀಪು, ಅಸ್ಸಾಂ
ಶ್ರೀ ಸರಸ್ವತಿ ಗ್ರಾಮೀಣ ಬ್ಯಾಂಕ್, ಅದಿಲಾಬಾದ್, ಆಂಧ್ರಪ್ರದೇಶ
ಸುಬನ್ ಶ್ರೀ ಗುಂವಲಿಯ ಬ್ಯಾಂಕ್, ಉತ್ತರ ಲಖ್ಮೆಪುರ್, ಅಸ್ಸಾಂ.
ಪಂಚಮಹಲ್ ಗ್ರಾಮೀಣ ಬ್ಯಾಂಕ್, ಗೋಧರ, ಗುಜರಾತ್.
ಛತ್ರಸಾಲ್ ಗ್ರಾಮೀಣ ಬ್ಯಾಂಕ್, ಒರಾಯಿ, ಉತ್ತರಪ್ರದೇಶ.
ದಿವಾಸ್, ಷಜಾಪುರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ದಿವಾಸ್, ಮಧ್ಯಪ್ರದೇಶ.
ಸಂಗಮೇಶ್ವರ ಗ್ರಾಮೀಣ ಬ್ಯಾಂಕ್, ಮಹಬೂಬ್ ನಗರ, ಆಂಧ್ರಪ್ರದೇಶ.

ಕಲ್ಪತರು ಗ್ರಾಮೀಣ ಬ್ಯಾಂಕ್, ತುಮಕೂರು, ಕರ್ನಾಟಕ.

ರಾಣಿ ಲಕ್ಷ್ಮೀ ಬಾಯಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಝಾಂಸಿ, ಉತ್ತರಪ್ರದೇಶ.

ಮಂಜಿರ್ ಗ್ರಾಮೀಣ ಬ್ಯಾಂಕ್, ಸಂಗರೆಡ್ಡಿ, ಆಂಧ್ರಪ್ರದೇಶ.

ಪಿನಾಕಿನಿ ಗ್ರಾಮೀಣ ಬ್ಯಾಂಕ್, ನೆಲ್ಲೂರ, ಆಂಧ್ರಪ್ರದೇಶ.

ಹೌರಾ ಗ್ರಾಮೀಣ ಬ್ಯಾಂಕ್, ಹೌರಾ, ಪಶ್ಚಿಮ ಬಂಗಾಳ.

ನಿಮಾರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಖರ್ಗೋನ್, ಮಧ್ಯಪ್ರದೇಶ.

ಕಾಕತೀಯ ಗ್ರಾಮೀಣ ಬ್ಯಾಂಕ್, ವಾರಂಗಲ್, ಆಂಧ್ರಪ್ರದೇಶ.

ಹಡೋಲಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಕೋಟಾ, ರಾಜಸ್ತಾನ.

ಮಂಡ್ಲ, ಬಲಘಟ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಮಂಡ್ಲ, ಮಧ್ಯಪ್ರದೇಶ.

ಔರಂಗಾಬಾದ್-ಜಲ್ನಾ ಗ್ರಾಮೀಣ ಬ್ಯಾಂಕ್, ಔರಂಗಾಬಾದ್, ಮಹಾರಾಷ್ಟ್ರ.

ಬಿದುರ್ ಗ್ರಾಮೀಣ ಬ್ಯಾಂಕ್, ಬಿಜನೂರ್, ಉತ್ತರಪ್ರದೇಶ.

ಬಿನ್‌ದ್ವಾರ್-ಸಿಯೋನಿ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಬಿನ್‌ದ್ವಾರ್, ಮಧ್ಯಪ್ರದೇಶ.

ಮೇವಾರ್ ಅಂಚಲಿಕ್ ಗ್ರಾಮೀಣ ಬ್ಯಾಂಕ್, ಉದಯಪುರ, ರಾಜಸ್ತಾನ.

ಥಾರ್ ಅಂಚಲಿಕ್ ಗ್ರಾಮೀಣ ಬ್ಯಾಂಕ್, ಜೋಧ್‌ಪುರ್, ರಾಜಸ್ತಾನ.

ಚಂದ್ರಾಪುರ್-ಗಡ್ ಚರೋಲಿ ಗ್ರಾಮೀಣ ಬ್ಯಾಂಕ್, ಚಂದ್ರಾಪುರ್, ಮಹಾರಾಷ್ಟ್ರ.

ಕೋಲಾರ ಗ್ರಾಮೀಣ ಬ್ಯಾಂಕ್, ಕೋಲಾರ, ಕರ್ನಾಟಕ.

ರಾಜ್‌ಘರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಬಿಯೋರ್, ರಾಜಘರ್, ಮಧ್ಯಪ್ರದೇಶ.

ಷಹಜಾನ್‌ಪುರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಷಹಜಾನ್‌ಪುರ್, ಉತ್ತರಪ್ರದೇಶ.

ಚೈತನ್ಯ ಗ್ರಾಮೀಣ ಬ್ಯಾಂಕ್, ತೆನಾಲಿ,ಗುಂಟೂರು, ಆಂಧ್ರಪ್ರದೇಶ.

ನೈನಿತಾಲ್- ಅಲ್ಮೋರ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ನೈನಿತಾಲ್, ಉತ್ತರಪ್ರದೇಶ.

ಶ್ರೀ ಶಾತವಾಹನ ಗ್ರಾಮೀಣ ಬ್ಯಾಂಕ್, ಕರೀಂನಗರ್, ಆಂಧ್ರಪ್ರದೇಶ.

ಕಪೂರ್‌ತಾಲ್-ಫಿರೋಜ್‌ಪುರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಕಪೂರ್‌ತಾಲ್, ಪಂಜಾಬ್.

ವಿಂಧ್ಯವಾಹಿನಿ ಗ್ರಾಮೀಣ ಬ್ಯಾಂಕ್, ಮೀರ್‌ಜಾಪುರ್, ಉತ್ತರಪ್ರದೇಶ.

ನಾಗಾಲ್ಯಾಂಡ್ ರೂರಲ್ ಬ್ಯಾಂಕ್, ಕೋಹಿಮಾ, ನಾಗಾಲ್ಯಾಂಡ್.

ಗುರುದಾಸ್‌ಪುರ್-ಅಮೃತ್‌ಸರ್ ಕ್ಷೇತ್ರೀಯ ಗ್ರಾಮೀಣ ವಿಕಾಸ್ ಬ್ಯಾಂಕ್, ಗುರುದಾಸ್‌ಪುರ್, ಪಂಜಾಬ್.

ಬಿಜಾಪುರ್ ಗ್ರಾಮೀಣ ಬ್ಯಾಂಕ್, ಬಿಜಾಪುರ, ಕರ್ನಾಟಕ.

ಷಹದೇವ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಷಹದೇವ್, ಮಧ್ಯಪ್ರದೇಶ.

ಸರಯು ಗ್ರಾಮೀಣ ಬ್ಯಾಂಕ್, ಲಿಖ್ಮಿಪುರ್, ಉತ್ತರಪ್ರದೇಶ.

ಮಿಜೋರಾಂ ರೂರಲ್ ಬ್ಯಾಂಕ್, ಐಗ್ವಾಲ್, ಮಿಜೋರಾಂ.

ಅಕೋಲ ಗ್ರಾಮೀಣ ಬ್ಯಾಂಕ್, ಅಕೋಲ, ಮಹಾರಾಷ್ಟ್ರ.

ರತ್ಲಂ–ಮಂದ್‌ಸೌರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಮಂದ್‌ಸೌರ್, ಮಧ್ಯಪ್ರದೇಶ.

ರತ್ನಗಿರಿ–ಸಿಂಧು ದುರ್ಗ್ ಗ್ರಾಮೀಣ ಬ್ಯಾಂಕ್, ರತ್ನಗಿರಿ, ಮಹಾರಾಷ್ಟ್ರ.

ಅರುಣಾಚಲ ಪ್ರದೇಶ ರೂರಲ್ ಬ್ಯಾಂಕ್, ಪಸಿಘಾಟ್, ಅರುಣಾಚಲ ಪ್ರದೇಶ.

ಜಮುನಾ ಗ್ರಾಮೀಣ ಬ್ಯಾಂಕ್, ಆಗ್ರಾ,ಉತ್ತರಪ್ರದೇಶ.

ಸುರೇಂದ್ರ ನಗರ– ಭಾವನಗರ್ ಗ್ರಾಮೀಣ ಬ್ಯಾಂಕ್, ಭಾವನಗರ್, ಗುಜರಾತ್.

ಸೋಲಾಪುರ್ ಗ್ರಾಮೀಣ ಬ್ಯಾಂಕ್, ಸೋಲಾಪುರ್, ಮಹಾರಾಷ್ಟ್ರ.

ಭಂಡಾರ ಗ್ರಾಮೀಣ ಬ್ಯಾಂಕ್, ಭಂಡಾರ, ಮಹಾರಾಷ್ಟ್ರ.

ಚಂಬಲ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಮೊರೇನಾ, ಮಧ್ಯಪ್ರದೇಶ.

ವಲ್‌ಸಾದ್– ಡಾಂಗ್ಸ್ ಗ್ರಾಮೀಣ ಬ್ಯಾಂಕ್, ಬುಲ್‌ಸಾರ್, ಗುಜರಾತ್.

ಸೂರತ್–ಭರೂಚ್ ಗ್ರಾಮೀಣ ಬ್ಯಾಂಕ್, ದ್ರೋಚ್, ಗುಜರಾತ್.

ಬುಂದಿ, ಚಿತ್ತೋಘರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಬುಂದಿ, ರಾಜಸ್ತಾನ್.

ಭಿಲ್‌ವಾರ–ಅಜ್ಮೀರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಭಿಲ್‌ವಾರ, ರಾಜಸ್ತಾನ್.

ಡುಂಗರ್‌ಪುರ್– ಬನಸ್‌ವಾರ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಡುಂಗರ್‌ಪುರ್, ರಾಜಸ್ತಾನ್.

ಶ್ರೀ ಗಂಗಾನಗರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಶ್ರೀ ಗಂಗಾನಗರ್, ರಾಜಸ್ತಾನ್.

ಗಿರಿಡಿಹ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಗಿರಿಡಿಹ್, ಬಿಹಾರ್.

ಮುಜಾಫರ್‌ನಗರ್ ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್, ಮುಜಾಫರ್‌ನಗರ್, ಉತ್ತರಪ್ರದೇಶ.

ಸಬರ್‌ಕಾಂತ–ಗಾಂಧಿನಗರ್ ಗ್ರಾಮೀಣ ಬ್ಯಾಂಕ್, ಹಿಮ್ಮತ್ ನಗರ್, ಗುಜರಾತ್.

ಸಹ್ಯಾದ್ರಿ ಗ್ರಾಮೀಣ ಬ್ಯಾಂಕ್, ಶಿವಮೊಗ್ಗ, ಕರ್ನಾಟಕ.

**ಮೂರನೇ ಅನುಸೂಚಿ:–** ಭಾರತ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 (1955ರ XXIII)ರ 52ನೇ ಪ್ರಕರಣ ಮತ್ತು IIIನೇ ಅನುಸೂಚಿಯ ಮೂಲಕ ನಿರಸನಗೊಂಡಿದೆ.

**ನಾಲ್ಕನೇ ಅನುಸೂಚಿ:–** ರಿಸರ್ವ್ ಬ್ಯಾಂಕ್ (ಸಾರ್ವಜನಿಕ ಒಡೆತನಕ್ಕೆ ವರ್ಗಾಯಿಸುವುದು) ಅಧಿನಿಯಮ, 1948 (1948ರ LXII)ರ 7ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ (1.1.1948 ರಿಂದ ಜಾರಿಗೆ ಬರುವಂತೆ) ನಿರಸನಗೊಂಡಿದೆ.

**ಐದನೇ ಅನುಸೂಚಿ:–** ಭಾರತ ಮತ್ತು ಬರ್ಮ (ಬರ್ಮ ಹಣಕಾಸು ಏರ್ಪಾಟುಗಳು) ಆದೇಶ, 1937, ಭಾಗ III, ಪ್ಯಾರಾ I ಮತ್ತು IIIನೇ ಅನುಸೂಚಿಯ ಮೂಲಕ ನಿರಸನಗೊಂಡಿದೆ.

*******